ಬೀದರ | ಕಲಬುರಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಸಾರ Postal Reg. No. BDR/054/2026-2027 Email: mallammanudi@gmail.com E-paper: www.mallammanudi.in

# ಮಲ್ಲಮ್ಮ ನುಡಿ

ಪ್ರಾದೇಶಿಕ ಕನ್ನಡ ದಿನಪತ್ರಿಕೆ

ಸಂಪಾದಕರು: **ರಮೇಶರೆಡ್ಡಿ** | **9448 604450**

Mallammanudi Regional News Paper | Editor: Ramesh Reddy | RNI NO:KARKAN/2011/48371

VOLUME-ಸಂಪುಟ:12 | ISSUE- ಸಂಚಿಕೆ: 354 | PAGE-ಪುಟ 12 | ಭಾನುವಾರ 26.01.2025 | RS.ಬೆಲೆ 2/-



# ಬೇಡಿದ ವರ ನೀಡುವ ಹುಮನಾಬಾದಿನ ಶ್ರೀ ವೀರಭದ್ರೇಶ್ವರ ದೇವರು

## ಲಕ್ಷಾಂತರ ಭಕ್ತಾಧಿಗಳ ಮಧ್ಯೆ ಜರಗುತ್ತಿರುವ ಶ್ರೀ ವೀರಭದ್ರೇಶ್ವರ ಪಲ್ಲಕ್ಕಿ ಮಹೋತ್ಸವ



ಮಲ್ಲಮ್ಮ ನುಡಿ ವಾರ್ತೆ
**(ವಿಶೇಷ ವರದಿ)**

ಹುಮನಾಬಾದ:ಕರ್ನಾಟಕ ರಾಜ್ಯದಲ್ಲಿ ವೀರಭದ್ರಶ್ವರಜಾತ್ರೆ ಎಂದು ಹೇಳಿದರೆ ಸಾಕು ಎಲ್ಲರಿಗೂ ನೆನಪಾಗುವುದು ಹುಮನಾಬಾದ್ ಪಟ್ಟಣ. ಈ ಪಟ್ಟಣದಆರಾಧ್ಯದೈವವಾಗಿರುವ ವೀರಭದ್ರೇಶ್ವರ ದೇವರು ದುಷ್ಟರ ಸಂಹಾರಕ ಶಿಷ್ಟರ ಪರಿಪಾಲಕನಾಗಿದ್ದಾನೆ ಎನ್ನುವ ನಂಬಿಕೆ ಇಲ್ಲಿನ ಭಕ್ತರದ್ದಾಗಿದೆ.



ವೀರಭದ್ರೇಶ್ವರ ದೇವಸ್ಥಾನ ಸಾವಿರಾರುವರ್ಷಗಳಐತಿಹಾಸಿಕ ಹಿನ್ನಲೆಯನ್ನು ಹೊಂದಿದ ಧಾರ್ಮಿಕ ಕೇಂದ್ರವಾಗಿದೆ. ಈ ಭಾಗದಲ್ಲಿ ವೀರಭದ್ರಶ್ವರದೇವರ ಮಹಿಮೆ ಕೊಂಡಾಡುವ ಭಕ್ತರು ಭಕ್ತಿಯಿಂದ ಪೂಜಿಸುತ್ತಾ ನಂಬಿಕೆ ಇಟ್ಟುಕೊಂಡು ಬರುವ ಸಂಪ್ರದಾಯವಿದೆ.

ಇಲ್ಲಿನ ವೀರಭದ್ರೇಶ್ವರದೇವ ರಜಾತ್ರೆಯ ಅಂಗವಾಗಿ 15 ದಿನಗಳ ಕಾಲ ವಿವಿಧಧಾರ್ಮಿಕ ಕಾರ್ಯಕ್ರಮಗಳ ಜರುಗುತ್ತವೆ. ಜತಗೆ 13 ದಿನಗಳ ಕಾಲ ಉತ್ಸವ ಮೂರ್ತಿಯ ಮೆರವಣಿಗೆಅದ ದ್ದೂರಿಯಾಗಿಜರುಗುತ್ತದೆ.ಜಾತ್ರೆ ನಿಮಿತ್ತಜರುಗುವರಥೋತ್ಸವ ಕ್ಕೆದೂರದಊರಿನ ಭಕ್ತರು, ಸ್ಥಳೀಯರ ಸಂಬಂಧಿಗಳು, ನಗರ ಪ್ರದೇಶಗಳಲ್ಲಿ ಕೆಲಸ ಮಾಡುವ ಸ್ಥಳೀಯರು ಐತಿಹಾಸಿಕ ಜಾತ್ರೆ ವಿಕ್ಷೀಸಲು ಬಂದು ಹೋಗುತ್ತಾರೆ.

ದೇವಸ್ಥಾನದ ಇತಿಹಾಸ

ಜಯಸಿಂಹನಗರ ಎಂಬುದು ಹುಮನಾಬಾದ್ ಪಟ್ಟಣದ ಐತಿಹಾಸಿಕ ಹೆಸರು. ಅಂ-ದು ಈ ಭಾಗದಲ್ಲಿ ಆಳ್ವಿಕೆ ನಡೆಸಿದ ರಾಜಾ ರಾಮಚಂದ್ರ ಈ ಐತಿಹಾಸಿಕ ವೀರಭದ್ರೇಶ್ವರ ದೇಗಲು ನಿರ್ಮಾತೃ ಎಂದು ಹೇಳಲಾಗುತ್ತದೆ. ಅತ್ಯುತ್ತಮ ಶಿಲ್ಪ ತಜ್ಞನಾಗಿದ್ದ ರಾಜಾ ರಾಮಚಂದ್ರ ತನ್ನ ಆಡಳಿತಾವಧಿಯಲ್ಲಿ ಹೊಸ ಹೊಸ ದೇವಸ್ಥಾನಗಳನ್ನು ನಿರ್ಮಿಸುವಲ್ಲಿ ಅತೀವ ಆಸಕ್ತಿ ಹೊಂದಿದ್ದ ಎನ್ನುವ ಇತಿಹಾಸವಿದೆ.

ವೀರಭದ್ರೇಶ್ವರ ದೇವಸ್ಥಾನ ನಿರ್ಮಿಸಿದ ನಂತರ ಗರ್ಭ ಗುಡಿಯಲ್ಲಿಪ್ರತಿಮೆಪ್ರತಿಷ್ಠಾಪಿಸುವ ದಿನ ಸಮೀಪಿಸಿದಾಗ ರಾಜಾ ರಾಮಚಂದ್ರನ ಕನಿಸಿನಲ್ಲಿ ಸ್ವತಃ ವೀರಭದ್ರೇಶ್ವರ ದೇವರು ಬಂದು ತಾಲೂಕಿನ ಗಡವಂತಿ ಗ್ರಾಮದ ದೇವಸ್ಥಾನದಲ್ಲಿ ಇರುವ ತನ್ನ ಮೂರ್ತಿಯನ್ನುಪ್ರತಿಸ್ಥಾಪಿಸುವಂತೆ ಆಜ್ಞಾಪಿಸಿದನಂತೆ. ಕನಸಿನಲ್ಲಿ ಆದ ದಿವ್ಯ ದರ್ಶನದಿಂದ ಚಕಿತನಾದ ರಾಜ, ಭಗವಂತನ ಆಜ್ಞೆಯಂತೆ ಗಡವಂತಿ ಗ್ರಾಮಕ್ಕೆ ತೆರಳಿ ವೀರಭದ್ರೇಶ್ವರ ಮೂರ್ತಿ ತಂದು ಅಂದಿನ ಜಯಸಿಂಹ ನಗರದ ವೀರಭದ್ರೇಶ್ವರ ದೇವಸ್ಥಾನದಲ್ಲಿ ವಿಧಿ ವಿಧಾನಗಳಂತೆ ಪೂಜೆ ಸಲ್ಲಿಸಿ ಪ್ರತಿಷ್ಠಾಪನೆ ಕಾರ್ಯಕ್ರಮ ನೆರವೇರಿಸಿದ ಎಂಬ ಪ್ರತೀತಿ ಇದೆ.

**ನೋಡಬನ್ನಿ ವೀರಭದ್ರೇಶ್ವರ ದೇವಸ್ಥಾನದ ಶಿಲ್ಪಕಲೆ**

ಬೀದರಜಿಲ್ಲೆಯಹುಮನಾಬಾದ್ ಪಟ್ಟಣದ ವೀರಭದ್ರೇಶ್ವರ ದೇವಸ್ಥಾನದ ಗೋಪುರದಲ್ಲಿ ಕೆತ್ತನೆ ಮಾಡಲಾದ ಶಿಲ್ಪಕಲೆ ವಿವಿಧೆಡೆಯಿಂದ ಆಗಮಿಸುವ ಪ್ರವಾಸಿಗರನ್ನು ತನ್ನತ್ತ ಸೆಳೆಯುತ್ತಿದೆ.

ತೆಲಂಗಾಣ,ಮಹಾರಾಷ್ಟ್ರ,ಆಂದ್ರ ಪ್ರದೇಶ ಹಾಗೂ ಕರ್ನಾಟಕ ರಾಜ್ಯದ ನಾನಾ ಜಿಲ್ಲೆಗಳ ಭಕ್ತಾಧಿಗಳು ವೀರಭದ್ರೇಶ್ವರ ಜಾತ್ರೆಗೆ ಬಂದು ಹೋಗುತ್ತಾರೆ. ಅದಕ್ಕೂಮಿಗಿಲಾಗಿವೀರಭದ್ರೇಶ್ವರ ದೇವಸ್ಥಾನದ ಅತ್ಯಕರ್ಷಕ ಶಿಲ್ಪಕಲೆಗಳನ್ನು ನೋಡಿ ಕಣ್ತುಂಬಿಕೊಳ್ಳುತ್ತಾರೆ.

ಜಯಸಿಂಹ ನಗರದ ಈ ದೇವಸ್ಥಾನದಲ್ಲಿ ಅಪ್ಪಟ ಭಾರತೀಯ ವಾಸ್ತುಶಿಲ್ಪದ ಅತ್ಯಂತ ತ್ರಿಕೂಟ ಗರ್ಭಗಡಿ ಹಾಗೂ ಮೇಲ್ಭಾಗದಲ್ಲಿ ಏಕೈಕ ಶಿಖರವಿರುವುದು. ಶಿಲ್ಪಕಲೆಯುಳ್ಳ 16 ಕಂಬಗಳ ಮಧ್ಯೆ ವಿಗ್ರವಿದೆ. 16 ಕಂಬಗಳ ಮುಂಭಾಗದಲ್ಲಿ ಅನೇಕ ವರ್ಷಗಳ ಹಿಂದೆ ನಿರ್ಮಿಸಿಲಾದ ದೇವಸ್ಥಾನದ ಮುಖ್ಯದ್ವಾರವು ದೂರದಿಂದಲೇ ಭಕ್ತರಿಗೆ ಕಾಣುವಂತೆ ನಿರ್ಮಿಸಿರುವುದು ಬಹಳ ವಿಶೇಷವಾಗಿದೆ.

ಬಹಳಹಳೆಯಮಾದರಿಯಲ್ಲಿ ಕೆತ್ತನೆಯಿಂದ ಕೂಡಿರುವ ವೀರಭದ್ರೇಶ್ವರದೇವಸ್ಥಾನದಲ್ಲಿ ಅತ್ಯಾಕರ್ಷಕ ಮಂಟಪ, ನಂದಿ ವಿಗ್ರಹ, 16 ಕಂಬಗಳು ಹಾಗೂ ದೇವಸ್ಥಾನದ ಎಡಭಾಗದಲ್ಲಿ ಲಿಂಗ ಪ್ರತಿಷ್ಠಾಪಿಸಲಾಗಿದೆ.



ದೇವಾಲಯಕ್ಕೆ ಎರಡು ಭವ್ಯವಾದ ಮುಖ್ಯದ್ವಾರಗಳಿದ್ದು, ಶಿಖರದ ಸುತ್ತಲೂ ಹಲವು ಪೌರಾಣಿಕ ಸನ್ನಿವೇಶಗಳ ಮಾಹಿತಿ ನೀಡುವ ಮೂರ್ತಿಗಳಿವೆ.

ಗೋಪುರದ ಮೇಲೆ ಕಳಶ, ನಾಲ್ಕು ದಿಕ್ಕಿನ ಮೂಲೆಗಳಲ್ಲಿ ನಂದಿ ವಿಗ್ರಹ ಪ್ರತಿಷ್ಠಾಪಿಸಲಾಗಿದೆ. ಭಕ್ತರಿಗಾಗಿ ಪ್ರಸಾದ ವ್ಯವಸ್ಥೆ ಕಲ್ಪಿಸುವ ಭೋಜನ ಸಾಲುಗಳು, 9 ವಾದ್ಯಗಳು ಸೇವೆ ಇರುವುದು. ಜತಗೆ ಪೂರ್ವ ದಿಕ್ಕಿನಲ್ಲಿ ಮಾಲಗಂಭಗಳಿದ್ದು, ಅದರಲ್ಲಿ ಎಡಬಾಗದ ಮಾಲಗಂಭಕೊನೆಯ ಭಾಗ ಹಿಡುದು ಅಲ್ಲಾಡಿಸಿದರೆ ಅಲ್ಲಾಡುವ ಚಮತ್ಕಾರನಿಂದಿಗೂ ಸಹ ನೋಡಲು ಸಿಗುತ್ತದೆ.

ನಾಗರಶೈಲಿ-ದ್ರಾವಿಡ್ ಪದ್ಧತಿಯ ವೀರಭದ್ರೇಶ್ವರದೇವಸ್ಥಾನ

ಹುಮನಾಬಾದ್ : ಪಟ್ಟಣದ ಐತಿಹಾಸಿಕ ವೀರಭದ್ರೇಶ್ವರದೇ ವಸ್ಥಾನ ಉತ್ತರದ ನಾಗರಶೈಲಿ ಹಾಗೂ ದಕ್ಷಿಣ ದ್ರಾವಿಡ್ ಪದ್ಧತಿಗಳ ಸಂಗಮವಿದೆ. ಗರ್ಭಗೋಪುರ ಹಿಮಾಲಯದ ಕೇದಾರ, ಓರಿಸ್ಸಾದ ಭುವನೇಶ್ವರಿ ದೇವಸ್ಥಾನಗಳನ್ನು ನೆನಪಿಗೆ ತರಸಿದರೆ, ದೇವಸ್ಥಾನದ ಮುಖ್ಯದ್ವಾರದ ಮೇಲ್ಗೋಡೆಯ ಮೇಲಿನ ವಿನ್ಯಾಸ ದಕ್ಷಿಣ ಮಧುರೈ, ಕಾಂಚಿ ದೇವಸ್ಥಾನಗಳು ನೆನಪಿಗೆ ಬರುವಂತಿದೆ.

ಪ್ರತಿವರ್ಷ ಶ್ರಾವಣ ಮಾಸದಲ್ಲಿ ಹಿರೇಮಠದ ಪೀಠಾಧಿಪತಿ ರೇಣುಕ ವೀರಗಂಗಾಧರ ಶಿವಚಾರ್ಯರ ಸಾನಿಧ್ಯದಲ್ಲಿ ದಿನನಿತ್ಯ ಸಂಗೀತ ಹಾಗೂ ರುದ್ರಾಭಿಷೇಕ ಪೂಜೆ ಸಲ್ಲಿಸಲಾಗುತ್ತದೆ.

ದಸರಾ, ವಿಜಯದಶಮಿಯಂದು ಕೂಡಾ ವೀರಭದ್ರೇಶ್ವರ ದೇವರ ಪಲ್ಲಕ್ಕಿ ಮೆರವಣಿಗೆ ಉತ್ಸವ ಅದ್ದೂರಿಯಾಗಿ ಜರಗುತ್ತದೆ. ಸಂಕ್ರಾಂತಿ ಹಬ್ಬದಂದು ಪ್ರಾರಂಭಗೊಳ್ಳುವ ಐತಿಹಾಸಿಕ ವೀರಭದ್ರೇಶ್ವರ ಜಾತ್ರಾ ಮಹೋತ್ಸವದಲ್ಲಿ ಪಲ್ಲಕ್ಕಿ ಮೆರವಣಿಗೆ ನಡೆಯುವ ವಾಡಿಕೆ ಇದೆ.



**ದೇವರ ಸರಳ ಅಲಂಕಾರಿಕ ಮೆರವಣಿಗೆ**

ಐತಿಹಾಸಿಕ ವೀರಭದ್ರೇಶ್ವರ ಜಾತ್ರಾ ಮಹೋತ್ಸವ ನಿಮಿತ್ತ ಜ. 15ರಿಂದ 19ರ ವರೆಗೆ ಸರಳವಾದ ಅಲಂಕಾರ ಮೆರವಣಿಗೆ ಹಾಗೂ ಆನೆಯ ಮೆರವಣಿಗೆ ಜರುಗಿತು. ಜ. 20ರಿಂದ 24ರ ವರೆಗೆ ದೇವರ ಪಲ್ಲಕ್ಕಿ ಮತ್ತು ಉಚಾಯಿ (ಸಣ್ಣರಥದ) ಮೆರವಣಿಗೆ ಅದ್ದೂರಿಯಾಗಿ ನಡೆಯಿತು. ಜ. 25ರಂದು ಧಾರ್ಮಿಕ ವಿಧಿ ವಿಧಾನದಂತೆ ಸುಮಂಗಲೆಯರಿಂದ ಅಗ್ನಿ ಪೂಜೆ ಜರುಗಿತು. ಸಂಜೆ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ ಅಗ್ನಿ (ಅಗ್ಗಿ) ತುಳಿಯುವ ಮೆರವಣಿಗೆಗೆ ಚಾಲನೆ ನೀಡಲಾಯಿತು. ವೀರಭದ್ರೇಶ್ವರ ಅಗ್ನಿ ಕುಂಡಕ್ಕೆ ತಲುಪಿದ ನಂತರ ಧಾರ್ಮಿಕ ವಿಧಾನದಂತೆ ಪೂಜೆ ಸಲ್ಲಿಸಿ ದೇವರ ಪಲ್ಲಕ್ಕಿಯೊಂದಿಗೆ ಅಗ್ನಿ ಹಾಯ್ದಿ ಭಕ್ತರಿಗೆ ಅಗ್ನಿ ಹಾಯಲು ಅನುಕೂಲ ಮಾಡಿಕೊಡಲಾಯಿತು.

ವಿದ್ಯುತ್ ದೀಪದಲ್ಲಿ ಕಂಗೋಳಿಸುತ್ತರುವ ದೇವಸ್ಥಾನ

ಜಾತ್ರಾ ಮಹೋತ್ಸವ ನಿಮಿತ್ತ ವೀರಭದ್ರೇಶ್ವರ ದೇವಸ್ಥಾನ ಕಂಗೋಳಿಸುತ್ತಿದೆ. ದೇವಸ್ಥಾನದ ಗೋಪುರಕ್ಕೆ ನಾನಾ ಬಣ್ಣದ ವಿದ್ಯುತ್ ದೀಪ ಅಳವಡಿಸಲಾಗಿದೆ. ದೇವಸ್ಥಾನದ ಮುಖ್ಯದ್ವಾರಕ್ಕೆ ವೀರಭದ್ರ ಮಹಾಸ್ವಾಮಿಯ ಚಿತ್ರ ಕಾಣಿಸುವ ಹಾಗೆ ಮಾಡಿರುವುದು ವಿಶೇಷ.

ರಾಷ್ಟ್ರ ಧ್ವಜ, ಕುಂಭ ಕಳಸ, ಸ್ವಾಸ್ತಿಕ್, ಓಂ, ಶಿವಲಿಂಗ, ವಿವಿಧ ಬಗೆಯ ಹೂಗಳ ಚಿತ್ರಗಳು ವಿದ್ಯುತ್ ದೀಪದಲ್ಲಿಯೇ ಕಾಣಿಸುವಂತೆ ಸಿದ್ದ ಪಡಿಸಲಾಗಿದೆ. ದೇವರ ದರ್ಶನಕ್ಕೆ ಆಗಮಿಸುತ್ತಿರುವ ಭಕ್ತರ ಕಣ್ಮನ ಸೇಳೆಯುವಂತ ವಾತಾವರಣ ನಿರ್ಮಾಣ ಮಾಡಲಾಗಿದೆ.

**ರಾರಾಜೀಸುತ್ತಿರುವ ಜಾತ್ರಾ ಬ್ಯಾನರ್‌ಗಳು**

ಕಲ್ಯಾಣ ಕರ್ನಾಟಕ ಭಾಗದ ಹುಮನಾಬಾದ್ ಪಟ್ಟಣದಲ್ಲಿ ಜ. 26ರಂದು ಜರುಗಲಿರುವ ಐತಿಹಾಸಿಕ ವೀರಭದ್ರೇಶ್ವರ ಜಾತ್ರ ಮಹೋತ್ಸವ ನಿಮಿತ್ತ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಬ್ಯಾನರ್‌ಗಳು ರಾರಾಜೀಸುತ್ತಿವೆ.

ಪಟ್ಟಣದ ಮಾಜಿ ಸಂಸದ ರಾಮಚಂದ್ರ ವೀರಪ್ಪ ಆರ್ಯ ವೃತ್ತ, ಎಪಿಎಂಸಿ ಗೇಟ್, ಕೇಂದ್ರ ಬಸ್ ನಿಲ್ದಾಣ, ಅಂಬೇಡ್ಕರ್ ವೃತ್ತ, ಅಗ್ನಿ ಕುಂಡ, ಕೆಇಬಿ ಕಚೇರಿ, ಬಸವೇಶ್ವರ ವೃತ್ತ, ಬಾಲಾಜಿ ಮಂದಿರ, ಸರ್ದಾರ್ ವಲ್ಲಭಭಾಯಿ ವೃತ್ತ, ದೇವಸ್ಥಾನಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಗಳು ಅಲ್ಲದೇ ಪಟ್ಟಣದ ಪ್ರಮುಖ ರಸ್ತೆಗಳ ಮಾರ್ಗದಲ್ಲಿ ಭಕ್ತರ ಸ್ವಾಗತಕ್ಕೆ ಬ್ಯಾನರ್ ಗಳು ಸಜ್ಜಾಗಿವೆ.

**ವೀರಭದ್ರೇಶ್ವರಜಾತ್ರೆ;ವಿಭೂತಿ ವಿಶೇಷ**

ಪವಿತ್ರ ಸಂಕೇತವಾಗಿರುವ ವಿಭೂತಿಯನ್ನು ಇಡೀ ವರ್ಷದವರೆಗೆ ನಿತ್ಯ ಹಣೆಯ ಮೇಲೆ ಧರಿಸುವ ಹಿನ್ನಲೆಯಲ್ಲಿ ಹುಮನಾಬಾದ್ ಜಾತೆ-ಗೆ ಬರುವವ ಭಕ್ತಾಧಿಗಳು ವಿಭೂತಿ ಖರಿದಿಸುತ್ತಾರೆ. ಪಾವಿತ್ರತೆ, ಪರಿಶುದ್ಧತೆಯ ಸಂಕೇತವಾದ ವಿಭೂತಿಗೆ ವೀರಶೈವ-ಲಿಂಗಾಯುತ ಸಮುದಾಯದಲ್ಲಿ ಬಹಳ ಮಹತ್ವದ ಸ್ಥಾನಮಾನವಿದೆ.

**ಜಾತ್ರಾ ಯಶಸ್ವಿಗೆ ಶ್ರೀಗಳ ಸೇವೆ ಅನ್ನನ್ಯ**



ಪಟ್ಟಣದ ವೀರಭದ್ರೇಶ್ವರ ದೇವಸ್ಥಾನದ ಸರ್ವಾಂಗೀಣ ಅಭಿವೃದ್ಧಿಗೆ ಹಿರೇಮಠ ಸಂಸ್ಥಾನದ ಪೀಠಾಧಿಪತಿ ರೇಣುಕಾವೀರ ಗಂಗಾಧರ ಶೀವಾಚಾರ್ಯರ ಕೊಡುಗೆ ಅಪಾರ. ಪ್ರತಿವರ್ಷ ನಡೆಯುವ ಐತಿಹಾಸಿಕ ವೀರಭದ್ರೇಶ್ವರ ಜಾತ್ರಾ ಮಹೋತ್ಸವ ಯಶಸ್ವಿಗೆ ನಿಸ್ವಾರ್ಥ ಮನೋಭಾವನೆಯಿಂದ ಭಕ್ತರ ಜತೆಗೂಡಿ ಸಾಮಾಜಿಕ ಸೇವ ಸಲ್ಲಿಸುತ್ತಿದ್ದಾರೆ. ದೇವಸ್ಥಾನಕ್ಕೆ ಸಂಬಂಧಿಸಿದ ಎಲ್ಲ ಕಾರ್ಯಕ್ರಮ ಇವರ ಸಾನಿಧ್ಯದಲ್ಲಿ ಜರುಗುತ್ತವೆ.



**ಪಲ್ಲಕ್ಕಿ ಉತ್ಸವಕ್ಕೆ ರಂಗೋಲಿ ಸ್ವಾಗತ**

ವೀರಭದ್ರೇಶ್ವರ ಜಾತ್ರಾ ಮಹೋತ್ಸವನಿಮಿತ್ತನಡೆಯುವ ಪಲ್ಲಕ್ಕೆ ಉತ್ಸವದ ಸ್ವಾಗತಕ್ಕೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮಹಿಳೆಯರು ಹಾಗೂ ಚಿಣ್ಣರು ರಂಗೋಲಿಯಿಂದ ವಿವಿಧ ಬಗೆಯ ಚಿತ್ರ ಬಿಡಿಸುವುದು ಇಲ್ಲಿನ ಸಂಪ್ರದಾಯವಿದೆ.

ಪಲ್ಲಕ್ಕಿ ಉತ್ಸವದ ದಾ-ರಿಯುದ್ದಕ್ಕೂ ರಂಗೋಲಿ ಚಿತ್ರ ಬಿಡಿಸುವ ಮೂಲಕ ಪಲ್ಲಕ್ಕಿಗೆ ಸ್ವಾಗತ ಕೋರಿ ವಿಶೇಷ ಪೂಜೆ ಸಲ್ಲಿಸುವುದೇ ಒಂದು ವಿಶೇಷ ಸಂಗತಿ. ಪಟ್ಟಣದ ದೇವಸ್ಥಾನದ ಪ್ರವೇಶ ದ್ವಾರ, ಮಟಾಣಗರ್ ಗಲ್ಲಿ, ಬಪ್ಪಣ ಗಲ್ಲಿ, ಬಸವೇಶ್ವರ ವೃತ್ತ, ಬಾಲಾಜಿ ಮಂದಿರ, ಲಕ್ಷ್ಮಿ ವೆಂಕಟೇಶ್ವರ ದೇವಸ್ಥಾನದ ರಸ್ತೆ ಸೇರಿ ವಿವಿಧೆಡೆ ರಂಗೋಲಿ ಹಾಕುತ್ತಾರೆ.

ಹುಮನಾಬಾದ್ ಪಟ್ಟಣದ ಜಿಲ್ಲಾ ಪಂಚಾಯತ ರಾಜ್ ಇಂಜಿನಿಯರಿಂಗ್ ಕಚೇರಿ ಆವರಣದಲ್ಲಿ ಅನ್ನದಾಸೋಹ ಕಾರ್ಯಕ್ರಮದ ಪೂರ್ವ ಸಿದ್ಧತೆ ನಡೆಯುತ್ತಿರುವುದು.

**ಬೃಹತ್ ಅನ್ನದಾಸೋಹ ಕಾರ್ಯಕ್ರಮ**

ಜಾತ್ರಾ ಮಹೋತ್ಸವ ನಿಮಿತ್ತ ಪಟ್ಟಣದ ವಿವಿದೆಡೆ ಸರಕಾರಿ ಇಲಾಖೆ ಅಧಿಕಾರಿಗಳಿಂದ ಹಾಗೂ ವಿವಿಧ ಸಂಘ ಸಂಸ್ಥೆಗಳಿಂದ ಅನ್ನದಾಸೋಹ ಕಾರ್ಯಕ್ರಮ ಅದ್ದೂರಿಯಾಗಿ ಜರುಗಲಿದೆ.

ಪಿಆರ್‌ಇ ಕಚೇರಿ ಆವರಣ ಹಾಗೂ ಅರಣ್ಯ ಇಲಾಖೆ ಕಚೇರಿ ಆವರಣ, ರಥ ಮೈದಾನ, ಜೂನಿಯರ ಕಾಲೇಜು ಮುಂಭಾಗ, ಬಸ್ ನಿಲ್ದಾಣದ ಮುಂಭಾಗ ಸೇರಿದಂತೆ ಪಟ್ಟಣದ ನಾನಾ ಕಡೆಗಳಲ್ಲಿ ಬೃಹತ್ ಅನ್ನದಾಸೋಹ ಕಾರ್ಯಕ್ರಮದ ಚಾಲನೆಗೆ ಪೂರ್ವ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

ಜಾತ್ರೆಗೆ ಆಗಮಿಸುವ ಭಕ್ತರಿಗಾಗಿ ಬೃಹತ್ ಅನ್ನದಾಸೋಹ ಕಾರ್ಯಕ್ರಮದಲ್ಲಿ ಭಜ್ಜಿ, ರೊಟ್ಟಿ, ಕುಟ್ಟಿನ ಹುಗ್ಗಿ, ಉಪ್ಪಿಟ್ಟು, ಚಪಾತಿ, ಹೂರಣ ಹೋಳಿಗೆ, ಕಾಯಿ ಹೋಳಿಗೆ, ಚಿತ್ರಾನ್ನ ಸೇರಿ ಅನೇಕ ಬಗೆಯ ತಿಂಡಿ ಪದಾರ್ಥಗಳ ತಯಾರಿ ಭರದಿಂದ ಸಾಗಿದೆ.

# ವೀರಭದ್ರೇಶ್ವರರ ಉಚ್ಛಾಯಿ ಮೆರವಣಿಗೆ ಸಂಭ್ರಮ

ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ್ ಪಟ್ಟಣದಲ್ಲಿ ಐತಿಹಾಸಿಕ ವೀರಭದ್ರೇಶ್ವರ ಜಾತ್ರಾಮಹೋತ್ಸವದ ಉಚಾಯಿ ಮೆರವಣಿಗೆ ಅದ್ದೂರಿಯಾಗಿ ನಡೆಯಿತು. ವೀರಭದ್ರೇಶ್ವರರ ಉಚ್ಛಾಯಿ ಮೆರವಣಿಗೆ ಸಂಭ್ರಮ

ಐತಿಹಾಸಿಕ ವೀರಭದ್ರೇಶ್ವರ ದೇವರ ಜಾತ್ರಾ ಮಹೋತ್ಸವ ನಿಮಿತ್ತ ಪಟ್ಟಣದ ಹಿರೇಮಠ ಸಂಸ್ಥಾನದ ಪೀಠಾಧಿಪತಿ ರೇಣುಕವೀರ ಗಂಗಾಧರ ಶಿವಾಚಾರ್ಯರ ಸಾನಿಧ್ಯದಲ್ಲಿ ಉಚ್ಛಾಯಿ (ಸಣ್ಣರಥ) ಮೆರವಣಿಗೆ ಸಂಭ್ರಮದಿಂದ ಜರುಗಿತು. ಸಂಜೆ ದೇವಸ್ಥಾನದಲ್ಲಿ ದೇವರಿಗೆ ವಿಶೇಷ ಪೂಜಾ ಕಾರ್ಯಕ್ರಮಗಳು ಸಲ್ಲಿಸಿ ಉಚಾಯಿ ಹಾಗೂ ಪಲ್ಲಕ್ಕಿ ಉತ್ಸವಕ್ಕೆ ಚಾಲನೆ ನೀಡಲಾಯಿತು.



ಕಳೆದ ಮೂರು ದಿನಗಳಿಂದ ಈ ಕಾರ್ಯಕ್ರಮಗಳು ಧಾರ್ಮಿಕ ಪರಂಪರೆಯಂತೆ ಜರುಗುತ್ತಿರುವುದು ವಿಶೇಷವಾಗಿದೆ. ಮೆರವಣಿಗೆ ದಾರಿಯುದ್ದಕ್ಕೂ ಭಕ್ತಾಧಿಗಳು ಸರತಿ ಸಾಲಿನಲ್ಲಿ ನಿಂತು ದರ್ಶನ ಪಡೆದರು. ಪಟ್ಟಣದ ಮಹಿಳೆಯರಲ್ಲದೇ ಗ್ರಾಮೀಣ ಭಾಗದ ಮಹಿಳಾ ಭಕ್ತಾಧಿಗಳು ದಾರಿಯುದ್ದಕ್ಕೂ ಬಿಡಿಸಿರುವ ವಿವಿಧ ಬಗೆಯ ರಂಗೋಲಿ ಹಾಗೂ ಹಲವು ದೇವರುಗಳ ಚಿತ್ರಗಳು ನೋಡಿಗರರ ಕಣ್ಮನ ಸೆಳೆಯುವಂತ್ತಿತ್ತು. ಆಂದ್ರಪ್ರದೇಶ ತೆಲಂಗಾಣ, ಮಹಾರಾಷ್ಟ ಅಲ್ಲದೇ ರಾಜ್ಯದ ನಾನಾ ಜಿಲ್ಲೆಯ ಭಕ್ತರು ಉತ್ಸವದಲ್ಲಿ ಭಾಗವಹಿಸಿ ಹರಕೆ ತೀರಿಸಿದರು. ಈ ಸಂದರ್ಭದಲ್ಲಿ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ವೀರಣ್ಣ ಪಾಟೀಲ್, ಪುರಸಭೆ ಸದಸ್ಯ ಸುನಿಲ್ ಪಾಟೀಲ್, ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಶಿವಾನಂದ ಮಂಠಾಳಕರ್, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಅಭಿಷೇಕ ಪಾಟೀಲ್, ಉದ್ಯಮಿ ಸಂತೋಷ ಪಾಟೀಲ್, ಕೆಎಂಎಫ್ ನಿರ್ದೇಶಕ ರೇವಣಸಿದ್ದಪ್ಪ ಪಾಟೀಲ್, ಮಲ್ಲಿಕಾರ್ಜುನ್ ಮಾಳಶಟ್ಟಿ, ಸೋಮಶೇಖರ ಬುಳ್ಳಾ, ಸೋಮು ಸೀಗಿ, ಉಮೇಶ ಜಮಗಿ, ದತ್ತಕುಮಾರ ಚಿದ್ರಿ, ಬಾಬುರಾವ ಪರಂಶಟ್ಟಿ, ಲಕ್ಷ್ಮಿಕಾಂತ ಹಿಂದೋಡ್ಡಿ, ಗಣಪತಿ ಅಷ್ಟೂರೆ, ಗೋಪಾಲರೆಡ್ಡಿ, ಗೌತಮ ಜಾನವೀರ ಸೇರಿ ಅನೇಕರಿದ್ದರು.

ಬೀದರ | ಕಲಬುರಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಸಾರ Postal Reg. No. BDR/054/2026-2027 Email: mallammanudi@gmail.com E-paper: www.mallammanudi.in

# ಮಲ್ಲಮ್ಮ ನುಡಿ

ಸತ್ಯಮೇವ ಜಯತೆ

ಪ್ರಾದೇಶಿಕ ಕನ್ನಡ ದಿನಪತ್ರಿಕೆ

ಸಂಪಾದಕರು: ರಮೇಶರೆಡ್ಡಿ | 9448 604450

Mallammanudi Regional News Paper | Editor: Ramesh Reddy | RNI NO:KARKAN/2011/48371

VOLUME-ಸಂಪುಟ:12 | ISSUE- ಸಂಚಿಕೆ: 354 | PAGE-ಪುಟ 12 | ಭಾನುವಾರ 26.01.2025 | RS.ಬೆಲೆ 2/-

# ಹುಮನಾಬಾದ ಐತಿಹಾಸಿಕ

## ಶ್ರೀ ವೀರಭದ್ರೇಶ್ವರ ಜಾತ್ರಾ ಮಹೋತ್ಸವ ಇಂದು





ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ್:ಜ.25:ಕಲ್ಯಾಣ ಕರ್ನಾಟಕ ಭಾಗದ ಪ್ರಸಿದ್ಧ ದೇವಸ್ಥಾನಗಳಲ್ಲಿ ಒಂದಾದ ಹುಮನಾಬಾದ್ ಪಟ್ಟಣದ ಶ್ರೀ ವೀರಭದ್ರೇಶ್ವರ ಜಾತ್ರಾ ಮಹೋತ್ಸವ ಜ. 26ರಂದು ಭಾನುವಾರ ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಅದ್ದೂರಿಯಾಗಿ ಜರುಗಲಿದೆ.

ದುಷ್ಟರ ಸಂಹಾರಕ, ಶಿಷ್ಟರ ಪರಿಪಾಲಕಎಂದೇಕರೆಯಿಸಿಕೊಳ್ಳುವ ಶ್ರೀ ವೀರಭದ್ರೇಶ್ವರ ದೇವರ ಜಾತ್ರಾ ಮಹೋತ್ಸವ ಅತಿ ವಿಜೃಂಭಣೆಯಿಂದನಡೆಯಲಿದೆ. ಇಗಾಗಲೇ ಹುಮನಾಬಾದ ಪಟ್ಟಣದಲ್ಲಿಹಬ್ಬದವಾತಾವರಣ ನಿರ್ಮಾಣವಾಗಿದೆ. ಜ.26ರ ನಸುಕಿನ ಜಾವ ಹಿರೇಮಠ ಸಂಸ್ಥಾನದ ಪೀಠಾಧಿಪತಿ ಶ್ರೀ ರೇಣುಕ ವೀರ ಗಂಗಾಧರ ಶಿವಾಚಾರ್ಯರ ನೇತೃತ್ವದಲ್ಲಿ ಧಾರ್ಮಿಕ ವಿಧಾನದಂತೆ ಪೂಜೆ ಸಲ್ಲಿಸಿ ಅಗ್ಗಿ ತುಳಿಯುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗುತ್ತದೆ.

ಶ್ರೀ ವೀರಭದ್ರೇಶ್ವರ ಜಾತ್ರೆಯಲ್ಲಿ ನಡೆಯುವ ವಿಶೇಷ ಧಾರ್ಮಿಕ ಕಾರ್ಯಕ್ರಮದೊಂದಿಗೆ ಭಕ್ತರು ಅಗ್ನಿ ತುಳಿಯುವುದು, ಶಲ್ಯ ಹಚ್ಚುವುದು, ನೈವೈದ್ಯ ಅರ್ಪಿಸುವುದು, ಹೀಗೆ ಸಾಕಷ್ಟು ವಿಧಿವಿಧಾನಗಳಂತೆ ತಮ್ಮ ಇಷ್ಟಾರ್ಥಗಳನ್ನುತೀರಿಸಿಕೊಳ್ಳುತ್ತಾರೆ. ಹೀಗಾಗಿ ಒಂದು ಬಾರಿ ಭಕ್ತರು ಅಗ್ನಿ ತುಳಿದರೆ ಅವರು ಎಲ್ಲೆ ಇದ್ದರೂ ತಪ್ಪದೆ ಪ್ರತಿವರ್ಷ ಜಾತ್ರೆಗೆ ಆಗಮಿಸಿ ಅಗ್ನಿ ತುಳಿಯಬೇಕು ಎಂಬ ಪದ್ಧತಿ ರೂಢಿಸಿಕೊಂಡಿರುತ್ತಾರೆ. ಜಾತ್ರಾ ಮಹೋತ್ಸವದಲ್ಲಿ ಮಹಾರಾಷ್ಟ್ರ, ಆಂದ್ರಪ್ರದೇಶ, ತೆಲಂಗಾಣ ಹಾಗೂ ಕರ್ನಾಟಕ ರಾಜ್ಯದ ನಾನಾ ಜಿಲ್ಲೆಗಳು ಸೇರಿದಂತೆ ಹುಮನಾಬಾದ್ ತಾಲೂಕಿನ ಗ್ರಾಮೀಣ ಭಾಗದ ಅಪಾರ ಭಕ್ತರು ಆಗಮಿಸಿ ವೀರಭದ್ರೇಶ್ವರ ದೇವರ ದರ್ಶನ ಪಡೆಯುತ್ತಾರೆ.

ಜ. 26ರಂದು ಸಂಜೆ 7 ಗಂಟೆಗೆ ವೀರಭದ್ರೇಶ್ವರ ದೇವಸ್ಥಾನದಿಂದ ಪ್ರಾರಂಭವಾಗುವ ಉತ್ಸವ ಮೂರ್ತಿಯ ಭವ್ಯ ಮೆರವಣಿಗೆ ಪಟ್ಟಣದ ಪ್ರಮುಖ ರಸ್ತೆಗಳ ಮಾರ್ಗವಾಗಿ ಜ. 27

(4ನೇ ಪುಟ ನೋಡಿ)



## ಮೂರನೇ ಪುಟದಿಂದ

### ಶ್ರೀ ವೀರಭದ್ರೇಶ್ವರ ಜಾತ್ರಾ ಮಹೋತ್ಸವ ಇಂದು

ರಂದು ಪಟ್ಟಣದ ಹೃದಯ ಭಾಗವಾಗಿರುವ ರಥ ಮೈದಾನಕ್ಕೆ ತಲುಪುತ್ತದೆ. ಬಳಿಕ ಐತಿಹಾಸಿಕ ರಥೋತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗುತ್ತದೆ. ವೀರಭದ್ರೇಶ್ವರ ದೇವರ ರಥ ಕಲ್ಲೂರ ರಸ್ತೆಯಿಂದ ಪುರಸಭೆ ಕಚೇರಿ, ತಾಪಂ. ಕಚೇರಿ ಮುಂಭಾಗದ ರಸ್ತೆ ಮಾರ್ಗವಾಗಿ ಹಳೆ ತಹಸೀಲ್ ಕಚೇರಿಯ ಮುಂಭಾಗ ಬಸವಣ್ಣನ ದೇವಸ್ಥಾನದ ವರೆಗೆ ಬಳಿಕ ಅದೆ ಮಾರ್ಗವಾಗಿ ರಥ ನಿಲ್ಲಿಸುವ ಸ್ಥಳದ ವರೆಗೆ ಭಕ್ತರು ಸಂಭ್ರಮದಿಂದ ರಥ ಎಳೆಯುತ್ತಾರೆ.

ಉತ್ಸವ ಮೂರ್ತಿ ಹಾಗೂ ರಥೋತ್ಸವ ಮೆರವಣಿಗೆಯಲ್ಲಿ ದಾರಿಯುದ್ದಕ್ಕೂ ಶಾಲಾ ಕಾಲೇಜು ಮಕ್ಕಳಿಂದ ಕೋಲಾಟ, ಚಿತ್ರಗೀತೆ, ಗಾಯನ, ಅನೇಕ ಬ್ಯಾಂಡ್, ಭಜನೆ, ನಂದಿ ಕುಣಿತ, ಡೊಳ್ಳು ಕುಣಿತ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗುತ್ತವೆ. ಮೆರವಣಿಗೆಯಲ್ಲಿ ವಿಶೇಷವಾಗಿ ಮದ್ದು ಸುಡುವುದು ನೆರೆದ ಜನರ ಕಣ್ಮನ ಸೆಳೆಯುತ್ತದೆ. ಶ್ರೀ ವೀರಭದ್ರೇಶ್ವರ ಜಾತ್ರೆಯ ಯಶಸ್ವಿಗೆ ದೇವಸ್ಥಾನದ ಸೇವಾ ಸಮಿತಿ, ಜನಪ್ರತಿನಿಧಿಗಳು, ಸಂಘ ಸಂಸ್ಥೆಗಳು ಸಹಕಾರ ನೀಡಿ, ತಮ್ಮ ಮನೆಯ ಹಬ್ಬದಂತೆ ಪ್ರತಿಯೊಬ್ಬರು ಶ್ರಮಿಸುತ್ತಿರುವುದು ಇತರರಿಗೆ ಮಾದರಿಯಾಗಿದೆ.

### ರಂಗಮಂದಿರ ನವೀಕರಣ ಕಾಮಗಾರಿಗೆ ಸಚಿವ ಪ್ರಿಯಾಂಕ್ ಖರ್ಗೆ ಅಡಿಗಲ್ಲು

(ಮಲ್ಲಮ ನುಡಿ ವಾರ್ತೆ) ಕಲಬುರಗಿ,ಜ.25:ಕಲಬುರಗಿ ನಗರದಡಾ.ಎಸ್.ಎಂ.ಪಂಡಿತ್ ರಂಗಮಂದಿರಸಭಾಂಗಣವನ್ನು 3.15 ಕೋಟಿ ರೂ. ವೆಚ್ಚದ ನವೀಕರಣಕಾಮಗಾರಿಗೆಶನಿವಾರ ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತುಪಂಚಾಯತ್ ರಾಜ್, ಐ.ಟಿ.-ಬಿ.ಟಿಹಾಗೂಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಅಡಿಗಲ್ಲು ನೆರವೇರಿಸಿದರು.

2024-25 ನೇ ಸಾಲಿನ ಕೆ.ಕೆ.ಅರ್.ಡಿ.ಬಿ. ಮ್ಯಾಕ್ರೋ ಅನುದಾನದಲ್ಲಿ ಈ ಕಾಮಗಾರಿ ಕೈಗೆತ್ತಿಕೊಂಡಿದ್ದು, ನಿರ್ಮಿತಿ ಕೇಂದ್ರನವೀಕರಣದಜವಾಬ್ದಾರಿ ಹೊತ್ತಿಕೊಂಡಿದೆ.

ನೆಲಮಹಡಿಯಲ್ಲಿ592ಮತ್ತು ಮೊದಲನೇ ಮಹಡಿಯಲ್ಲಿ 472 ಅಸನ ಒಳಗೊಂಡಂತೆ 7 ಸ್ಕ್ರೀನ್ ಅಳವಡಿಕೆ, ವಸಲ್ ಪೇಂಟ್, ಎ.ಸಿ. ಅಳವಡಿಕೆ, ಸೌಂಡ್ ಆಂಡ್ ಲೈಟ್ ಸಿಸ್ಟಮ್ ಒಳಗೊಂಡಿದೆ.

### ಫುಟ್ಬಾಲ್ ಅಂಕಣ ಉದ್ಘಾಟನೆ

ಮಲ್ಲಮ ನುಡಿ ವಾರ್ತೆ ಕಲಬುರಗಿ,ಜ.25:ಕಲಬುರಗಿ ನಗರದ ವೀರೇಂದ್ರ ಪಾಟೀಲ ಬಡಾವಣೆಯಲ್ಲಿ 2020-21ನೇ ಸಾಲಿನ ಕೆ.ಕೆ.ಆರ್.ಡಿ.ಬಿ.ಯ 3 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗಿರುವ ಫುಟ್ಬಾಲ್ ಅಂಕಣವನ್ನು ಸಚಿವ ಪ್ರಿಯಾಂಕ್ ಖರ್ಗೆ ಶನಿವಾರ ಉದ್ಘಾಟಿಸಿದರು.



ವಚನಶ್ರೀ ಆರ್. ಪೂಜಾರಿ ದುಬಲಗುಂಡಿ

### ಆನೆ ಮೆರವಣಿಗೆ ಮಾಡಿಸಿದ ಪಾಟೀಲ್ ಪರಿವಾರ



ಆನೆ ಮೆರವಣಿಗೆ ಮಾಡಿಸಿದ ಪಾಟೀಲ್ ಪರಿವಾರ

ಹುಮನಾಬಾದ್ :ಜ.25: ವೈಭವದ ಶ್ರೀ ವೀರಭದ್ರೇಶ್ವರ ಜಾತ್ರಾ ಮಹೋತ್ಸವದ ನಿಮಿತ್ತ ಮಾಜಿ ಸಚಿವ ದಿ. ಬಸವರಾಜ ಪಾಟೀಲ್ ಕುಟುಂಬದಿಂದ ಜೀವಂತ ಆನೆ ಮೆರವಣಿಗೆ ಮಾಡಿಸಿ ಭಕ್ತರ ಮನಗೆದ್ದಿದ್ದಾರೆ.

ಧಾರ್ಮಿಕ ಪರಂಪರೆಯಂತೆ ಹಿರೇಮಠ ಸಂಸ್ಥಾನದ ಪೀಠಾಧಿಪಿ ರೇಣುಕವೀರ ಗಂಗಾಧರ ಶಿವಾಚಾರ್ಯರ ಸಾನಿಧ್ಯದಲ್ಲಿ ಕಟ್ಟಿಗೆಯಿಂದ ಸಿದ್ದಪಡಿಸಿದ ಆನೆಯ ಮೇಲೆ ದೇವರ ಮೆರವಣಿಗೆ ಮಾಡಲಾಗುತ್ತಿತ್ತು. ಆದರೆ ಈ ವರ್ಷ ಜೀವಂತ ಆನೆಯ ಮೇಲೆ ಮೆರವಣಿಗೆ ನಡೆದಿರುವುದು ವಿಶೇಷ. ಬಹುತೇಕ ವರ್ಷಗಳಿಂದ ಜಾತ್ರೆಯಲ್ಲಿ ನಿಜವಾದ ಆನೆಯ ವೀರಭದ್ರ ಮಹಾಸ್ವಾಮಿಯ ಮೆರವಣಿಗೆ ಮಾಡಬೇಕು ಎನ್ನುವುದು ಭಕ್ತಾಧಿಗಳ ಬೇಡಿಕೆಯಾಗಿತ್ತು. ಅದರಂತೆ ಈ ವರ್ಷ ಮಾಜಿ ಸಚಿವ ರಾಜಶೇಖರ ಪಾಟೀಲ್, ಡಾ. ಚಂದ್ರಶೇಖರ ಪಾಟೀಲ್ ಹಾಗೂ ಭೀಮರಾವ ಪಾಟೀಲ್ ಕುಟುಂಬಸ್ಥರು ಉತ್ತಮ ನಿರ್ಧಾರ ಕೈಗೊಂಡು ನಿಜವಾದ ಆನೆಯ ಮೆರವಣಿಗೆಗೆ ತಗುಲುವ ವೆಚ್ಚ ಸ್ವತಃ ಭೀಮರಾವ ಪಾಟೀಲ್ ಅವರೇ ನೀಡುವ ಮೂಲಕ ಜಾತ್ರೆಯ ಮೆರುಗು ಹೆಚ್ಚಿಸಿದ್ದಾರೆ.

### ಗ್ರಾಮೀಣ ಭಾಗದ ಮೂಲಭೂತ ಸೌಕರ್ಯಗಳು ಒದಗಿಸಲು ಪ್ರಾಮಾಣಿಕ ಪ್ರಯತ್ನ:- ಇಓ



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:- ತಾಲೂಕಿನಲ್ಲಿ ಬರುವ ಗ್ರಾಮಗಳಿಗೆ ಕುಡಿಯುವ ನೀರು ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಲಾಗುತ್ತಿದೆ ಎಂದು ತಾಲೂಕ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಲಕ್ಷ್ಮಿ ಬಿರಾದಾರ್ ಪತ್ರಿಕೆಗೆ ಮಾಹಿತಿ ನೀಡಿದರು. ಗ್ರಾಮೀಣ ಭಾಗದ ಜನರು ಸ್ವಚ್ಛತೆಗೆ ಪ್ರಥಮ ಆದ್ಯತೆ ನೀಡಬೇಕು, ಸರ್ಕಾರದ ಯೋಜನೆಗಳನ್ನು ಪಡೆದು ಸ್ವಾಲಂಬಿಗಳಾಗಬೇಕೆಂದು ಜನರಲ್ಲಿ ಅರಿವು ಮೂಡಿಸಲಾಗುತ್ತಿದೆ ಎಂದು ತಿಳಿಸಿದರು. ಮುಂಬರುವ ದಿನಗಳಲ್ಲಿ ಬೇಸಿಗೆ ಕಾಲ ಬರುತ್ತಿದ್ದು ಪ್ರತಿಯೊಂದು ಗ್ರಾಮ ಪಂಚಾಯತಗೆ ಭೇಟಿ ನೀಡಿ ಅಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಮಾಹಿತಿ ಪಡೆಯಲಾಗಿದೆ, ಸಮಸ್ಯೆ ನಿವಾಹರಣೆಗೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ಸಾರ್ವಜನಿಕರ ಸಮಸ್ಯೆಗಳು ಗ್ರಾಮ ಪಂಚಾಯತ್ ಮಟ್ಟದಲ್ಲಿ ನಿವಾರಣೆ ಆಗದೆ ಇದ್ದಾಗ ನೇರವಾಗಿ ನನನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಿ ಸಮಸ್ಯೆಗಳು ಬಗೆಹರಿಸಿಕೊಳ್ಳಬೇಕು ಎಂದು ಸಾರ್ವಜನಿಕರಲ್ಲಿ ಮನವಿ ಮಾಡಿಕೊಳ್ಳುತ್ತೇನೆ ಎಂದು ತಿಳಿಸಿದರು.

### ಡಾ. ಗಿರೀಶ ದಿಲೀಪ್ ಬದೋಲೆಯವರಿಗೆ ರಾಜ್ಯಪಾಲರಿಂದ ಪ್ರಶಸ್ತಿ




ಮಲ್ಲಮ್ಮನುಡಿವಾರ್ತೆಬೀದರ. ಜ.25: ಅಭಿವೃದ್ಧಿಪರ ತಮ್ಮ ಕನಸುಗಳು ಮತ್ತು ವಿನೂತನ ಕಾರ್ಯಚಟುವಟಿಕೆಗಳಿಂದ ಹೆಸರಾಗಿರುವ ಬೀದರ ಜಿಲ್ಲಾ ಪಂಚಾಯತಿಯ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳಾದ ಡಾ. ಗಿರೀಶ ದಿಲೀಪ್ ಬದೋಲೆ ಅವರು ಇಂದು ಬೆಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ ಕರ್ನಾಟಕದ ರಾಜ್ಯಪಾಲರಾದ ಗೌರವಾನ್ವಿತ ಥಾವರ್ ಚಂದ ಗೆಹ್ಲೋಟ್ ಅವರಿಂದ ಪ್ರಶಸ್ತಿ ಸ್ವೀಕರಿಸುವ ಮೂಲಕ ತಮ್ಮ ಸಾಧನೆಯ ವೈಶಿಷ್ಟತೆಯನ್ನು ಮೆರೆದಿದ್ದಾರೆ.

ರಾಷ್ಟ್ರೀಯ ಮತದಾರರ ದಿನಾಚರಣೆಯ ಅಂಗವಾಗಿ ಬೀದರ ಜಿಲ್ಲಾ ಸ್ವೀಪ್ ಮುಖ್ಯಸ್ಥರಾಗಿ ಚುನಾವಣೆಗಳಲ್ಲಿ ಡಾ.ಗಿರೀಶ ದಿಲೀಪ್ ಬದೋಲೆ ಅವರು ನಿರ್ವಹಿಸಿದ ಅತ್ಯುತ್ತಮ ಕಾ೦ರ್ಯ ಸಾ ಧ ನೆ ಗಾ ಗಿ ಉತ್ತಮ ಪ್ರಯೋಗಗಳು (ಃಜಣ ಠಿಡಿಚಿಛಿಣಛಿಜ) ಪ್ರಶಸ್ತಿ ವಿಭಾಗದಡಿ ಇಂದು ಗೌರವಾನ್ವಿತ ರಾಜ್ಯಪಾಲರಿಂದ ಪ್ರಶಸ್ತಿ ಸ್ವೀಕರಿಸಿದರು.

### ಚೌಡಯ್ಯ ಭವನಕ್ಕಾಗಿ 5 ಕೋಟಿ ರೂ. ಮಂಜೂರಾತಿಗೆ ಸಚಿವರಲ್ಲಿ ಮನವಿ



ಮಲ್ಲಮ್ಮ ನುಡಿ ವಾರ್ತೆ ಬೀದರ. ಜ. 25 : ಜಿಲ್ಲೆಯಲ್ಲಿ ಜಿಲ್ಲಾ ಮಟ್ಟದ ನಿಜ ಶರಣ ಅಂಬಿಗರ ಚೌಡಯ್ಯನವರ ಭವನ ನಿರ್ಮಾಣಕ್ಕೆ ರಾಜ್ಯ ಸರಕಾರ 5 ಕೋಟಿ ರೂಪಾಯಿ ಹಣ ಮಂಜೂರು ಮಾಡಬೇಕೆಂದು ಕನ್ನಡ ಮತ್ತು ಸಂಸ್ಕೃತಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರಾದ ಶಿವರಾಜ ತಂಗಡಗಿ ಯವರಿಗೆ ಅಂಬಿಗರ ಚೌಡಯ್ಯ ಯುವ ಸೇನೆ ಜಿಲ್ಲಾ ಉಪಾಧ್ಯಕ್ಷರಾದ ಮಾರುತಿ ಮಾಸ್ಟರ್ ಅವರು ಭೇಟಿ ಮಾಡಿ ಮನವಿ ಪತ್ರ ಸಲ್ಲಿಸಿದ್ದಾರೆ.

ಬೀದರ ಜಿಲ್ಲೆಯಲ್ಲಿ ಸುಮಾರು 2 ಲಕ್ಷಕ್ಕೂ ಅಧಿಕ ಜನ ಸಂಖ್ಯೆ ಹೊಂದಿರುವ ಟೋಕರೆ ಕೋಳಿ (ಕೋಲಿ-ಕಬ್ಬಲಿಗ) ಸಮಾಜದವರಿದ್ದು, ಈ ಸಮುದಾಯದ ಬಹುದಿನಗಳ ಬೇಡಿಕೆ ಇದ್ದು, ಈ ಸಮಾಜ ಅತಿ ಹಿಂದುಳಿದ ಸಮಾಜವಾಗಿದ್ದು, ಭವನ ನಿರ್ಮಾಣ ಮಾಡಿದರೇ ಸಮಾಜದವರು ತಮ್ಮ ಮಕ್ಕಳ ಮದುವೆ-ಮುಂಜಿ ಸೇರಿದಂತೆ ಇತ್ಯಾದಿ ಧಾರ್ಮಿಕ ಕಾರ್ಯಕ್ರಮಗಳು ಮಾಡಲು ಅನುವು ಆಗುತ್ತದೆ.

ಸಮಾಜದ ಬೇಡಿಕೆಯನ್ನು ಈಡೇರಿಸಬೆಕೆಂದು ಕೇಳಿಕೊಂಡಾಗ ಸಚಿವರು ಸಕರಾತ್ಮಕವಾಗಿ ಸ್ಪಂದಿಸಿ ಮುಂಬರುವ ದಿನಗಳಲ್ಲಿ ಅನುದಾನ ಬಿಡುಗಡೆಗೆ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದ್ದಾರೆ.

ಈ ಸಂದರ್ಭದಲ್ಲಿ ಕರ್ನಾಟಕ ಜಾನಪದ ಅಕಾಡೇಮಿ ಸದಸ್ಯರಾದ ವಿಜಯಕುಮಾರ ಸೋನಾರೆ ಸೇರಿದಂತೆ ಇತರರು ಇದ್ದರು.

### ಶಾಲಾ ಮಕ್ಕಳಿಗೆ ಚಿತ್ರಕಲೆ ಸ್ಪರ್ಧೆ : ಪ್ರಮಾಣ ಪತ್ರ ವಿತರಣೆ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ:ಜ.25: ಕರ್ನಾಟಕ ಸರ್ಕಾರ ರಾಜ್ಯ ಬಾಲ ಭವನ ಸೊಸೈಟಿ ಬೆಂಗಳೂರು, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಬಾಲ ಭವನ ಸಮಿತಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಅಜೀಂ ಪ್ರೇಮ್ ಜಿ ಫೌಂಡೇಶನ್ ಕೊಪ್ಪಳ ಇವರ ಸಂಯೋಗದಲ್ಲಿ ವಿವಿಧ ಸ್ಪರ್ಧೆಗಳ ಕಾರ್ಯಕ್ರಮ-2025ರ ಅಂಗವಾಗಿ ಮಂಗಳವಾರ ಭಾಗ್ಯನಗರದ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಚಿತ್ರಕಲೆ ಸ್ಪರ್ಧೆ ಕಾರ್ಯಕ್ರಮ ನಡೆಯಿತು. ಸ್ಪರ್ಧೆಯಲ್ಲಿ ವಿಜೇತರಾದ ಮಕ್ಕಳಿಗೆ ಪ್ರಮಾಣ ಪತ್ರ ವಿತರಣೆ ಮಾಡಲಾಯಿತು.

ಕೊಪ್ಪಳ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಪರಶುರಾಮ ವಾಯ್ ಶೆಟ್ಟೆಪ್ಪನವರ್ ಅವರು ಕಾರ್ಯಕ್ರಮ ಉದ್ಘಾಟಿಸಿದರು. ಬಳಿಕ ಮಾತನಾಡಿ, ಮಕ್ಕಳು ಇಂತಹ ವೇದಿಕೆಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು ಹಾಗೂ ಸಿಕ್ಕ ಅವಕಾಶವನ್ನು ತಪ್ಪಿಸಿಕೊಳ್ಳಬಾರದು. ಸಾಧನೆ ಮಾಡಲು ಒಳ್ಳೆಯ ಶಿಕ್ಷಣ ಆರೋಗ್ಯ ಪೌಷ್ಟಿಕ ಆಹಾರ ಸೇವನೆ ಮಾಡಬೇಕು ಎಂದು ಹೇಳಿದರು. ಬಿ.ಆರ್.ಪಿ ಮಂಜುನಾಥ ಅವರು ಮಾತನಾಡಿ, ಮಕ್ಕಳು ಪಠ್ಯೇದ ಜತೆಗೆ ವಿವಿಧ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡು ಉತ್ತಮ ಸಾಧನೆ ಮಾಡಬೇಕು. ಸ್ಪರ್ಧೆಯಲ್ಲಿ ಸೋಲು ಗೆಲುವು ಸಹಜ ಆದ್ದರಿಂದ ಸೋತವರು ಎದೆಗುಂದದೆ ಮರಳಿ ಪ್ರಯತ್ನವನ್ನು ಮಾಡಬೇಕೆಂದರು. ಸಿ.ಆರ್.ಪಿ ಶೈಲನಾ ಭಾಷಾ ವಾಲಿಕಾರ್ ಅವರು ಮಾತನಾಡಿ ಮಕ್ಕಳು ಸ್ಪರ್ಧೆಗಳಲ್ಲಿ ಭಾಗವಹಿಸಿ ತಮ್ಮ ಕಲೆಯನ್ನು ಪ್ರದರ್ಶಿಸಬೇಕು. ಇಂತಹ ಸ್ಪರ್ಧೆಗಳು ಮಕ್ಕಳಿಗೆ ಅವಶ್ಯಕವಾಗಿವೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಭಾಗ್ಯನಗರ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಯರಾದ ಲಕ್ಷ್ಮಪ್ಪ ತಳಕಲ್ ಅವರು ಮಾತನಾಡಿ, ಇಂತಹ ಕಾರ್ಯಕ್ರಮವನ್ನು ನಮ್ಮ ಶಾಲೆಯಲ್ಲಿ ಹಮ್ಮಿಕೊಂಡಿದ್ದು, ನಮಗೆ ತುಂಬಾ ಸಂತೋಷವಾಗಿದೆ ಎಂದರು.

ಶಾಲೆಯ ಚಿತ್ರಕಲೆ ಶಿಕ್ಷಕ ಯಲ್ಲಪ್ಪ ಕಾರ್ಯಕ್ರಮ ನಿರೂಪಿಸಿದರು. ಜಿಲ್ಲಾ ಬಾಲ ಭವನ ಕಾರ್ಯಕ್ರಮ ಸಂಯೋಜಕ ಮೆಹಬೂಬ ಸಾಬ್ ಇಲಾಹಿ ಸ್ವಾಗತಿಸಿದರು. ಪ್ರಮೋದ್ ಕುಮಾರ್ ಅವರು ವಂದಿಸಿದರು.

ಈ ಕಾರ್ಯಕ್ರಮದಲ್ಲಿ ತೀರ್ಪುಗಾರರಾಗಿ ಬದ್ರಿ ಪುರೋಹಿತ್, ಶಾಲೆಯ ಸಹಶಿಕ್ಷಕರ ವೃಂದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಿಬ್ಬಂದಿ ವರ್ಗ ಹಾಗೂ ಶಾಲೆಯ ಎಲ್ಲಾ ಮಕ್ಕಳು ಭಾಗವಹಿಸಿದ್ದರು.

### 200 ರೋಗಿಗಳಿಗೆ ಆಹಾರ ಪೊಟ್ಟಣ ವಿತರಣೆ



ಮಲ್ಲಮ್ಮ ನುಡಿ ವಾರ್ತೆ ಬೀದರ.ಜ. 25 : ವಿಮಾ ಪ್ರತಿನಿಧಿಗಳ ವೃತ್ತಿ ಸಂರಕ್ಷಣಾ ದಿನಾಚರಣೆ ಪ್ರಯುಕ್ತ ಲೈಫ್ ಇನ್ಶೂರೆನ್ಸ್ ಏಜೆಂಟ್ಸ್ ಫೆಡರೇಷನ್ ಆಫ್ ಇಂಡಿಯಾದ ಬೀದರ್ ಶಾಖೆ ವತಿಯಿಂದ ನಗರದ ಬ್ರಿಮ್ಸ್ ಆಸ್ಪತ್ರೆಯಲ್ಲಿ ಶುಕ್ರವಾರ 200 ರೋಗಿಗಳಿಗೆ ಆಹಾರ ಪೊಟ್ಟಣ ಉಚಿತವಾಗಿ ವಿತರಿಸಲಾಯಿತು.

ಫೆಡರೇಷನ್ ಬೀದರ್ ಶಾಖೆಯ ಅಧ್ಯಕ್ಷ ಶರಣು ಹಣಮಶೆಟ್ಟೆ ಸೋನಾಳ್ ನೇತೃತ್ವದಲ್ಲಿ ರೋಗಿಗಳು ಹಾಗೂ ಅವರ ಕುಟುಂಬದ ಸದಸ್ಯರಿಗೆ ಪೊಟ್ಟಣ ವಿತರಣೆ ಮಾಡಲಾಯಿತು.

ಫೆಡರೇಷನ್ ವಿಭಾಗೀಯ ನಿರ್ದೇಶಕ ಜಿ.ಸಿ. ಗಂಗಶೆಟ್ಟಿ, ಬೀದರ್ ಶಾಖೆ ಗೌರವಾಧ್ಯಕ್ಷ ಸನ್ಮುಖಯ್ಯಸ್ವಾಮಿ, ಕಾರ್ಯದರ್ಶಿ ರೇವಣಸಿದ್ದಪ್ಪ ಬುಳ್ಳಾ, ಕೋಶಾಧ್ಯಕ್ಷ ಗಣಪತಿ ರಾಜೇಶ್ವರೆ, ಸಂಘಟನಾ ಕಾರ್ಯದರ್ಶಿ ರಮೇಶ ಶೆಕೋಬಾ, ಗೌರವ ಸಲಹೆಗಾರ ದೇವೇಂದ್ರ ಡಿಗ್ಗಿ, ಹಿರಿಯ ನಿರ್ದೇಶಕ ಗಣಪತಿ ಸೋಲಾಪುರೆ, ಸಿಎ???ಐಎ ಸಂಚಾಲಕ ಶಿವಾನಂದ ಸ್ವಾಮಿ, ವಿಮಾ ಸಲಹೆಗಾರ ಪವನಕುಮಾರ ಬಿರಾದಾರ ಮತ್ತಿತರರು ಇದ್ದರು.

### 58 ಜನರಿಂದ ಸ್ವಯಂ ಪ್ರೇರಿತ ರಕ್ತದಾನ




ಮಲ್ಲಮ್ಮ ನುಡಿ ವಾರ್ತೆ

ಬೀದರ. ಜ. 25 : ಅಖಿಲ ಭಾರತ ಔಷಧ ವ್ಯಾಪಾರಿಗಳ ಸಂಘದ ಸುವರ್ಣ ಮಹೋತ್ಸವ ಹಾಗೂ ಸಂಘದ ಅಧ್ಯಕ್ಷ ಜಗನ್ನಾಥ ಸಿಂಧೆ ಅವರ 75ನೇ ಜನ್ಮದಿನದ ಪ್ರಯುಕ್ತ ಇಲ್ಲಿಯ ಫಾರ್ಮಾ ಭವನದಲ್ಲಿ ನಡೆದ ಶಿಬಿರದಲ್ಲಿ 58 ಜನ ರಕ್ತದಾನ ಮಾಡಿದರು.

ಸಂಘದ ಪದಾಧಿಕಾರಿಗಳು, ಸದಸ್ಯರು ಹಾಗೂ ವ್ಯಾಪಾರಿಗಳು ಸ್ವಯಂ ಪ್ರೇರಣೆಯಿಂದ ರಕ್ತದಾನ ಮಾಡಿದರು.

ಬೀದರ್ ವಿಭಾಗ 1 ಮತ್ತು 2 ರ ಔಷಧ ನಿಯಂತ್ರಣಾಧಿಕಾರಿಗಳಾದ ಧನಂಜಯ್ ಹತಪಾಕಿ ಹಾಗೂ ಎಚ್.ಎಂ. ರೇಣುಕಸ್ವಾಮಿ ಅವರು ರಕ್ತದಾನಿಗಳಿಗೆ ಪ್ರಮಾಣ ಪತ್ರ ನೀಡಿ ಗೌರವಿಸಿದರು.

ಜಿಲ್ಲಾ ಔಷಧ ವ್ಯಾಪಾರಿಗಳ ಸಂಘದ ಅಧ್ಯಕ್ಷ ಶಿವರಾಜ ಪಾಟೀಲ, ಕರ್ನಾಟಕ ರಾಜ್ಯ ಔಷಧ ವ್ಯಾಪಾರಿಗಳ ಸಂಘದ ನಿರ್ದೇಶಕ ಬಸವರಾಜ ಪಾಟೀಲ ಹಾರೂರಗೇರಿ, ಜಿಲ್ಲಾ ಘಟಕದ ಉಪಾಧ್ಯಕ್ಷರಾದ ವಿಜಯಕುಮಾರ ಬಿರಾದಾರ, ಸೂರ್ಯಕಾಂತ ಆಗ್ರೆ, ಬಸವರಾಜ ಭೂಶೆಟ್ಟಿ, ಕಿರಣ ಉಪ್ಪೆ, ರಾಜಕುಮಾರ ನವಾಡೆ, ಮಹಮ್ಮದ್ ಇಲಿಯಾಸ್, ಪ್ರಧಾನ ಕಾರ್ಯದರ್ಶಿ ಮಹಮ್ಮದ್ ಖಾಲೀದ್ ಷರೀಫ್, ಖಜಾಂಚಿ ಸಂಜು ನೂಕಲವಾರ್, ಸಹ ಕಾರ್ಯದರ್ಶಿ ಮಹಾದಪ್ಪ ಶಿರಶೆಟ್ಟೆ, ಸುರೇಶ ಬಿರಾದಾರ, ಮಹಮ್ಮದ್ ಎತೆಶಾಮ್ ಉಲ್ ಹಕ್, ಮಹಮ್ಮದ್ ತಾಹಾ, ನವನಾಥ ಬಿರಾದಾರ ಚಿಲ್ಲರ್ಗಿ, ಮಾಣಿಕ ಕರಂಜೆ, ಎಂ.ಎಂ. ಬೇಗಂ, ಜಿಲ್ಲಾ ರಕ್ತನಿಧಿ ಕೇಂದ್ರದ ಮುಖ್ಯಸ್ಥ ಡಾ. ವೀರೇಂದ್ರ ಪಾಟೀಲ ಮತ್ತಿತರರು ಇದ್ದರು.

### ರಾಷ್ಟ್ರಪತಿಗಳಿಂದ ಕಲಬುರಗಿ ಡಿ.ಸಿ.ಗೆ ಪ್ರಶಸ್ತಿ ಪ್ರದಾನ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಜ.25(ಕರ್ನಾಟಕ ವಾರ್ತೆ) ಭಾರತ ಚುನಾವಣಾ ಆಯೋಗವು 2024-25ನೇ ಸಾಲಿನಲ್ಲಿ ಅತ್ಯುತ್ತಮ ಚುನಾವಣಾ ಪದ್ಧತಿ ಅಳವಡಿಸಿಕೊಂಡು ಅನುಷ್ಠಾನಕ್ಕೆ ತಂದಿದ್ದಕ್ಕಾಗಿ ಕಲಬುರಗಿ ಜಿಲ್ಲಾ ಚುನಾವಣಾಧಿಕಾರಿಗೆ ಇತ್ತೀಚೆಗೆ ಪ್ರಶಸ್ತಿ ಘೋಷಿಸಿದ ಹಿನ್ನೆಲೆಯಲ್ಲಿ ಶನಿವಾರ ನವದೆಹಲಿಯಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಡಿ.ಸಿ. ಬಿ.ಫೌಜಿಯಾ ತರನ್ನುಮ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು.

ನವದೆಹಲಿಯ ದೆಹಲಿ ಕಂಟೋನ್ಮೆಂಟ್ ಪ್ರದೇಶದ ಮಾಣಿಕಶಾ ಸೆಂಟರ್ ನಲ್ಲಿ ನಡೆದ ರಾಷ್ಟ್ರೀಯ ಮತದಾರರ ದಿನಾಚರಣೆ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಚುನಾವಣಾಧಿಕಾರಿ ಬಿ.ಫೌ-ಜಿಯಾ ಅವರಿಗೆ ಜನರಲ್ ಕೆಟಗರಿ ವಿಭಾಗದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಕೇಂದ್ರದ ಕಾನೂನು ಮತ್ತು ನ್ಯಾಯ ಖಾತೆ ಸಚಿವ ಅರ್ಜುನ ರಾಮ ಮೇಘವಾಲ್, ಭಾರತ ಚುನಾವಣಾ ಆಯೋಗದ ಮುಖ್ಯ ಚುನಾವಣಾ ಆಯುಕ್ತ ರಾಜೀವಕುಮಾರ, ಆಯುಕ್ತರುಗಳಾದ ಗ್ಯಾನೇಶ ಕುಮಾರ ಮತ್ತು ಡಾ.ಸುಖ್ಬೀರ್ ಸಿಂಗ್ ಸಂಧು ಇದ್ದರು.

ಜನರಲ್ ಕೆಟಗರಿಯಲ್ಲಿ 11, ಸ್ಪೆಷಲ್ ಕೆಟಗರಿಯಲ್ಲಿ 3, ಅತ್ಯುತ್ತಮ ನಿರ್ವಹಣೆಗೆ 3 ರಾಜ್ಯದ ಸಿ.ಇ.ಓ ಗಳಿಗೆ ಹಾಗೂ ಅತ್ಯುತ್ತಮ ಇಲಾಖೆಗಳ ಭಾಗದಲ್ಲಿ ಕೇಂದ್ರದ ಎನ್.ಐ.ಸಿ, ರೈಲ್ವೆ ಹಾಗೂ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಇಲಾಖೆಗೆ ಇ.ಸಿ.ಐ ಪ್ರಶಸ್ತಿ ಘೋಷಿಸಿತ್ತು. ಕಲಬುರಗಿ ಡಿ.ಸಿ. ಬಿ.ಫೌ-ಜಿಯಾ ತರನ್ನುಮ್ ಪ್ರಶಸ್ತಿಗೆ ಭಾನರಾದ ಕರ್ನಾಟಕದ ಏಕೈಕ ಅಧಿಕಾರಿಯಾಗಿದ್ದಾರೆ.



ಶ್ರೀಮತಿ ಪಾರ್ವತಿ ಶೇರಿಕಾರ
ಅಧ್ಯಕ್ಷರು, ಪುರಸಭೆ, ಹುಮನಾಬಾದ
ಶ್ರೀ ಮುಕ್ರಮ್ ಜಾ
ಉಪಾಧ್ಯಕ್ಷರು, ಪುರಸಭೆ, ಹುಮನಾಬಾದ
ನಾಡಿನ ಸಮಸ್ತ ಜನತೆಗೆ ಹುಮನಾಬಾದ ಪುರಸಭೆಯಿಂದ
ಗಣರಾಜ್ಯೋತ್ಸವ ಹಾಗೂ ಸುಕ್ಷೇತ್ರ ಹುಮನಾಬಾದಿನ
ಶ್ರೀ ವೀರಭದ್ರೇಶ್ವರ ಜಾತ್ರಾಮಹೋತ್ಸವಕ್ಕೆ
ಸಕಲ ಭಕ್ತಾದಿಗಳಿಗೆ ಹಾರ್ದಿಕ ಸ್ವಾಗತ

# ದೇಶದ ಭವಿಷ್ಯಕ್ಕಾಗಿ ಮತದಾನ ಅವಶ್ಯ : ನ್ಯಾ.ಎನ್.ವಿ.ವಿಜಯ



ಮಲ್ಲಮ ನುಡಿ ವಾರ್ತೆ

ಬಾಗಲಕೋಟೆ : ಜ. 25 : ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾನದ ಹಕ್ಕು ನೀಡಿದ್ದು, ಆ ಒಂದು ಮತದಿಂದ ದೇಶದ ಭವಿಷ್ಯ ನಿರ್ಮಾಣವಾಗುತ್ತದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಎನ್.ವಿ.ವಿಜಯ ಹೇಳಿದರು.

ತೋವಿವಿಯ ಸಭಾಭವನದಲ್ಲಿ ಶನಿವಾರ ಭಾರತ ಚುನಾವಣಾ ಆಯೋಗ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ನ್ಯಾಯಾಲಯ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಪೊಲೀಸ್ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡ ರಾಷ್ಟ್ರೀಯ ಮತದಾರರ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಇತ್ತೀಚೆಗೆ ಯುವ ಮತದಾರರು ಮತದಾನ ಮಾಡಲು ಹಿಂದೇಟು ಹಾಕುತ್ತಿದ್ದಾರೆ. ಆದರೆ ನಮ್ಮನ್ನು ಆಡಳು ನಾಯಕನನ್ನು ಆಯ್ಕೆ ಮಾಡುವ ಜವಾಬ್ದಾರಿ ನಮ್ಮೆಲ್ಲರ ಮೇಲೆ ಇದ್ದು, ಮತದಾನದ ಹಕ್ಕನ್ನು ಚಲಾಯಿಸುವುದು ಕಡ್ಡಾಯ ಹಾಗೂ ಕರ್ತವ್ಯವಾಗಿದೆ ಎಂದರು.

ಇತ್ತೀಚಿನ ಚುನಾವಣೆಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚು ಮತದಾನವಾಗುತ್ತಿದೆ. ಆದರೆ ನಗರ ಪ್ರದೇಶಗಳಲ್ಲಿ ಮತದಾನ ಕುಂಟಿತಗೊಳ್ಳುತ್ತಿದೆ. ಮತದಾನದ ಬಗ್ಗೆ ಹೆಚ್ಚಿನ ಜಾಗೃತಿ ಮೂಡಬೇಕಿದೆ. ಪ್ರಜ್ಞಾವಂತ ನಾಗರಿಕರು ದೇಶದ ಭವಿಷ್ಯಕ್ಕಾಗಿ ಪ್ರಜಾಪ್ರಭುತ್ವದಲ್ಲಿ ತಮಗೆ ನೀಡಿರುವ ಮತದಾನದ ಹಕ್ಕನ್ನು ಚಲಾಯಿಸಲು ಮುಂದಾಗಬೇಕಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಶಿಧರ ಕುರೇರ ಪ್ರತಿಜ್ಞಾವಿಧಿ ಭೋದಿಸಿ ಮಾತನಾಡಿದ ಅವರು ಮತದಾನದ ಪವಿತ್ರತೆಯನ್ನು ಅರಿಯಲು ಮತದಾನ ದಿನಾಚರಣೆ ಆಚರಿಸಲಾಗುತ್ತಿದ್ದು, ಸಂವಿಧಾನದ ಆಶಯದಂತೆ ಮತ್ತು ಅದರ ಅನುಚ್ಚೇದನ ಅಡಿಯಲ್ಲಿ ಭಾರತ ಚುನಾವಣಾ ಆಯೋಗ ರಚನೆಯಾಯಿತು. 1950 ಜನೇವರಿ 25 ರಂದು ರಚನೆಗೊಂಡ ಈ ಕಾರ್ಯ ಇಂದಿದೆ 75 ವರ್ಷದ ಇತಿಹಾಸ ಹೊಂದಿದೆ. ಆದ್ದರಿಂದ ಇಂತಹ ಮಹತ್ವದ ಹಕ್ಕನ್ನು ಪ್ರತಿಯೊಬ್ಬರು ಚುನಾವಣೆ ಸಂದರ್ಭದಲ್ಲಿ ಚಲಾಯಿಸಬೇಕು ಎಂದರು.

ಮೂಲಭೂತ ಹಕ್ಕುಗಳಲ್ಲಿ ಮತದಾನ ಮಾಡುವುದು ಕೂಡಾ ಪ್ರತಿಯೊಬ್ಬರ ಹಕ್ಕಾಗಿದೆ. ಇಂದು ಭಾರತ ದೇಶದಲ್ಲಿ ನೂರು ಕೋಟಿ ಮತದಾರರ ಪೈಕಿ 18 ರಿಂದ 29ರ ನಡುವಿನ ವಯೋಮಿತಿಯ 21 ಯುವ ಮತದಾರರಿದ್ದಾರೆ. ಅವರಲ್ಲಿ ಶೇ.35 ರಷ್ಟು ಮಾತ್ರ ಮತದಾನ ಮಾಡುತ್ತಿದ್ದಾರೆ. ಇವರೆಲ್ಲರಿಗೂ ಮತದಾನ ಪವಿತ್ರತೆಯ ಬಗ್ಗೆ ಅರಿವು ಮೂಡಿಸಬೇಕಿದೆ. ಮತದಾನದ ಹಕ್ಕು ಒಬ್ಬ ಕೂಲಿ ಕಾರ್ಮಿಕರಿಂದ ಹಿಡಿದು ರಾಷ್ಟ್ರಪತಿಯವರೆಗೆ ಅದರ ಮೌಲ್ಯ ಒಂದೇ ಆಗಿರುತ್ತದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ರಾಷ್ಟ್ರೀಯ ಮತದಾನದ ದಿನಾಚರಣೆ ಅಂಗವಾಗಿ ಪ್ರೌಢ, ಪದವಿ ಪೂರ್ವ ಹಾಗೂ ಪದವಿ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡ ಪ್ರಬಂಧ, ಬಿತ್ತಿಚಿತ್ರ,ರ ರೀಲ್ಸ್ ಹಾಗೂ ರಸಪ್ರಶ್ನೆ ಸ್ಪರ್ಧೆಯಲ್ಲಿ ವಿಜೇತರಿಗೆ ಬಹುಮಾನವನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ ರುಥ್ರೇನ್ ಪಿ, ನ್ಯಾಯಾಧೀಶರಾದ ಕ್ರೀಷ್ಣಮೂರ್ತಿ ಪಡಸಲಗಿ, ಚಂದ್ರಶೇಖರ ದಿಡ್ಡಿ, ತೋವಿವಿಯ ಶಿಕ್ಷಣ ನಿರ್ದೇಶಕ ಎನ್.ಕೆ.ಹೆಗಡೆ, ವಿಸ್ತರಣಾಧಿಕಾರಿ ಮಹಾದೇವ ಮುರಗಿ, ಅಪರ ಜಿಲ್ಲಾಧಿಕಾರಿ ಪರಶುರಾಮ ಶಿನ್ನಾಳಕರ, ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ, ತಹಶೀಲ್ದಾರ ಅಮರೇಶ ಪಮ್ಮಾರ ಸೇರಿದಂತೆ ಇತರರು ಉಪಸ್ಥಿತರಿದ್ದರು.

ವಿವಿಧ ತರಬೇತುದಾರರಿಗೆ ಪ್ರಶಸ್ತಿ

ರಾಜ್ಯ ಮಟ್ಟದ ಉತ್ತಮ ತರಬೇತುದಾರರ ಪ್ರಶಸ್ತಿಗೆ ಆಯ್ಕೆಯಾದ ಸಂಗಮೇಶ ಸಣ್ಣತಂಗಿ, ಜಿಲ್ಲಾ ಮಟ್ಟದ ಪ್ರಶಸ್ತಿಗೆ ಆಯ್ಕೆಯಾದ ಲಕ್ಷ್ಮೀಕಾಂತ ಮಮದಾಪೂರ, ಸಿ.ಎಕ್ಸ್.ಸಂಗಮ, ಉತ್ತರ ಇಎಲ್‌ಸಿಗಳಾದ ಅರುಣಕುಮಾರ ಗಾಳಿ, ಜಿ.ಬಿ.ಕುಲಕರ್ಣಿ, ಸರಕಾರಿ ಪ್ರೌಢಶಾಲೆ ಸೀತಿಮನಿ, ಉತ್ತಮ ಎಎಲ್‌ಎಂಟಿ ಉಮೇಶ ಗಣಿ, ಮತಗಟ್ಟೆ ಮಟ್ಟದ ಮೇಲ್ವಿಚಾರಕರಾದ ಶ್ರೀಕಾಂತ ಪಾಟೀಲ, ವಿಜಯಕುಮಾರ ದೇಶಮಾನೆ, ಉತ್ತಮ ಬಿ.ಎಲ್.ಓಗಳಾದ ಇಂದ್ರಾಬಾಯಿ ದೇಸಾಯಿ, ಬಳೂರಗಿ ಎಸ್.ಎಸ್. ಅವರಿಗೆ ಪ್ರಶಸ್ತಿ ನೀಡಲಾಯಿತು.

# ಉತ್ತಮ ನಾಯಕನ ಆಯ್ಕೆಗೆ ಮತದಾನ ಅಗತ್ಯ: ನ್ಯಾಯಾಧೀಶೆ ಕೆ.ಜಿ.ಶಾಂತಿ




ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಜ.25:ದೇಶದ ಪ್ರಗತಿಯಾಗಬೇಕಾದರೆ, ಉತ್ತಮ ನಾಯಕನ ಆಯ್ಕೆ ಅಗತ್ಯ. ಹಾಗಾಗಿ ಪ್ರತಿಯೊಬ್ಬರೂ ಯಾವುದೇ ಆಮೀಷಕ್ಕೆ ಒಳಗಾಗದೇ ವಿವೇಚನೆಯಿಂದ ತಪ್ಪದೇ ಮತದಾನ ಮಾಡಬೇಕು ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರೂ ಆದ ಕೆ.ಜಿ.ಶಾಂತಿ ಅವರು ಹೇಳಿದರು. ಭಾರತ ಚುನಾವಣಾ ಆಯೋಗ, ಬಳ್ಳಾರಿ ಜಿಲ್ಲಾ ಚುನಾವಣಾಧಿಕಾರಿಗಳ ಕಾರ್ಯಾಲಯ ಹಾಗೂ ಜಿಲ್ಲಾ ಸ್ವೀಪ್ ಸಮಿತಿ ಇವರ ಸಂಯುಕ್ತಾಶ್ರಯದಲ್ಲಿ ನಗರದ ಅನಂತಪುರ ರಸ್ತೆಯ ನೂತನ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಶನಿವಾರ ಏರ್ಪಡಿಸಿದ್ದ 'ರಾಷ್ಟ್ರೀಯ ಮತದಾರರ ದಿನ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ದೇಶದ ಯುವಜನತೆ ಹೆಚ್ಚಿನ ಸಂಖ್ಯೆಯಲ್ಲಿ ಮತದಾನ ಪ್ರಕ್ರಿಯೆಯಲ್ಲಿ ಭಾಗವಹಿಸಲು ಉತ್ತೇಜಿಸುವ ದೃಷ್ಟಿಯಿಂದ 1950 ರಲ್ಲಿ ಸ್ಥಾಪನೆಯಾದ ಭಾರತದ ಚುನಾವಣಾ ಆಯೋಗದ ಸಂಸ್ಥಾಪನ ದಿನದ ಸವಿನೆನಪಿಗಾಗಿ 2011 ರಲ್ಲಿ ಮೊದಲ ಬಾರಿಗೆ ಜ.25 ರಂದು ರಾಷ್ಟ್ರೀಯ ಮತದಾರರ ದಿನವನ್ನು ಆಚರಿಸಲಾಯಿತು. ರಾಷ್ಟ್ರದ ಅಭಿವೃದ್ಧಿ, ಏಳಿಗೆಯ ಕಡೆಗೆ ನಾಗರಿಕರ ಜವಾಬ್ದಾರಿ, ಕರ್ತವ್ಯವನ್ನು ನೆನಪಿಸುವ ಉದ್ದೇಶದಿಂದ ಪ್ರತಿವರ್ಷ ಜನವರಿ 25 ರಂದು ರಾಷ್ಟ್ರೀಯ ಮತದಾರರ ದಿನವನ್ನು ಆಚರಿಸಲಾಗುತ್ತದೆ ಎಂದು ತಿಳಿಸಿದರು.

ಎಲ್ಲಾ ದಾನಕ್ಕಿಂತ ಶ್ರೇಷ್ಠದಾನ ಮತದಾನವೂ ಒಂದು. 18 ವರ್ಷ ತುಂಬಿದ ಯುವಕ-ಯುವತಿಯರು ಮತದಾನರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಿಕೊಳ್ಳಬೇಕು. ಶೇಕಡವಾರು ಮತದಾನದ ಪ್ರಮಾಣ ಹೆಚ್ಚಿಸಲು ತಪ್ಪದೇ ಮತದಾನ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಬೇಕು ಎಂದು ಅವರು ಹೇಳಿದರು.

ಹಿಂದಿನ ಕಾಲದ ಮತಪತ್ರ (ಬ್ಯಾಲೆಟ್ ಪೇಪರ್)ದ ಚುನಾವಣೆಗಳಲ್ಲಿ ಹಿರಿಯರೆಲ್ಲರೂ ಹಬ್ಬದಂತೆ ಮತದಾನದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಮತದಾನ ಪ್ರಮಾಣ ಹೆಚ್ಚಳಕ್ಕೆ ಪೂರಕವಾಗಿರುತ್ತಿದ್ದರು. ಆದ-ರೆ ಈಗ ಬಟನ್ ಒತ್ತುವ ಮಾದರಿ ಬಂದರೂ ಸಹ ಈಗಿನ ಸಂದರ್ಭದಲ್ಲಿ ವಿದ್ಯಾವಂತರೂ ಸೇರಿದಂತೆ ಸೋಮಾರಿತನದಿಂದ ಮತದಾನದಿಂದ ಹೊರಗುಳಿಯುತ್ತಿದ್ದಾರೆ ಎಂದರು.

ಚುನಾವಣೆಗಳು ಹಬ್ಬಗಳಿದ್ದಂತೆ. ಎಲ್ಲರೂ ತಪ್ಪದೇ ಭಾಗವಹಿಸಬೇಕು. ಪ್ರಜಾಪ್ರಭುತ್ವದಲ್ಲಿ ಸ್ವತಂತ್ರದಿಂದ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಸಂವಿಧಾನವು ಮತದಾನ ಹಕ್ಕು ನೀಡಿದೆ. ಇದರಿಂದ ಯಾರೂ ಹೊರಗುಳಿಯಬಾರದು ಎಂದು ನ್ಯಾಯಾಧೀಶರು ತಿಳಿಸಿದರು.

ಜಿಲ್ಲಾ ಚುನಾವಣಾಧಿಕಾರಿಗಳಾದ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, 18 ವರ್ಷ ತುಂಬಿದ ಪ್ರತಿಯೊಬ್ಬರೂ ತಮ್ಮ ಮತದಾನ ಹಕ್ಕು ಚಲಾಯಿಸಬೇಕು. ವಿದ್ಯಾವಂತರು ತಮ್ಮ ಗೆಳೆಯರಿಗೆ, ಮನೆಗಳಲ್ಲಿ ಮತ್ತು ತಮ್ಮ ಅಕ್ಕ-ಪಕ್ಕದವರಿಗೆ ತಪ್ಪದೇ ಮತದಾನ ಪ್ರಕ್ರಿಯೆಯಲ್ಲಿ ಭಾಗವಹಿಸುವಂತೆ ಜಾಗೃತಿ ಮೂಡಿಸಬೇಕು ಎಂದು ಹೇಳಿದರು.

ಮುಖ್ಯವಾಗಿ ಈಗಿನ ಸಂದರ್ಭದಲ್ಲಿ ಮತದಾನ ಏಕೆ ಮಾಡಬೇಕು ಎಂಬುದರ ಕುರಿತು ಸಾಕಷ್ಟು ಅರಿವು ಮೂಡಿಸುವ ಕಾರ್ಯವಾಗಬೇಕಿದೆ ಎಂದರಲ್ಲದೇ ಪ್ರತಿ ವರ್ಷದ ಥೀಮ್ ಅನ್ನು ಮತದಾರಿಗೆ ಅರ್ಪಿಸಲಾಗುತ್ತದೆ. ಎನ್‌ವಿಡಿ 2025ರ ಥೀಮ್ 'ಮತದಾನಕ್ಕಿಂತ ಇನ್ನೊಂದಿಲ್ಲ, ನಾನು ಖಚಿತವಾಗಿ ಮತ ಮಾಡುವೆ' ಎಂಬುದಾಗಿದೆ ಎಂದು ತಿಳಿಸಿದರು.

ಜಿಲ್ಲಾ ಸ್ವೀಪ್ ಸಮಿತಿಯ ಅಧ್ಯಕ್ಷರೂ ಆಗಿರುವ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಅವರು ಮಾತನಾಡಿ, ಸಂವಿಧಾನ ರಚನೆ ಸಂದರ್ಭದಲ್ಲಿ ಮತದಾನ ಹಕ್ಕು ಅಳವಡಿಸುವ ಕುರಿತು ಸಾಕಷ್ಟು ಚರ್ಚೆಯಾದವು. ಬಳಿಕ ಪ್ರತಿಯೊಬ್ಬರಿಗೂ ಮತದಾನ ಕೊಡಲೇಬೇಕು ಎಂದು ತೀರ್ಮಾನಿಸಲಾಯಿತು ಎಂದು ಅವರು ತಿಳಿಸಿದರು.

ನಮ್ಮ ದೇಶವು ಸದೃಢವಾಗಿರುವುದಕ್ಕೆ ಕಾರಣ ಭಾರತ ದೇಶದ ಚುನಾವಣಾ ಆಯೋಗದ ಆಡಳಿತ ಕಾರ್ಯವೈಖರಿಯಾಗಿದೆ. ದೇಶದಲ್ಲಿ ಅತಿಹೆಚ್ಚು ಯುವ ಮತದಾರರಿದ್ದಾರೆ. ಹಾಗಾಗಿ ತಪ್ಪದೇ ಮತದಾನ ಪ್ರಕ್ರಿಯೆಯಲ್ಲಿ ಭಾಗವಹಿಸಿ ಒಳ್ಳೆಯ ಅಭ್ಯರ್ಥಿಯನ್ನು ಆಯ್ಕೆ ಮಾಡಬೇಕು ಎಂದರು.

ಇದೇ ಸಂದರ್ಭದಲ್ಲಿ 'ಮತದಾರರ ಪ್ರತಿಜ್ಞಾ ವಿಧಿ' ಭೋದಿಸಿದರು.

ಕಾರ್ಯಕ್ರಮದಲ್ಲಿ ಸಾರ್ವತ್ರಿಕ ಲೋಕಸಭೆ ಚುನಾವಣೆ-2024 ರ ಸ್ವೀಪ್ ಕಾರ್ಯಕ್ರಮದ ಚಟುವಟಿಕೆಗಳ ಕುರಿತು 'ಬ್ಯೂಟಿಫುಲ್ ಬಳ್ಳಾರಿ' ಎಂಬ ಶೀರ್ಷಿಕೆಯಡಿ ಮುದ್ರಿಸಲಾದ 'ಕಾಫೀಟೇಬಲ್ ಬುಕ್'ಗಳನ್ನು ಗಣ್ಯರು ಅನಾವರಣಗೊಳಿಸಿದರು.

ಬಳಿಕ ರಾಷ್ಟ್ರೀಯ ಮತದಾರರ ದಿನಾಚರಣೆ ಅಂಗವಾಗಿ ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ ಮತದಾನ ಜಾಗೃತಿ ಕುರಿತು ಶಾಲಾ-ಕಾಲೇಜುಗಳಲ್ಲಿ ಏರ್ಪಡಿಸಿದ್ದ ಪ್ರಬಂಧ, ಭಿತ್ತಿಚಿತ್ರ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ಮತ್ತು ಪ್ರಶಸ್ತಿ ಪತ್ರ ವಿತರಿಸಲಾಯಿತು. 18 ವರ್ಷ ತುಂಬಿ ಹೊಸದಾಗಿ ನೋಂದಾಯಿಸಿಕೊಂಡ ಯುವ ಮತದಾರರಿಗೆ ಸಂಕೇತಿಕವಾಗಿ ಮತದಾರರ ಚೀಟಿ ವಿತರಿಸಲಾಯಿತು.

ಈ ವೇಳೆ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ರಾಜೇಶ್ ಎನ್.ಹೊಸಮನೆ, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್, ಸಹಾಯಕ ಆಯುಕ್ತ ಪ್ರಮೋದ್.ಪಿ., ತಹಶೀಲ್ದಾರ ಗುರುರಾಜ ಸೇರಿದಂತೆ ಜಿಲ್ಲಾ ಚುನಾವಣಾಧಿಕಾರಿ ಕಚೇರಿಯ ಅಧಿಕಾರಿ ಮತ್ತು ಸಿಬ್ಬಂದಿ ವರ್ಗ, ಶಾಲಾ-ಕಾಲೇಜು ವಿದ್ಯಾರ್ಥಿಗಳು ಹಾಗೂ ಇತರರು ಉಪಸ್ಥಿತರಿದ್ದರು.

# ಸಹಕಾರ ಸಂಘಗಳಲ್ಲಿ ರಾಜಕೀಯ ಹಸ್ತಕ್ಷೇಪ ಸಲ್ಲದು: ಬಿ.ಆರ್.ಪಾಟೀಲ್



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:ಜ.25:ಸಹಕಾರ ಸಂಘಗಳು ಸದೃಡವಾಗಿ ಬೆಳೆಯಬೇಕಾದರೆ ರಾಜಕೀಯ ಮುಕ್ತವಾಗಿ ಸದಸ್ಯರ ಏಳಿಗೆ ಶ್ರೇಮಿಸಬೇಕು ಎಂದು ಮುಖ್ಯ ಮಂತ್ರಿಗಳ ಸಲಹೆಗಾರರು ಹಾಗೂ ಶಾಸಕರಾದ ಶ್ರೀ ಬಿ.ಆರ್.ಪಾಟೀಲ ನುಡಿದರು.

ಸಹಕಾರಿ ರಂಗ ಪವಿತ್ರವಾದ ಕ್ಷೇತ್ರ ಇಲ್ಲಿ ಯಾವುದೇ ರಾಜಕೀಯ ಮಾಡದೇ ಕೇವಲ ಸಂಘ ಅಭಿವೃದ್ಧಿಗೆ ಮಾತ್ರ ನಿಶ್ವಾರ್ಥದಿಂದ ದುಡಿಯಬೇಕು ಎಂದು ತಿಳಿಸಿದರು.

ಕಲಬುರಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಕಲಬುರಗಿ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರುಗಳ ಸಂಯುಕ್ತ ಆಶ್ರಯದಲ್ಲಿ ವಿಶ್ವೇಶ್ವರ ಸಭಾ ಭವನದಲ್ಲಿ ಆಯೋಜಿಸಿದ ಸೌಹಾರ್ದ ಸಹಕಾರಿಗಳ ಕ್ರೀಡಾಕೂಟದ ಸಮಾರೋಪ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ಕಲಬುರಗಿ ಮತ್ತು ಯಾದಗಿರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ವ್ಯವಹಾರವು ಕಡಿಮೆ ಇದೆ ಅದೇ ಬೀದರ ಜಿಲ್ಲಾ ಸಹಕಾರ ಕೇಂದ್ರ ಸಹಕಾರ ಬ್ಯಾಂಕ್ ವ್ಯವಹಾರವು ವೃದ್ಧಿಗೊಂಡಿದೆ ಅದಕ್ಕೆ ಇಲ್ಲಿಯ ಅಧ್ಯಕ್ಷರು ಆಡಳಿತ ಮಂಡಳಿಯ ಡಿಸಿಸಿ ಬ್ಯಾಂಕ್ ಅಭಿವೃದ್ಧಿಗೆ ಯೋಜನೆಯನ್ನು ರೂಪಿಸುವಂತೆ ಸಲಹೆ ನೀಡಿದರು. ಸೌಹಾರ್ದ ಕಾಯ್ದೆಗೆ ಸ್ವತಂತ್ರ್ಯ ಸ್ವಯಂ ಆಡಳಿತ ಸ್ವಯಂ ನಿಯಂತ್ರಣದ ಅಧಿಕಾರ ಇರುವುದರಿಂದ ಇನ್ನೂ ಹೆಚ್ಚಿನ ಜವಾಬ್ದಾರಿಯನ್ನು ಆಡಳಿತ ಮಂಡಳಿಯ ಮೇಲಿದೆ ಎಂದು ತಿಳಿಸಿದರು. ಸಹಕಾರಿಗಳು ಕೇವಲ ಪತ್ತಿನ ವ್ಯವಹಾರ ಮಾತ್ರ ಮಾಡದೇ ವಿವಿಧ ಚಟುವಟಿಕೆಯನ್ನು ಕೈಗೊಂಡು ಸದಸ್ಯರಿಗೆ ಉತ್ತಮ ಸೇವೆಯನ್ನು ನೀಡಬೇಕು ಎಂದು ತಿಳಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಎ ಆರ್ ಪ್ರಸನ್ನ ಕುಮಾರ್ ಮಾನ್ಯ ಉಪಾಧ್ಯಕ್ಷರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು, ಶ್ರೀ ಗುರುನಾಥ ಜ್ಯಾಂತಿಕರ್ ಮಾನ್ಯ ನಿರ್ದೇಶಕರು ಸಂಯುಕ್ತ ಸಹಕಾರಿ, ಶ್ರೀ ಸೋಮಶೇಖರ್ ಗೋನಾಯಕ್ ಡಿಸಿಸಿ ಬ್ಯಾಂಕ್ ಅಧ್ಯಕ್ಷರು ಕಲ್ಬುರ್ಗಿ, ಶ್ರೀ ಆರ್ ಕೆ ಪಾಟೀಲ್ ಮಾನ್ಯ ಅಧ್ಯಕ್ಷರು ಶ್ರೀಧರ್ ಕಲಬುರ್ಗಿ ಮತ್ತು ಯಾದಗಿರಿ ಜಿಲ್ಲಾ ಹಾಲು ಒಕ್ಕೂಟ ನಿ., ಶ್ರೀ ಸುರೇಶ್ ಸಜ್ಜನ್ ಮಾನ್ಯ ಉಪಾಧ್ಯಕ್ಷರು ಡಿಸಿಸಿ ಬ್ಯಾಂಕ್ ಕಲಬುರಗಿ, ಶ್ರೀ ವಿಶ್ವನಾಥ್ ಜ್ಯೈ ಹಿರೇಮಠ ಮಾನ್ಯ ಅಧ್ಯಕ್ಷರು ವಿಕಾಸ ಸೌಹಾರ್ದ ಬ್ಯಾಂಕ್ ಹೊಸಪೇಟೆ, ಶ್ರೀಮತಿ ಶೈಲಜಾ ತಪಲಿ ಮಾನ್ಯ ನಿರ್ದೇಶಕರು ಸಂಯುಕ್ತ ಸಹಕಾರಿ, ಶ್ರೀ ಸಂಜು ಮಾಜನ್ ಮಾಜಿ ನಿರ್ದೇಶಕರು ಸಂಯುಕ್ತ ಸಹಕಾರಿ, ಶ್ರೀ ದತ್ತಾತ್ರೇಯ ಫಡನಿಸ್ ಅಧ್ಯಕ್ಷರು ಜನತಾ ಬಜಾರ್ ಕಲ್ಬುರ್ಗಿ ಶ್ರೀ ದೊಡ್ಡ ಬಸವರಾಜ್ ಅಧ್ಯಕ್ಷರು ರಾಯಚೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ ರಾಯಚೂರು. ಅತಿಥಿಗಳಾಗಿ ಶ್ರೀ ಶರಣ್ ಗೌಡ ಜಿ ಪಾಟೀಲ್ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಂಯುಕ್ತ ಸಹಕಾರಿ, ಶ್ರೀ ಸೂರ್ಯಕಾಂತ್ ರಾಕಲೆ ಪ್ರಾಂತೀಯ ವ್ಯವಸ್ಥಾಪಕರು ಕಲಬುರಗಿ, ಹಾಗೂ ಕಲ್ಬುರ್ಗಿ ಒಕ್ಕೂಟದ ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿಯ ಸದಸ್ಯರು ಸಿಬ್ಬಂದಿಗಳು ಉಪಸ್ಥಿತರಿದ್ದರು. ಪ್ರಾಸ್ತಾವಿ ನುಡಿಯನ್ನು ಶ್ರೀ ಶರಣಗೌಡ ಜಿ ಪಾಟೀಲ್, ಸ್ವಾಗತವನ್ನು ಶ್ರೀ ಸಂಜೀವ ಮಹಾಜನ ನಡೆಸಿಕೊಟ್ಟರು. ವೀರಶಟ್ಟಿ ಸೌಹಾರ್ದ ಅಭಿವೃದ್ಧಿ ಅಧಿಕಾರಿ ನಿರೂಪಿಸಿ ವಂದಿಸಿದರು. ಕಾರ್ಯಕ್ರಮದ ಪೂರ್ವದಲ್ಲಿ ನಗರದ ನಗರೇಶ್ವರಿ ಶಾಲೆಯಿಂದ ಸಭಾ ಭವನದ ವರೆಗೆ ಸಹಕಾರಿಗಳ ಜಾಥ ಜರುಗಿತ್ತು. ಕಾರ್ಯಕ್ರಮದಲ್ಲಿ ವಿಜೇತ ಕ್ರೀಡಾಪಟ್ಟುಗಳಿಗೆ ಪ್ರಶಸ್ತಿಗಳನ್ನು ವಿತರಿಸಲಾಯಿತ್ತು.

# ಸಂಚಾರ ನಿರ್ವಹಣೆಯಲ್ಲಿ ಕಲಬುರಗಿ ದಿಟ್ಟ ಹೆಜ್ಜೆ:ಪ್ರಿಯಾಂಕ್ ಖರ್ಗೆ




ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಜ.25:ಕಲಬುರಗಿ ನಗರದಲ್ಲಿ ಸಂಚಾರಿ ನಿಯಮಗಳನ್ನು ಉಲ್ಲಂಘಿಸುವ ಸವಾರರಿಗೆ ದಂಡ ವಿಧಿಸುವ ಇ-ಚಲನ್ ವ್ಯವಸ್ಥೆಗೆ ಇಂದಿಲ್ಲಿ ಚಾಲನೆ ನೀಡಿದ್ದು, ಸಂಚಾರ ನಿರ್ವಹಣೆ ಮತ್ತು ಸುಗಮ ದೃಷ್ಟಿಯಿಂದ ಕಲಬುರಗಿ ನಗರ ಪೊಲೀಸ್ ಉತ್ತಮ ಹೆಜ್ಜೆ ಇಟ್ಟಿದೆ ಎಂದು ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಐ.ಟಿ.-ಬಿ.ಟಿ ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ನಗರದ ಪೊಲೀಸ್ ಭವನದಲ್ಲಿ ಅಯೋಜಿಸಿದ ಕಾರ್ಯಕ್ರಮದಲ್ಲಿ ಇಂಟಲಿಜೆನ್ಸ್ ಟ್ರಾಫಿಕ್ ಮ್ಯಾನೇಜ್ಮೆಂಟ್ ಸಿಸ್ಟಮ್ (ಐ.ಟಿ.ಎಂ.ಎಸ್) ವ್ಯವಸ್ಥೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ಈ ನೂತನ ವ್ಯವಸ್ಥೆ ಜಾರಿಯಿಂದ ಕಲಬುರಗಿ ನಗರ ವ್ಯಾಪ್ತಿಯಲ್ಲಿ ಎಲ್ಲಿಯೇ ರ್‍ಯಾಶ್ ರೈಡಿಂಗ್, ತ್ರಿಬಲ್ ರೈಡಿಂಗ್, ರಾಂಗ್ ರೂಟ್, ಇಲ್ಲಿಗಲ್ ಪಾರ್ಕಿಂಗ್ ಸೇರಿದಂತೆ ಯಾವುದೇ ಸಂಚಾರ ನಿಯಮ ಉಲ್ಲಂಘಿಸಿದಲ್ಲಿ ವಾಹನ ಮಾಲೀಕರ ಹೆಸರಿಗೆ ಕ್ಷಣದಲ್ಲಿಯೇ ಐ.ಟಿ.ಎಂ.ಎಸ್. ವ್ಯವಸ್ಥೆಯಿಂದ ಮಾಲೀಕರ ಮೊಬೈಲ್‌ಗೆ ದಂಡದ ಮೊತ್ತ ತಿಳಿಸಲಾಗುತ್ತದೆ. ಅದರಂತೆ ಮಾಲೀಕರು ಆನ್ ಲೈನ್ ಮೂಲಕವೇ ದಂಡ ಪಾವತಿಸಬಹುದಾಗಿದೆ. ಇದ-ರಿಂದ ದಂಡ ವಸೂಲಿಯಲ್ಲಿ ಪಾರದರ್ಶಕತೆ ಸಹ ಬರಲಿದೆ ಎಂದರು.

ಇದಕ್ಕಾಗಿ ಕಲಬುರಗಿ ನಗರದಾದ್ಯಂತ ಪೊಲೀಸ್ ಇಲಾಖೆಯಿಂದ 113 ಕಡೆ ಸಿ.ಸಿ.ಟಿ.ವಿ ಹಾಕಿದ್ದು, ಪೊಲೀಸ್ ಭವನದಲ್ಲಿ ಇದನ್ನು ನಿಯಂತ್ರಿಸಲಾಗುತ್ತಿದೆ. ಸಾರ್ವಜನಿಕರು ಸಹ ಯಾವುದೇ ಸಂಚಾರ ಉಲ್ಲಂಘನೆ ಕಂಡುಬಂದಲ್ಲಿ 9480805500 ವಾಟ್ಸ್ಯಾಪ್ ಮೂಲಕ ದೂರು ಸಲ್ಲಿಸಿದಲ್ಲಿ ಪೊಲೀಸ್ ಇಲಾಖೆ ಕ್ರಮ ವಹಿಸುತ್ತದೆ ಎಂದ ಅವರು ಕಳೆದ ಒಂದು ವಾರದಲ್ಲಿಯೇ ಪ್ರಾಯೋಗಿಕವಾಗಿ ಸಂಚಾರಿ ನಿಯಮ ಉಲ್ಲಂಘನೆಯ 483 ಕೇಸ್ ದಾಖಲಾಗಿದೆ ಎಂದರು.

ಇನ್ನು ಕಲಬುರಗಿ ನಗರದಲ್ಲಿ ಸುಗಮ ಸಂಚಾರ ನಿರ್ವಹಣೆಗೆ ಮತ್ತು ಸಂಚಾರಿ ದಟ್ಟಣೆ ಕಡಿಮೆ ಮಾಡುವ ನಿಟ್ಟಿನಲ್ಲಿ ಪ್ರತಿಷ್ಠಿತ ಸಂಸ್ಥೆಯಿಂದ ಅಧ್ಯಯನ ಮಾಡಿ ವರದಿ ನೀಡಲು ತಿಳಿಸಿದ್ದು, ಇದಕ್ಕಾಗಿ 5 ಕೋಟಿ ರೂ. ಮೀಸಲಿಟ್ಟು ಪ್ರಸಕ್ತ 2024-25ನೇ ಸಾಲಿಗೆ ಜಿಲ್ಲೆಗೆ 2.50 ಕೋಟಿ ರೂ. ಬಿಡುಗಡೆ ಮಾಡಿದೆ ಎಂದರು.

ಫ್ಲೈ ಓವರ್ ರಸ್ತೆ ನಿರ್ಮಾಣ ಅಧ್ಯಯನಕ್ಕೆ ಸೂಚನೆ: ಕಲಬುರಗಿ ನಗರದ ಖರ್ಗೆ ಪೆಟ್ರೋಲ್ ಪಂಪ್, ರಾಮ ಮಂದಿರ, ಹಾಗರಗಾ ಕ್ರಾಸ್ ಬಳಿ ಫ್ಲೈ ಓವರ್ ಮೇಲ್ಸೇತುವೆ ನಿರ್ಮಾಣಕ್ಕೆ ಅಧ್ಯಯನ ನಡೆಸಿ ವರದಿ ನೀಡಲು ಸಂಸ್ಥೆಯೊಂದಕ್ಕೆ ಸೂಚಿಸಿದ್ದು, ವರದಿ ಬಂದ ನಂತರ ಕ್ರಮ ವಹಿಸಲಾಗುವುದು ಎಂದು ಪತ್ರಕರ್ತರ ಪ್ರಶ್ನೆಗೆ ಸಚಿವ ಪ್ರಿಯಾಂಕ್ ಖರ್ಗೆ ಉತ್ತರಿಸಿದರು.

ಮಾದಕ ದ್ರವ್ಯ ವಿರೋಧಿ ಅಭಿಯಾನ: ಜಿಲ್ಲೆಯಲ್ಲಿ ಡ್ರಗ್ಸ್ ಹಾವಳಿ ನಿಯಂತ್ರಣಕ್ಕೆ ಕೆಲವು ಕಠಿಣ ನಿರ್ಧಾರ ಕೈಗೊಂಡ ಪರಿಣಾಮ ತಕ್ಕ ಮಟ್ಟಿಗೆ ನಿಯಂತ್ರಣವಾಗಿದ್ದರೂ ಪೂರ್ಣವಾಗಿ ಮಟ್ಟ ಹಾಕಲು ಆಗಿಲ್ಲ. 2023 ರಲ್ಲಿ 51, 2024ರಲ್ಲಿ 53 ಹಾಗೂ 2025ರಲ್ಲಿ ಒಂದು ತಿಂಗಳೊಳಗೆ 108 ಪ್ರಕರಣ ದಾಖಲಿಸಿ 2 ಲಕ್ಷ ರೂ. ಮೌಲ್ಯದ ಗಾಂಜಾ ಸೇರಿದಂತೆ ನಗದು ಹಣ, ಕಾರ್, ಆಟೋ, ಸೈಕಲ್ ವಶಕ್ಕೆ ಪಡೆಯಲಾಗಿದೆ. ಇದನ್ನು ಬೇರು ಸಮೇತ ಕಿತ್ತು ಹಾಕುವ ನಿಟ್ಟಿನಲ್ಲಿ ಬಜೆಟ್ ನಂತರ ಎಂಟಿ ಡ್ರಗ್ ಅಭಿಯಾನ ಆರಂಭಿಸಲಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಕಲಬುರಗಿ ದಕ್ಷಿಣ ಶಾಸಕ ಅಲ್ಲಮಪ್ರಭು ಪಾಟೀಲ, ಕಲಬುರಗಿ ಉತ್ತರ ಶಾಸಕಿ ಮತ್ತು ಕರ್ನಾಟಕ ರೇಷ್ಮೆ ಅಭಿವೃದ್ಧಿ ನಿಯಮಿತದ ಅಧ್ಯಕ್ಷೆ ಕನೀಜ್ ಫಾತಿಮಾ, ವಿಧಾನ ಪರಿಷತ್ ಶಾಸಕರಾದ ತಿಪ್ಪಣ್ಣಪ್ಪ ಕಮಕನೂರ, ಜಗದೇವ ಗುತ್ತೇದಾರ, ಮಹಾನಗರ ಪಾಲಿಕೆ ಮೇಯರ್ ಯಲ್ಲಪ್ಪ ನಾಯ್ಕೋಡಿ, ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಜಹರ್ ಆಲಂ ಖಾನ್, ನಗರ ಪೊಲೀಸ್ ಆಯುಕ್ತ ಡಾ.ಎಸ್.ಡಿ.ಶರಣಪ್ಪ, ಮಹಾನಗರ ಪಾಲಿಕೆ ಆಯುಕ್ತ ಅವಿನಾಶ ಶಿಂಧೆ, ಎಸ್.ಪಿ. ಅಡ್ಡೂರು ಶ್ರೀನಿವಾಸಲು, ಡಿ.ಸಿ.ಪಿ ಕನಿಕಾ ಸಿಕ್ರಿವಾಲ್, ಹೆಚ್ಚುವರಿ ಎಸ್.ಪಿ. ಮಹೇಶ ಮೇಘಣ್ಣನವರ್ ಸೇರಿದಂತೆ ಪೊಲೀಸ್ ಅಧಿಕಾರಿಗಳಿದ್ದರು.

# ನಡೆ, ನುಡಿ ಒಂದಾಗಲು ಪುಸ್ತಕ ಅಧ್ಯಯನ ಅಗತ್ಯ: ಮಂಜುನಾಥ ಸುಳ್ಳೊಳ್ಳಿ



ಮಲ್ಲಮ ನುಡಿ ವಾರ್ತೆ

ಬೀದರ. ಜ. 25 : ನಮ್ಮ ನಡೆ, ನುಡಿ ಒಂದಾಗಿರಬೇಕಾದರೆ ಸಂಸ್ಕೃತಿ ಹಾಗೂ ಸಂಸ್ಕಾರ ಅಗತ್ಯ. ಅದು ಇರಬೇಕಾದರೆ ನಿತ್ಯ ಪುಸ್ತಕ ಓದುವ ಹವ್ಯಾಸ ಬೆಳೆಸಿಕೊಳ್ಳಬೇಕೆಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕ ಮಂಜುನಾಥ ಸುಳ್ಳೊಳ್ಳಿ ಅಭಿಪ್ರಾಯ ಪಟ್ಟರು.

ನಗರದ ರೋಟ್ರಿ ಸರ್ಕಲ್ ಬಳಿ ಇರುವ ಸಿರಿಗನ್ನಡ ಪುಸ್ತಕ ಮಾರಾಟ ಮಳಿಗೆ ಅವರಣದಲ್ಲಿ ಶನಿವಾರ ತಿಂಗಳ ಪುಸ್ತಕ ಪರಿಚಯ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿರುವ ಅವರು, ಪುಸ್ತಕ ಅಧ್ಯಯನ ನಮ್ಮ ಗೌರವ ಹೆಚ್ಚಿಸುತ್ತದೆ, ಜ್ಞಾನ ಭಂಡಾರ ವೃದ್ಧಿಯಾಗುತ್ತದೆ. ಸಭ್ಯತೆ, ಆಚಾರ, ವಿಚಾರ ಪರಿಶುದ್ದಗೊಂಡು ಸಮಾಜದಲ್ಲಿ ಎತ್ತರದ ಸ್ಥಾನದಲ್ಲಿ ಬದುಕುವಂಥ ವ್ಯಕ್ತಿತ್ವ ರೂಪಿಸುವಲ್ಲಿ ಸಹಕಾರ ನೀಡುತ್ತದೆ ಎಂದರು.

ಪುಸ್ತಕ ಓದುವಿಕೆ ನಮ್ಮ ನಿತ್ಯದ ಉಸಿರಾಗಬೇಕು, ನಾವು ಸಂಪಾದಿಸಿದ ಜ್ಞಾನ ಇತರರೊಂದಿಗೆ ಹಂಚಿಕೊಂಡು ಬದುಕಬೇಕು, ಮಯಬೈಲ್ ಗೀಳು ದೂರವಿರಿಸಿ ಪುಸ್ತಕ ಸಂಸ್ಕೃತಿ ಬೆಳೆಸಿಕೊಳ್ಳಬೇಕೆಂದು ಕಿವಿ ಮಾತು ಹೇಳಿದರು.

ಡಾ.ಸುನಿತಾ ಕೂಡ್ಲಿಕರ್ ರಚಿಸಿದ "ತಾಯ್ತನದ ವಿಭಿನ್ನ ಗ್ರಹಿಕೆಗಳು" ಸಂಶೋಧನಾ ಕೃತಿ ಪರಿಚಯ ಮಾಡಿದ ಕಲಬುರಗಿಯ ಖ್ಯಾತ ಸಾಹಿತಿ ಡಾ.ಚಂದ್ರಕಲಾ ಬಿದರಿ ಅವರು, ತಾಯ್ತನ ಎಂಬುದು ಕೇವಲ ಹೆಣ್ಣುಮಕ್ಕಳಿಗೆ ಸೀಮಿತವಾಗಿಲ್ಲ. ಗಂಡಸರಲ್ಲೂ ಮಾತೃಹೃದಯತೆ ಇದ್ದರೆ ಅಲ್ಲಿ ತಾಯ್ತನ ಇದೆ ಎಂದರ್ಥ. ನಮ್ಮ ದೇಶದಲ್ಲಿ ಮೊದಲು ಮಾತೃ ವಾತ್ಸಲ್ಯಕ್ಕೆ ಬೆಲೆ ಇತ್ತು, ಬರು ಬರುತ್ತ ನಮ್ಮ ದೇಶ ಪೀತೃ ಪ್ರಧಾನ ಸಮಾಜವಾಗಿ ಮಾರ್ಪಟ್ಟಿತ್ತು. ನಮ್ಮಲ್ಲಿ ಶೀಲಕ್ಕೆ ಎಲ್ಲಿಲ್ಲದ ಗೌರವ ಇದೆ. ಚೊಚ್ಚಲ ಗರ್ಭಿಣಿಸ್ತ್ರೀಗೆ ನಮ್ಮಲ್ಲಿ ಆದರದ ಸತ್ಕಾರವಿದೆ. ಆದರೆ, ಮುಟ್ಟು ಬಂದರೆ ತಿರಸ್ಕಾರವಿರುತ್ತದೆ. ಕೈಗಾರಿಕರಣ ಹಾಗೂ ಜಾಗತಿ-ಕರಣದ ಪ್ರಭಾವದಿಂದ ಇಂದು ಮಹಿಳೆ ಸಬಲಳಾಗುತ್ತಿರುವಳು. ಇದು ತುಸು ನೆಮ್ಮದಿ ತರುವ ಅಂಶವಾದರೂ ಹೆಣ್ಣಿನ ಮೇಲೆ ಅತ್ಯಾಚಾರ, ಕೊಲೆ, ಸುಲಿಗೆಗಳಂತಹ ಅನಿಶ್ಚಿತತೆ ದೂರವಾಗಬೇಕಿದೆ ಎಂದರು.

ಗೌರವ ಅತಿಥಿಗಳಾಗಿ ರಾಷ್ಟ್ರೀಯ ಜಾನಪದ ಬುಡಕಟ್ಟು ಕಲಾ ಪರಿಷತ್ತು ನವದೆಹಲಿಯ ಪ್ರಧಾನ ಕಾರ್ಯದರ್ಶಿ ಡಾ ರಾಜಕುಮಾರ ಹೆಬ್ಬಾಳೆ ಮಾತನಾಡಿ, 1993ರಲ್ಲಿ ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಸಂಘ ಸ್ಥಾಪನೆಯಾಗಿ ಈ ಭಾಗದ ಕಲಾವಿದರು ಹಾಗೂ ಸಾಹಿತ್ಯಾಸಕ್ತರಿಗೆ ವಿಭಿನ್ನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. 2007ರಲ್ಲಿ ಸಿರಿಗನ್ನಡ ಪುಸ್ತಕ ಮಾರಾಟ ಮಳಿಗೆ ಆರಂಭಿಸಿ ಸುಮಾ 10 ಲಕ್ಷಕ್ಕೂ ಅಧಿಕ ಬೆಲೆ ಬಾಳುವ ಪುಸ್ತಕಗಳಲನ್ನು ಹಲವು ಶಾಲೆಗಳಿಗೆ ವಿತರಿಸಲಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಸಂಘದ ಅಧ್ಯಕ್ಷ ಡಾ.ಜಗನ್ನಾಥ ಹೆಬ್ಬಾಳೆ ಮಾತನಾಡಿ, ಪ್ರತಿ ಮನೆಯಲ್ಲಿ ಒಂದು ಮಿನಿ ಗ್ರಂಥಾಲಯ ಇರಬೇಕು. ಅದು ನಮ್ಮ ಮನೆಯ ವಾತಾವರಣವೇ ಧನಾತ್ಮಕವಾಗಿಡುತ್ತದೆ. ಮೊಬೈಲ್ ಹಾಗೂಟ.ವಿ.ವ್ಯಾಮೋಹದಿಂದ ಹೊರಬಂದು ಪುಸ್ತಕ ಸಂಸ್ಕೃತಿಯ ಪುನರೂಜ್ಜೀವನಕ್ಕೆ ಕೈ ಜೋಡಿಸಬೇಕೆಂದು ಕರೆ ನೀಡಿದರು. ಗೊಂಡ ವಿದ್ಯಾರ್ಥಿ ಪರಿಷತ್ ಅಧ್ಯಕ್ಷ ಸಂತೋಷ ಜೋಳದಾಬಕೆ ಹಾಗೂ ಲೇ ಹಾಗೂ ಲೇಖಕಿ ಡಾ.ಸುನಿತಾ ಕೂಡ್ಲಿಕರ್ ಮಾತನಾಡಿದರು.

ಆರಂಭದಲ್ಲಿ ಕರ್ನಾಟಕ ಜಾನಪದ ಪರಿಷತ್ ತಾಲೂಕು ಅಧ್ಯಕ್ಷ ಎಸ್.ಬಿ ಕುಚಬಾಳ ದೇಶಭಕ್ತಿಗೀತೆ ಹಾಡಿದರು. ನಾಟಕ ಕಲಾವಿದ ಬಸವರಾಜ ಕಟ್ಟಿಮನಿ ವಚನ ಗಾಯನ ಮಾಡಿದರು.

# 15ನೇ ಅಂತರ ಮಹಾವಿದ್ಯಾಲಯಗಳ ಯುವಜನೋತ್ಸವಕ್ಕೆ ಚಾಲನೆ



ಮಲ್ಲಮ್ಮ ನುಡಿ ವಾರ್ತೆ

ರಾಯಚೂರ ಜ. 25 : ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರ ಹಾಗೂ ಕೃಷಿ ವಿಶ್ವ ವಿದ್ಯಾಲಯ ಇವರ ಆಶ್ರಯದಲ್ಲಿ 15ನೇ ಅಂತರ ಮಹಾವಿದ್ಯಾಲಯಗಳ ಯುವಜನೋತ್ಸವಕ್ಕೆ ಜನವರಿ 25ರಂದು ಚಾಲನೆ ಸಿಕ್ಕಿತು.

ರಾಯಚೂರಿನ ಕೃಷಿ ಮಹಾವಿದ್ಯಾಲಯದ ಶ್ರೀಜಗಜ್ಯೋತಿ ಬಸವೇಶ್ವರ ಪ್ರೇಕ್ಷಾಗೃಹದಲ್ಲಿ ನಡೆದ ಯುವಜನೋತ್ಸವದ ಕಲಾ ಸಂಭ್ರಮದಲ್ಲಿ ರಾಯಚೂರ, ಭೀಮರಾಯನಗುಡಿ, ಕಲಬುರಗಿ, ಗಂಗಾವತಿ, ಹಗರಿ ಹಾಗೂ ತಾಂತ್ರಿಕ ಮಹಾವಿದ್ಯಾಲಯ ಮತ್ತು ಸ್ನಾತಕೋತ್ತರ ಕೃಷಿ ವಿಶ್ವವಿದ್ಯಾಲಯದಿಂದ ವಿದ್ಯಾರ್ಥಿಗಳು ಹಬ್ಬದ ರೀತಿಯಲ್ಲಿ ಭಾಗಿಯಾಗಿದ್ದರು.

ಪಶುಪಾಲನೆ ಮತ್ತು ಪಶು ಸಂಗೋಪನೆ ಇಲಾಖೆಯ ನಿವೃತ್ತ ಉಪ ನಿರ್ದೇಶಕರು ಮತ್ತು ಹಾಸ್ಯ ಕಲಾವಿದರಾದ ಡಾ.ಬಸವರಾಜ ಬೆಣ್ಣೆ ಅವರು ದೀಪಬೆಳಗಿಸಿ ಯುವಜನೋತ್ಸವಕ್ಕೆ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ವಿದ್ಯಾರ್ಥಿಗಳು ಅಧ್ಯಯನದ ಜೊತೆಗೆ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗಿಯಾಗಬೇಕು. ಶಾಲೆಗಳಲ್ಲಿನ ತರಗತಿಕೋಣೆಗಳಲ್ಲಿ ಪಠ್ಯದಿಂದ ಪಡೆದುಕೊಳ್ಳುವ ಜ್ಞಾನದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಸಹಭಾಗಿಯಾಗಬೇಕು ಎಂದು ಸಲಹೆ ಮಾಡಿದರು.

ಅಧ್ಯಕ್ಷತೆ ವಹಿಸಿದ್ದ ಕೃಷಿ ಮಹಾವಿದ್ಯಾಲಯದ ಡೀನ್ ಡಾ.ನಾರಾಯಣರಾವ್ ಕೆ ಅವರು ಮಾತನಾಡಿ, ಮನುಷ್ಯ ಸಮಾಜಜೀವಿಯಾಗಿದ್ದಾನೆ. ಶಿಕ್ಷಣ ಪಡೆದು ಸಮಾಜ ಸುಧಾರಣೆಗೆ ಶ್ರಮಿಸಬೇಕು. ಓದಿನ ಜೊತೆಗೆ ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗಿಯಾದಾಗ ಧೈರ್ಯ, ಆತ್ಮವಿಶ್ವಾಸ ವೃದ್ಧಿಯಾಗಿ ನಾಯಕನಾಗಿ ಬೆಳೆಯಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಕೃಷಿ ವಿಶ್ವ ವಿದ್ಯಾಲಯದ ಕುಲಪತಿ ಡಾ.ಎಂ.ಹನುಮಂತಪ್ಪ, ಕೃಷಿ ವಿವಿಯ ವ್ಯವಸ್ಥಾಪನಾ ಮಂಡಳಿ ಸದಸ್ಯರು ಹಾಗೂ ಮಾಜಿ ವಿಧಾನಸಭಾ ಸದಸ್ಯರಾದ ಬಸನಗೌಡ ಬ್ಯಾಗವಾಟ್, ಸದಸ್ಯರಾದ ಮಲ್ಲಿಕಾರ್ಜುನ ಡಿ., ಮಲ್ಲೇಶ ಕೊಲಿಮಿ, ಸ್ನಾತ-ಕೋತ್ತರ ಡೀನ್ ಡಾ.ಗುರುರಾಜ ಸುಂಕದ, ಕುಲ ಸಚಿವ ಡಾ.ಎಂ.ವೀರನಗೌಡ, ಕೃಷಿ ತಾಂತ್ರಿಕ ವಿಭಾಗದ ಡೀನ್ ಡಾ.ಎಂ.ಎಸ್.ಅಯ್ಯನಗೌಡರ್, ಕಲಬುರಗಿ ವಿಶ್ವವಿದ್ಯಾಲಯದ ಡೀನ್ ಡಾ.ಎಂ.ಎಂ.ಧನೋಜಿ, ಭೀಮರಾಯನಗುಡಿ ಕೃಷಿ ವಿವಿ ಡೀನ್ ಡಾ.ಪಿ.ಎಚ್.ಕುಚನೂರ, ಗಂಗಾವತಿ ಮಹಾವಿದ್ಯಾಲಯದ ವಿಶೇಷಾಧಿಕಾರಿ ಡಾ.ಜಿ.ವಿಶ್ವನಾಥ, ಹಗರಿ ಮಹಾವಿದ್ಯಾಲಯದ ವಿಶೇಷಾಧಿಕಾರಿ ಡಾ.ಜಿ.ರವಿಶಂಕರ ಹಾಗೂ ಇನ್ನಿತರರು ಇದ್ದರು. ವಿಶ್ವವಿದ್ಯಾಲಯದ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ವಿಭಾಗದ ಡೀನ್ ಡಾ.ಎಸ್.ಬಿ.ಗೌಡಪ್ಪ ಪ್ರಾಸ್ತಾವಿಕ ಮಾತನಾಡಿದರು.

ಕಾರ್ಯಕ್ರಮಕ್ಕೂ ಮುನ್ನ ವಿವಿಧ ಕಲಾ ತಂಡಗಳಿಂದ ಮೆರವಣಿಗೆ ನಡೆಯಿತು.

ವಿವಿಧ ಸ್ಪರ್ಧೆಗಳು: ಯುವಜನೋತ್ಸವ ಅಂಗವಾಗಿ ಜನವರಿ 24ರಂದು ಸ್ಥಳದಲ್ಲಿಯೇ ಚಿತ್ರ ಬಿಡಿಸುವುದು, ಸುಗಮ ಸಂಗೀತ, ದೇಶಭಕ್ತಿ ಗೀತೆ, ಸಮೂಹ ಗಾಯನ ಸ್ಪರ್ಧೆ, ವ್ಯಂಗಚಿತ್ರ ರಚನಾ ಸ್ಪರ್ಧೆ, ಏಕಾಂಕ ನಾಟಕ, ಕೊಲಾಜ್ ಸ್ಪರ್ಧೆಗಳು ನಡೆದವು. ಜನವರಿ 25ರಂದು ಬೆಳಗ್ಗೆ ರಂಗೋಲಿ, ಚರ್ಚಾ ಸ್ಪರ್ಧೆ, ಭಾಷಣ ಸ್ಪರ್ಧೆ, ಆಶುಭಾಷಣಾ ಸ್ಪರ್ಧೆ, ಭಿತ್ತಿಚಿತ್ರ ಸ್ಪರ್ಧೆ, ಪ್ರಹಸನ, ಮಣ್ಣಿನಿಂದ ಆಕೃತಿ ರಚನಾ ಸ್ಪರ್ಧೆ, ಏಕಪಾತ್ರಾಭಿನಯ, ಮೂಕಾಭಿನಯ, ಜಾನಪದ ನೃತ್ಯ ಸ್ಪರ್ಧೆಗಳು ಪ್ರೇಕ್ಷಾಗೃಹ ಮತ್ತು ಇನ್ನಿತರ ಕಡೆಗಳಲ್ಲಿ ನಡೆದವು. ವಿವಿಧ ಸ್ಪರ್ಧೆಗಳಲ್ಲಿ ಭಾಗಿಯಾದ ಕೃಷಿ ಮಹಾವಿದ್ಯಾಲಯಗಳ ವಿದ್ಯಾರ್ಥಿಗಳ ಕಲಾಭಿನಯ, ಪ್ರತಿಭೆಗೆ ಪ್ರೇಕ್ಷಕರು, ವೀಕ್ಷಕರು ಚಪ್ಪಾಳೆ ತಟ್ಟಿ ಪ್ರೋತ್ಸಾಹಿಸಿದರು.

ಇಂದು ಸಮಾರೋಪ: 15ನೇ ಅಂತರ ಮಹಾವಿದ್ಯಾಲಯಗಳ ಯುವಜನೋತ್ಸವದ ಸಮಾರೋಪ ಸಮಾರಂಭವು ಜನವರಿ 26ರಂದು ಮಧ್ಯಾಹ್ನ 12 ಗಂಟೆಗೆ ಕೃಷಿ ಮಹಾವಿದ್ಯಾಲಯದ ಪ್ರೇಕ್ಷಾಗೃಹದಲ್ಲಿ ನಡೆಯಲಿದೆ. ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಯ ವಿಭಾಗೀಯ ನಿಯಂತ್ರಣಾಧಿಕಾರಿ ಚಂದ್ರಶೇಖರ ಎಂ.ಎಸ್. ಸಮಾರೋಪ ಭಾಷಣ ಮಾಡುವರು. ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ.ಎಂ.ಹನುಮಂತಪ್ಪ ಅವರು ಅಧ್ಯಕ್ಷತೆ ವಹಿಸುವರು. ಅಂ-ದು ಬೆಳಗ್ಗೆ 10 ರಿಂದ 12 ಗಂಟೆವರೆಗೆ ರಸಪ್ರಶ್ನೆ ಸ್ಪರ್ಧೆಗಳು ನಡೆಯಲಿವೆ.

# ಶಿಕ್ಷಣಕ್ಕೆ ಕರ್ಪೂರಿ ಕೊಡುಗೆ ಅಪಾರ: ಶಾಂತಕುಮಾರ ಮುಸ್ತಾಪುರ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಜ. 25 : ಕರ್ಪೂರಿ ಠಾಕೂರ್ ಹಿಂದಿ ಭಾಷೆಯ ನಿಷ್ಠರಾಗಿದ್ದರು ಮತ್ತು ಬಿಹಾರದ ಶಿಕ್ಷಣಮಂತ್ರಿಯಾಗಿ ಅವರು ಮೆಟ್ರಿಕ್ಯುಲೇಷನ್ ಪಠ್ಯಕ್ರಮಕ್ಕೆ ಇಂಗ್ಲಿಷ್ ಅನ್ನು ಕಡ್ಡಾಯ ವಿಷಯವಾಗಿ ತೆಗೆದುಹಾಕಿದರು. ಅವರು ಬಿಹಾರದಲ್ಲಿ ಸಂಪೂರ್ಣ ಮದ್ಯಪಾನ ನಿಷೇಧವನ್ನು ಜಾರಿಗೊಳಿಸಿದ ಕೀರ್ತಿ ಠಾಕೂರ್ ಅವರಿಗೆ ಸಲ್ಲುತ್ತದೆ ಎಂದು ಸವಿತ ಸವಿತಾ ಸಮಾಜದ ರಾಜ್ಯ ಕಾರ್ಯಧ್ಯಕ್ಷ ಶಾಂತಕುಮಾರ ಶ್ರೀಮಂಗಲೇ ತಿಳಿಸಿದರು.

ಬೀದರ್ ಜಿಲ್ಲಾ ಸವಿತಾ ಸಮಾಜದ ಸಭಾಂಗಣದಲ್ಲಿ ಕರ್ಪೂರಿ ಠಾಕೂರ ಅವರ ಜಯಂತಿ ಆಚರಣೆಯಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದರು.

ಠಾಕೂರ್ 1970 ರಲ್ಲಿ ಬಿಹಾರದ ಮೊದಲ ಕಾಂಗ್ರೆಸ್ಸೇತರ ಸಮಾಜವಾದಿ ಮುಖ್ಯಮಂತ್ರಿಯಾಗುವ ಮೊದಲು ಬಿಹಾರದ ಮಂತ್ರಿ ಮತ್ತು ಉಪಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದರು. ಅವರ ಆಳ್ವಿಕೆಯಲ್ಲಿ, ಬಿಹಾರದ ಹಿಂದುಳಿದ ಪ್ರದೇಶಗಳಲ್ಲಿ ಅವರ ಹೆಸರಿನಲಿ ಅನೇಕ ಶಾಲೆಗಳು ಮತ್ತು ಕಾಲೇಜುಗಳನ್ನು ಸ್ಥಾಪಿಸಿದ್ದರು. ಶಿಕ್ಷಣ ಕ್ಷೇತ್ರಕ್ಕೆ ಕರ್ಪೂರಿ ಅವರ ಕೊಡುಗೆ ಅಪಾರವಾಗಿದೆ ಎಂದು ತಿಳಿಸಿದರು. ಇದೇ ವೇಳೆ ಸಮಾಜದ ವಿಭಾಗಿಯ ಕಾರ್ಯದರ್ಶಿ ಶಿವಕುಮಾರ್ ಶಾಪೂರೆ, ಜಿಲ್ಲಾಧ್ಯಕ್ಷ ಪ್ರಕಾಶ್ ಹೊಕ್ರಾಣ, ಜಿಲ್ಲಾ ಕಾರ್ಯಧ್ಯಕ್ಷ ತಾನಾಜಿ ಸಗರ್, ಪ್ರಧಾನ ಕಾರ್ಯದರ್ಶಿ ರಾಜಕುಮಾರ ಗೊಂದೆಗಾವ್, ಉಪಾಧ್ಯಕ್ಷ ಸಂಜು ಮೋರ್ಗಿ ಸೇರಿದಂತೆ ಕರ್ಪುರಿ ಠಾಕೂರ್ ಒಬಿಸಿ ಸಂಘಟನೆ ಪದಾಧಿಕಾರಿಗಳು, ಹಿರಿಯ ಮುಖಂಡರು, ಪತ್ರಕರ್ತರಾದ ಗಂಧರ್ವ ಸೇನಾ, ಪ್ರಕಾಶ್ ಮೋರ್ಗಿ. ರಾಜು ಘೋಡಂಪಳ್ಳಿ ಮಾಣಿಕ್ ವಾಡಿ ಹಾಗೂ ಸಮಾಜದ ಮುಖಂಡರು ಉಪಸ್ಥಿತರಿದ್ದರು.

# ಜಾಗೀರದಾರಗೆ ಪರಿಷತ್ ಸದಸ್ಯ ಸ್ಥಾನಕ್ಕೆ ಬೇಡಿಕೆ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಜ. 25 : ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಸಂಜಯ್ ಜಾಗೀರದಾರ್ ಅವರಿಗೆ ವಿಧಾನ ಪರಿಷತಗೆ ನೇಮಕ ಮಾಡಬೇಕು ಎಂದು ವಿವಿಧ ಸಂಘಟನೆಗಳು ಬೇಡಿಕೆ ಮಂಡಿಸಿವೆ. ಇಂಡಿಯನ್ ಕ್ರಿಶ್ಚಿಯನ್ ವೆಲಫೇರ್ ಅಸೋಸಿಯೇಷನ್ ಹಾಗೂ ಇತರ ಸಂಘಟನೆಗಳ ಪದಾಧಿಕಾರಿಗಳು ನಗರದಲ್ಲಿ ಈಚೆಗೆ ಇಂಧನ ಸಚಿವ ಕೆ.ಜೆ. ಜಾರ್ಜ್ ಹಾಗೂ ಬೀದರ್ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರಿಗೆ ಈ ಕುರಿತು ಮನವಿ ಪತ್ರ ಸಲ್ಲಿಸಿದರು. ಸಂಜಯ್ ಜಾಗೀರದಾರ್ ಅವರು 35 ವರ್ಷಗಳಿಂದ ಕಾಂಗ್ರೆಸ್ ಪಕ್ಷದ ಸಂಘಟನಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ ಎಂದು ತಿಳಿಸಿದರು. ವಿದ್ಯಾರ್ಥಿ ಕಾಂಗ್ರೆಸ್ ಬೀದರ್ ಜಿಲ್ಲಾ ಘಟಕದ ಅಧ್ಯಕ್ಷ, ಕಾಂಗ್ರೆಸ್ ಯುವ ಘಟಕದ ಜಿಲ್ಲಾ ಘಟಕದ ಅಧ್ಯಕ್ಷ, ರಾಜ್ಯ ಘಟಕದ ಕಾರ್ಯದರ್ಶಿ ಸೇರಿ ವಿವಿಧ ಹುದ್ದೆಗಳಲ್ಲಿ ಪಕ್ಷಕ್ಕಾಗಿ ಸೇವೆ ಸಲ್ಲಿಸಿದ್ದಾರೆ. ಪ್ರಸ್ತುತ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಯಾಗಿದ್ದಾರೆ ಎಂದು ಹೇಳಿದರು.

2018 ಮತ್ತು 2023 ರಲ್ಲಿ ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರದ ಪಕ್ಷದ ಟಿಕೆಟ್ ಪ್ರಬಲ ಆಕಾಂಕ್ಷಿಯಾಗಿದ್ದರು. ಕ್ರೈಸ್ತ ಸಮುದಾಯದ ನಾಯಕರಾದ ಅವರಿಗೆ ವಿಧಾನ ಪರಿಷತ್ ಸದಸ್ಯ ಸ್ಥಾನದ ನಾಮನಿರ್ದೇಶನದಲ್ಲಿ ಆದ್ಯತೆ ನೀಡಬೇಕು ಎಂದು ಒತ್ತಾಯಿಸಿದರು.

# ಅತ್ಯುತ್ತಮ ಚುನಾವಣಾ ಕಾರ್ಯನಿರ್ಹಣೆ ರಾಜ್ಯ ಪ್ರಶಸ್ತಿಗೆ ಬಾಜನರಾದ ಡಿಸಿ ಜಾನಕಿ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ : ಜ. 25 : ಕಳೆದ ಲೋಕಸಭಾ ಚುನಾವಣೆಯಲ್ಲಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿದ ಜಿಲ್ಲಾಧಿಕಾರಿ ಜಾನಕಿ ಕೆ.ಎಂ ಅವರಿಗೆ ರಾಜ್ಯಮಟ್ಟದ ಅತ್ಯುತ್ತಮ ಚುನಾವಣಾ ಕಾರ್ಯನಿರ್ವಹಣಾ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಶನಿವಾರ ಬೆಂಗಳೂರಿನ ಶ್ರೀ ಪುಟ್ಟಣ್ಣ ಚೆಟ್ಟಿ ಟೌನ್ ಹಾಲನಲ್ಲಿ ಜರುಗಿದ ರಾಷ್ಟ್ರೀಯ ಮತದಾನ ದಿನಾಚರಣೆ ಕಾರ್ಯಕ್ರಮದಲ್ಲಿ ರಾಜ್ಯದ ರಾಜ್ಯಪಾನ ಥಾವರ್ ಚಂದ್ ಗೇಹ್ಲೋಟ್ ಅವರಿಂದ ರಾಜ್ಯ ಮಟ್ಟದ ಪ್ರಶಸ್ತಿಯನ್ನು ಪಡೆದುಕೊಂಡರು. ಪ್ರಶಸ್ತಿಗೆ ಬಾಜನರಾದ ಜಿಲ್ಲಾಧಿಕಾರಿ ಜಾನಕಿ ಕೆ.ಎಂ ಅವರಿಗೆ ಜಿಲ್ಲೆಯ ಎಲ್ಲ ಅಧಿಕಾರಿಗಳು ಅಭಿನಂದನೆ ಸಲ್ಲಿಸಿದ್ದಾರೆ.

# ಪ್ರತಿಯೊಬ್ಬರು ತಪ್ಪದೇ ಮತದಾನ ಮಾಡಬೇಕು:ಕುಲಪತಿ ಡಾ.ವಿ.ಎಸ್.ಬಿರಾದಾರ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಜ.25: ಭಾರತವು ಬಲಿಷ್ಠವಾದ ಪ್ರಜಾಪ್ರಭುತ್ವ ದೇಶ. ಅರ್ಹ ಮತದಾರರು ತಪ್ಪದೇ ಮತಗಟ್ಟೆಗೆ ತೆರಳಿ ಮತ ಚಲಾಯಿಸಿ ತಮ್ಮಿಷ್ಟದ ವ್ಯಕ್ತಿಯನ್ನು ಆಯ್ಕೆ ಮಾಡಬೇಕೆಂದು ಬೀದರ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ.ವಿ.ಎಸ್.ಬಿರಾದಾರ ಹೇಳಿದರು.

ರಂಗಮಂದಿರದಲ್ಲಿಂದು ಬೀದರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಆಶ್ರಯದಲ್ಲಿ ಜರುಗಿದ ರಾಷ್ಟ್ರೀಯ ಮತದಾರರ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು.

ಮತದಾನದ ದಿನದಂದು ಮತ ಹಾಕದಿರಲು ಯಾವುದೇ ನೆಪ ಹೇಳದೆ ತಪ್ಪದೇ ಮತದಾನ ಮಾಡಬೇಕು. ಮತಕ್ಕಿಂತ ಮಹತ್ವ ಇನ್ನೊಂದಿಲ್ಲ. ನಾನು ಖಚಿತವಾಗಿ, ಕಡ್ಡಾಯವಾಗಿ ಮತದಾನ ಮಾಡುತ್ತೇನೆಂದು ಪ್ರತಿಜ್ಞೆಗೈದು, ಯಾವುದೇ ಆಶೆ, ಆಕ್ಷಾಂಕ್ಷೆಗಳಿಗೆ ಒಳಗಾಗದೇ ಮತ ಚಲಾಯಿಸಬೇಕೆಂದು ಯುವ ವಿದ್ಯಾರ್ಥಿಗಳಿಗೆ ತಿಳಿಸಿದರು. ತಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ಇರುವ ಬಗ್ಗೆ ಖಚಿತಪಡಿಸಿಕೊಳ್ಳಬೇಕೆಂದರು.

ಸರಕಾರದ ವಿವಿಧ ಸಹಾಯ ಸೌಲಭ್ಯ ಪಡೆಯಲು ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸುವ ನಿಟ್ಟಿನಲ್ಲಿ 18 ವರ್ಷ ಮೇಲ್ಪಟ್ಟವರು ಕಡ್ಡಾಯವಾಗಿ ಮತದಾನ ಮಾಡುವುದಲ್ಲದೇ ತಮ್ಮ ಸುತ್ತಮುತ್ತಲಿನವರೆಲ್ಲರನ್ನು ಮತ ಚಲಾಯಿಸುವಂತೆ ಪ್ರೇರೆಪಿಸಬೇಕೆಂದರು.

ಮತದಾನ ದಿನದಂದು ಕುಂಟು ನೆಪ ಹೇಳಿ ತಮ್ಮ ಸಾಂವಿಧಾನಿಕ ಹಕ್ಕನ್ನು ಚಲಾಯಿಸಬೇಕು. ಚುನಾವಣೆ ಪ್ರಜಾಪ್ರಭುತ್ವದ ರಾಷ್ಟ್ರೀಯ ಹಬ್ಬ. ಈ ಹಬ್ಬದಲ್ಲಿ ಎಲ್ಲರು ಸಂತಸದಿಂದ ಸಕ್ರಿಯವಾಗಿ ಪಾಲ್ಗೊಂಡು ಮತದಾನ ಮಾಡುವುದು ನಮ್ಮೆಲ್ಲರ ಜವಾಬ್ದಾರಿ. ಭಾರತದ ಸದೃಢ ಅಭಿವೃದ್ಧಿಗಾಗಿ ಹಾಗೂ ಸುಸ್ಥಿರ ಸರ್ಕಾರದ ನಿರ್ಮಾಣಕ್ಕಾಗಿ ಎಲ್ಲರೂ ಮತದಾನ ಮಾಡಬೇಕೆಂದರು.

ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅವರು ಮತದಾರರಿಗೆ ಪ್ರತಿಜ್ಞಾವಿಧಿ ಬೋಧಿಸಿ ಮಾತನಾಡಿ, ಯುವ ಮತದಾರರು 18 ರಿಂದ 21 ವಯಸ್ಸಿನ ಯುವಕರ ಪಾತ್ರ ಚುನಾವಣೆಯಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಯಾವುದೇ ಆಶೆ, ಆಮೀಶಗಳಿಗೆ ಒಳಗಾಗಿ ಜವಾಬ್ದಾರಿಯಿಂದ ತಮ್ಮಿಷ್ಟದ ಅಭ್ಯರ್ಥಿಗೆ ಮತ ಚಲಾಯಿಸಬೇಕೆಂದರು. ಮತದಾನದಿಂದ ಪ್ರಜಾಪ್ರಭುತ್ವ ಸದೃಢಗೊಳ್ಳುತ್ತದೆ. ಸ್ಥಿರ ಸರ್ಕಾರ ರಚನೆಗೊಳ್ಳುತ್ತದೆ. ಇದರಿಂದ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಕಾಣಬಹುದು. ಪ್ರತಿ ಐದು ವರ್ಷಕ್ಕೊಮ್ಮೆ ನಮಗೆ ಮತದಾನದ ಅವಕಾಶ ದೊರೆಯುತ್ತದೆ. ಕಾಲೇಜು ವಿದ್ಯಾರ್ಥಿಗಳಲ್ಲಿ ಮತದಾನದ ಜಾಗೃತಿ ಮೂಢಿಸಲು ಜಿಲ್ಲಾಡಳಿತದಿಂದ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗುತ್ತಿದೆ. ಯುವಕರು ತಮ್ಮ ಮೊಬೈಲ್‌ನಲ್ಲಿ ವೋರ್ಸ್ ಹೆಲ್ಪಲೈನ್ ಆ ??ಪ್ ಡೌನಲೋಡ ಮಾಡಿ ಫಾರ್ಮ ನಂ. 6 ಭರ್ತಿ ಮಾಡಬೇಕೆಂದು ಜಿಲ್ಲಾಧಿಕಾರಿಗಳು ಹೇಳಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ ಗುಂಟಿ ಮಾತನಾಡಿ, ಹಿರಿಯರ ಸ್ವಾತಂತ್ರ ಹೋರಾಟದಿಂದಾಗಿ ದೇಶಕ್ಕೆ ಸ್ವಾತಂತ್ರ ?? ದೊರೆಕಿದ್ದು, ಪ್ರತಿಯೊಬ್ಬರು ಸ್ವತಂತ್ರತೆಯನ್ನು ಸ್ವಚ್ಛವಾಗಿ ಜೀವಿಸಲು ಭದ್ರ ಪ್ರಜಾಪ್ರಭುತ್ವದ ಸರಕಾರ ಅಗತ್ಯ. ಜಗತ್ತಿನಲ್ಲಿ ಭಾರತ ಅತಿ ದೊಡ್ಡ ಪ್ರಜಾಪ್ರಭುತ್ವದೇಶ. ಚುನಾವಣೆ ಹಾಗೂ ಮತದಾನ ಮಹತ್ವವಾಗಿದ್ದು ಪ್ರತಿಯೊಬ್ಬರು ಕಡ್ಡಾಯವಾಗಿ ಮತ ಚಲಾಯಿಸಿ ತಮ್ಮ ಹಕ್ಕನ್ನು ಚಲಾಯಿಸಬೇಕೆಂದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಮಟ್ಟದಲ್ಲಿ ಕಾರ್ಯನಿರ್ವಹಿಸಿದ ಅಧಿಕಾರಿಗಳು, ರಾಷ್ಟ್ರೀಯ ಮತದಾರ ದಿನಾಚರಣೆ ಅಂಗವಾಗಿ ಏರ್ಪಡಿಸಿದ್ದ ಪ್ರಬಂಧ ಸ್ಪರ್ಧೆ, ಚಿತ್ರಕಲಾ ಸ್ಪರ್ಧೆ, ರಂಗೋಲಿ ಸ್ಪರ್ಧೆ, ಮತದಾನ ಜಾಗೃತಿ ಕುರಿತು ರಿಲ್ಸ್ ಹಾಗೂ ಮತದಾರರ ಜಾಗೃತಿ ಲೋಗೋ ತಯ್ಯಾರಿಸಿದವರಿಗೆ ಪ್ರಶಸ್ತಿ ಪ್ರಧಾನ ಮಾಡಿ ಯುವ ಮತದಾರರ ಸಾಂಕೇತಿಕವಾಗಿ ಎಪಿಕ್ ಕಾರ್ಡ ವಿತರಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಸಹಾಯಕ ಆಯುಕ್ತರಾದ ಎಂ.ಡಿ.ಶಕೀಲ್, ಅಪರ ಜಿಲ್ಲಾಧಿಕಾರಿಗಳಾದ ಶಿವಕುಮಾರ ಶೀಲವಂತ, ಜಿಲ್ಲಾ ಪಂಚಾಯತ ಉಪ ಕಾರ್ಯದರ್ಶಿ ಮುತ್ತಣ್ಣ ಕಲಿಗಾರ, ಬೀದರ ವಿಶ್ವವಿದ್ಯಾಲಯದ ಕುಲಸಚಿವರು, ಸುರೇಖಾ, ರಾಜ್ಯ ಮಾಸ್ಟರ ಟ್ರೇನರ ಗೌತಮ ಅರಳಿ, ವಿವಿಧ ಶಾಲಾ ಕಾಲೇಜು ವಿದ್ಯಾರ್ಥಿಗಳು, ಶಿಕ್ಷಕರು ಸೇರಿದಂತೆ ಇತರರು ಉಪಸ್ಥಿತರಿದ್ದರು.










## ನಾಳೆ 10*7 ಅಡಿಯ "ಭಾರತದ ಸಂವಿಧಾನ ಪೀಠಿಕೆ" ಉದ್ಘಾಟನಾ ಕಾರ್ಯಕ್ರಮ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಜ.25:76ನೇ ಗಣರಾಜ್ಯೋತ್ಸವದಿನಾಚರಣೆ ಅಂಗವಾಗಿ ಜ.26 ರಂದು ಬೆಳಿಗ್ಗೆ 08 ಗಂಟೆಗೆ ನಗರದ ಹೆಚ್.ಆರ್.ಗವಿಯಪ್ಪ ವೃತ್ತ ಪಕ್ಕದಲ್ಲಿನಡಾ.ಬಿ.ಆರ್.ಅಂಬೇಡ್ಕರ್ ಉದ್ಯಾನವನದಲ್ಲಿಆಂಗ್ಲಮತ್ತು ಕನ್ನಡ ಭಾಷೆಗಳಲ್ಲಿ ಗ್ರೆನೇಟ್ ಕಲ್ಲಿನಲ್ಲಿ ಕೆತ್ತನೆ ಮಾಡಲಾದ 10*7 ಅಡಿಯ "ಭಾರತದ ಸಂವಿಧಾನ ಪೀಠಿಕೆ"ಯ ಉದ್ಘಾಟನಾಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಪೌರಾಡಳಿತ ಮತ್ತು ಹಜ್ ಸಚಿವರಾದ ರಹೀಮ್ ಖಾನ್ ಅವರು ಉದ್ಘಾಟನೆ ನೆರವೇರಿಸುವರು.

ಕಾರ್ಯಕ್ರಮದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ ಹಾಗೂ ಇತರೆ ಸರ್ಕಾರೇತರ ಸಂಸ್ಥೆಗಳು, ಸಂಘ ಸಂಸ್ಥೆಗಳು, ಕನ್ನಡ ಪರ ಸಂಘಟನೆಗಳು, ಡಾ.ಬಿ.ಆರ್. ಅಂಬೇಡ್ಕರ್‌ಅನುಯಾಯಿಗಳು ಮತ್ತು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮಯಶಸ್ವಿಗೊಳಿಸಬೇಕು ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಮಲ್ಲಿಕಾರ್ಜುನ ಅವರು ತಿಳಿಸಿದ್ದಾರೆ.

## ಅಂಗವಿಕಲ ಬಾಲಕಿ ಮೇಲೆ ಅತ್ಯಾಚಾರ: ಅಪರಾಧಿಗೆ ಜೀವಾವಧಿ ಶಿಕ್ಷೆ

ಬೀದರ. ಜ. 25 : ಅಂಗವಿಕಲ ಬಾಲಕಿ ಮೇಲೆ ಅತ್ಯಾಚಾರ ನಡೆಸಿದ ಅಪರಾಧಿ,ಬೀದರ್‌ನ ರಫೀಕ್ ಇಸ್ಮಾಯಿಲ್‌ಸಾಬ್ ಪಟೇಲ್ ಎಂಬಾತನಿಗೆನಗರದ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ವಿಶೇಷ ನ್ಯಾಯಾಲಯ ಜೀವಾವಧಿ ಶಿಕ್ಷೆ ಹಾಗೂ ?50 ಸಾವಿರ ದಂಡ ವಿಧಿಸಿದೆ. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರವು ನೊಂದ ಬಾಲಕಿಗೆ ?50 ಸಾವಿರ ಪರಿಹಾರ ನೀಡಬೇಕು ಎಂದು ನ್ಯಾಯಾಧೀಶ ಸಚಿನ್ ಕೌಶಿಕ್ ಆರ್.ಎನ್. ಆದೇಶಿಸಿದ್ದಾರೆ.

ಬಾಲಕಿಯ ತಾಯಿ ನೀಡಿದ ದೂರಿನ ಮೇರೆಗೆ 2024ರ ಮೇ 28ರಂದು ಗ್ರಾಮೀಣ ಠಾಣೆಯಲ್ಲಿ ಪೋಕ್ಸೊ ಕಾಯ್ದೆ ಅಡಿ ಪ್ರಕರಣ ದಾಖಲಾಗಿತ್ತು.



# ಯುವ ಸಂಪತ್ತು ಸುಸಂಸ್ಕೃತವಾಗಲು ಸಂಸ್ಕಾರ ಅಗತ್ಯ: ಡಾ.ಅಬ್ದುಲ್ ಖದಿರ್

ಮಲ್ಲಮ್ಮ ನುಡಿ ವಾರ್ತೆ

ಬೀದರ. ಜ. 25 : ಯುವ ಸಂಪತ್ತು ಸುಸಂಸ್ಕೃತವಾಗಲು ಸಂಸ್ಕಾರ ಅಗತ್ಯವೆಂದು ಶಾಹಿನ್ ಸಮೂಹ ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ.ಅಬ್ದುಲ್ ಖದೀರ್ ತಿಳಿಸಿದರು.

ಬುಧವಾರ ನಗರದ ಲಾಡಗೇರಿ ಹಿರೇಮಠ ಸಂಸ್ಥಾನದಲ್ಲಿ ಮಂಗಲಾ ಮಹಿಳಾ ಗ್ರಾಮೀಣಾಭಿವೃದ್ಧಿ ಸಂಸ್ಥೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ ಸಹಯೋಗದಲ್ಲಿ 2023-24ನೇ ಸಾಲಿನ ಸಂಘ-ಸಂಸ್ಥೆಗಳ ಧನಸಹಾಯ ಸಾಮಾನ್ಯ ಯೋಜನೆ ಅಡಿಯಲ್ಲಿ ಜರುಗಿದ ಜಾನಪದ ಸಂಭ್ರಮ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಇಂದು ಯುವ ಜನಾಂಗ ಪಾಶ್ಚಾತ್ಯ ಉಡುಪು, ಆಹಾರ ಪದ್ಧತಿ, ಸಂಸ್ಕೃತಿ ಅನುಸರಿಸಿ ಭವ್ಯ ಇತಿಹಾಸ ಹೊಂದಿದ ನಮ್ಮ ಭಾರತೀಯ ಸಂಸ್ಕೃತಿ ಮರೆಯುತ್ತಿದ್ದಾರೆ. ವಿದೇಶಿಗರು ನಮ್ಮ ಸಂಸ್ಕೃತಿ ಅನುಸರಿಸುತ್ತಿರುವಾಗ ನಮ್ಮ ಯುವಕರಿಗೇಕೆ ವಿದೇಶಿಗರ ವ್ಯಾಮೋಹ ಹೆಚ್ಚಾಗಿದೆ? ನಮ್ಮ ಸಂಸ್ಕೃತ ಹಾಗೂ ಸಂಪ್ರದಾಯದ ಕಟುಸತ್ಯ ಅರಿತು ನಮ್ಮತನ ಉಳಿಸಿಕೊಳ್ಳಲು ಮಾತೃಭಾಷೆ, ಮಾತೃ ಸಂಸ್ಕೃತಿಗೆ ಒತ್ತು ನೀಡಬೇಕೆಂದು ಕರೆ ಕೊಟ್ಟರು.

ನಮ್ಮ ಶಾಹಿನ್ ಕಾಲೇಜಿನಲ್ಲಿ ಇಂದು ಉತ್ತರಪ್ರದೇಶದಂಥ ರಾಜ್ಯದ ವಿದ್ಯಾರ್ಥಿಗಳು ಬಂದು ಕನ್ನಡ ಕಲಿಯುತ್ತಿರುವರು. ನಮ್ಮದು ಆಂಗ್ಲಭಾಷೆಯ ಶಿಕ್ಷಣ ಸಂಸ್ಥೆ ಇದ್ದರೂ ಕನ್ನಡ ಬೋಧನೆಗೆ ವಿಶೇಷ ಒತ್ತು ನೀಡಲಾಗಿದೆ. ಅದಕ್ಕಾಗಿ ನಮ್ಮಲ್ಲಿ ವಿಭಿನ್ನ ಕಾರ್ಯ ಚಟುವಟಿಕೆಗಳನ್ನು ಹಾಗೂ ಜಾಗೃತಿ ಶಿಬಿರಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ವಿವರಿಸಿದರು.




ಸಾನಿಧ್ಯ ವಹಿಸಿದ ಚಾಂಬೋಳ ಹಿರೇಮಠದ ಪೂಜ್ಯ ಅಭಿನವ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಯುವಜನರಿಗೆ ವಿದ್ಯೆ ಜೊತೆ-ಗೆ ವಿನಯತೆ, ಸಂಸ್ಕಾರದ ಜೊತೆಗೆ ಸಂಸ್ಕೃತಿ, ಸಭ್ಯತೆಯ ಜೊತೆಗೆ ಉತ್ತಮ ನಡೆ, ನುಡಿ ಅಗತ್ಯವಾಗಿದೆ. ಇದು ಸಂಸ್ಕೃತಿ ಹಾಗೂ ಜಾನಪದ ಕಲೆಯನ್ನು ಎತ್ತರೆತ್ತರಕ್ಕೆ ಕೊಂಡೊಯ್ಯಲು ಸಹಕಾರ ನೀಡುತ್ತವೆ. ಇಂದು ಯುವಜನರು ಮಠ, ಮಂದಿರಗಳತ್ತ ಮುಖ ಮಾಡಿದರೆ ಅಳಿವಿನ ಅಂಚಿನಲ್ಲಿರುವ ನಮ್ಮ ಸಂಸ್ಕೃತಿ ಉಳಿಯಲು ಸಾಧ್ಯವಿದೆ ಎಂದರು.

ಪ್ರಜಾಪಿತಾ ಬ್ರಹ್ಮಾಕುಮಾರಿ ಈಶ್ವರಿಯ ವಿಶ್ವವಿದ್ಯಾಲಯ ರಾಜಯೋಗ ಕೇಂದ್ರ ಪಾವನಧಾಮದ ಹಿರಿಯ ರಾಜಯೋಗ ಶಿಕ್ಷಕಿ ಬಿ.ಕೆ ಗುರುದೇವಿ ಅಕ್ಕನವರು ಮಾತನಾಡಿ, ಯುವ ಸಂಪತ್ತು ಬಲಿಷ್ಟವಾಗಲು ಧರ್ಮ ಹಾಗೂ ಅಧ್ಯಾತ್ಮವನ್ನು ಮೈ ಗೂಡಿಸಿಕೊಳ್ಳಬೇಕು, ಜಗತ್ತಿನ 142ಕ್ಕೂ ಅಧಿಕ ದೇಶಗಳಲ್ಲಿ ಈಶ್ವರಿಯ ವಿಶ್ವವಿದ್ಯಾಲಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಯುವ ಸಂಪತ್ತು ಅಧ್ಯಾತ್ಮದೆಡೆಗೆ ಮುಖ ಮಾಡಲು ನಮ್ಮ ಕೇಂದ್ರಗಳಲ್ಲಿ ನಿತ್ಯ ನಡೆಯುವ ರಾಜಯೋಗ ಶಿಬಿರದಲ್ಲಿ ಪಾಲ್ಗೊಳ್ಳುವಂತೆ ಕರೆ ನೀಡಿದರು.

ರಾಷ್ಟ್ರೀಯ ಜಾನಪದ ಬುಡಕಟ್ಟು ಹಾಗೂ ಕಲಾ ಪರಿಷತ್ ಪ್ರಧಾನ ಕಾರ್ಯದರ್ಶಿ ಡಾ.ರಾಜಕುಮಾರ ಹೆಬ್ಬಾಳೆ ಮಾತನಡಿ, ಜಾನಪದ ಕಲೆ, ಸಾಹಿತ್ಯ ಹಾಗೂ ಸಂಗೀತ ಇಂದು ಪ್ರತಿಯೊಬ್ಬರಿಗೆ ಅನಿವಾರ್ಯವಾಗಿದೆ. ಅದು ಆರೋಗ್ಯದ ಮೇಲೂ ಉತ್ತಮ ಪರಿಣಾಮ ಬಿರುತ್ತದೆ. ಈ ನಿಟ್ಟಿನಲ್ಲಿ ಕೆಲವೇ ದಿನಗಳಲ್ಲಿ ಬೀದರ್‌ನಲ್ಲಿ ಅಂತರಾಷ್ಟ್ರೀಯ ಜಾನಪದ ಸಮ್ಮೇಳನ ಹಮ್ಮಿಕೊಳ್ಳಲು ತಿರ್ಮಾನಿಸಲಾಗಿದೆ ಎಂದರು.

ಕರ್ನಾಟ ಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಸದಸ್ಯ ಡಾ.ಸಂಜೀವಕುಮಾರ ಅತಿವಾಳೆ ಮಾತನಾಡಿದರು. ಖ್ಯಾತ ರಾಜ್ಯ ಮಟ್ಟದ ಕಲಾವಿದೆ ರೇಖಾ ಅಪ್ಪಾರಾವ ಸೌದಿ ಭಕ್ತಿಗೀತೆ ಗಾಯನ ನಡೆಸಿಕೊಟ್ಟರು. ಲಾಡಗೇರಿ ಹಿರೇಮಠ ಸಂಸ್ಥಾನದ ಪೀಠಾಧಿಪತಿ ಪೂಜ್ಯ ಷ.ಬ್ರ ಗಂಗಾಧರ ಶಿವಾಚಾರ್ಯರು ಸಾನಿಧ್ಯ ವಹಿಸಿದ್ದರು.

ಇದೇ ಸಂದರ್ಭದಲ್ಲಿ ಖಾದ್ರಿ ಶಾಮಣ್ಣ ರಾಜ್ಯ ಪ್ರಶಸ್ತಿ ಪುರಸ್ಕೃತರಾದ ಅಪ್ಪಾರಾವ ಸೌದಿ, ಪತ್ರಕರ್ತರಾದ ಶಿವಕುಮಾರ ಸ್ವಾಮಿ, ಸಾಹಿತಿ ಚೆನ್ನಮ್ಮ ವಲ್ಲೆಪುರೆ, ಸಿದ್ದಮ್ಮ ಬಸನುರೆ, ಸರಸ್ವತಿ ಹುಲಸುರೆ, ಧನರಾಜ ರೆಡ್ಡಿ, ಹಂಶಕವಿ, ಪ್ರಭು ಮಾಲೆ, ಅರವಿಂದ ಶೆಂಬಾಳೆ, ಸತೀಶ ಬೆಳಕೋಟೆ, ಸಂಗಮೇಶ ಬಾವಿದೊಡ್ಡಿ ಅವರನ್ನು ಸನ್ಮಾನಿಸಲಾಯಿತು.

ಪ್ರಿಯಂಕಾ ಹಾಗೂ ಶ್ರೀಗುರು ಜಾನಪದ ಗೀತೆ ಪ್ರಸ್ತುತಪಡಿಸಿದರು. ರಾಣಿ ಸತ್ಯಮೂರ್ತಿ ನೇತೃತ್ವದ ನಾಟ್ಯಶ್ರೀ ನೃತ್ಯಾಲಯದ ಕಲಾವಿದರಿಂದ ಜಾನಪದ ನೃತ್ಯ ಜರುಗಿತು. ನಿರ್ಮಲಾ ಹಾಗೂ ಸಂಗಡಿಗರಿಂದ ಕೋಲಾಟ, ದೇವಿದಾಸ ಚಿಮಕೊಡೆ ಮತ್ತು ಸಂಗಡಿಗರಿಂದ ಗೀ ಗೀ ಪದ ಹಾಗೂ ಹಲಗೆ ವಾದನ ನಡೆಸಿಕೊಟ್ಟರು. ದಿಲಿಪ ಕಾಡವಾದ ಹಾಗೂ ಸಂಗಡಿಗರು ನಾಡಗೀತೆ ಹಾಗೂ ದೇಶ ಭಕ್ತಿಗೀತೆಗಳನ್ನು ಪ್ರಸ್ತುತಪಡಿಸಿದರು. ಕಾಶಿನಾಥ ಭಂಗುರೆ ಹಾಗೂ ಸಂಗಡಿಗರು ಭಜನೆ ಪದಗಳು ನಡೆಸಿಕೊಟ್ಟರು. ಗುಂಡಮ್ಮ ಮಾಲಿ ಪಾಟೀಲ ಬೀಸುವ ಪದ, ಜೋಗುಳ ಪದ ಹಾಡಿದರು. ಕು.ಸ್ವರದಿನಿ ಮತ್ತು ಸಂಗಡಿಗರಿಂದ ಜಾನಪದ ನೃತ್ಯ ಜರುಗಿತು. ಕು.ಭವಾನಿ ಮರಕಲೆ ಹಾಗೂ ಸಂಗಡಿಗ-ರಿಂದ ಭರತ ನಾಟ್ಯ ಜರುಗಿತು. ಕು.ಭಾಗ್ಯಶ್ರೀ ಹಾಗೂ ಸಂಗಡಿಗ-ರಿಂದ ಜಾನಪದ ನೃತ್ಯ, ಕು. ವರ್ಷಾ ಹಾಗೂ ಸಂಗಡಿಗರಿಂದ ಜಾನಪದ ಗೀತೆ, ಕಲಾವತಿ ಹಾಗೂ ಸಂಗಡಿಗರು ಭಜನೆ ನಡೆಸಿಕೊಟ್ಟರು. ಕು.ಭಾಗ್ಯಶ್ರೀ ಶಿವಣಗೆ ಹಾಗೂ ಸಂಗಡಿಗರು ಜಾನಪದ ನೃತ್ಯಗೈದರು. ಕಲಾ ಪ್ರದರ್ಶನಗೈದ ಎಲ್ಲ ಎಲ್ಲ ಕಲಾ ಪ್ರತಿಭೆಗಳಿಗೆ ಪ್ರಮಾಣ ಪತ್ರ ನೀಡಿ ಗೌರವಿಸಲಾಯಿತು.

ಶ್ರೀಮಠದ ಭಕ್ತಾದಿಗಳಾದ ಮಲ್ಲಪ್ಪ ಹುಲೆಪ್ಪನೋರ, ಚಂದ್ರಪ್ಪ ಅಷ್ಟುರ್, ಶಿವರಾಜ ಅಷ್ಟುರ, ರುದ್ರಮುನಿ ಸ್ವಾಮಿ, ವೀರುಪಾಕ್ಷಯ್ಯ ಸ್ವಾಮಿ ಹಾಗೂ ಇತರರು ಕಾರ್ಯಕ್ರಮದಲ್ಲಿದ್ದರು.

ಆರಂಭದಲ್ಲಿ ಮಂಗಲಾ ಮಹಿಳಾ ಗ್ರಾಮೀಣಾಭಿವೃದ್ಧಿ ಸಂಸ್ಥೆ ಅಧ್ಯಕ್ಷೆ ಕು.ಮಂಗಲಾ ಮರಕಲೆ ಸ್ವಾಗತಿಸಿ, ಶ್ರೀ ಪರ್ವತಲಿಂಗ ಶಿವಾಚಾರ್ಯರು ಶಿಶು ಮಂದಿರ ಹಾಗೂ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಗುರು ಸಿದ್ರಾಮಯ್ಯ ಹಿರೇಮಠ ಕಾರ್ಯಕ್ರಮ ನಿರೂಪಿಸಿದರು.

# ಮತದಾನದಿಂದ ದೂರ,ಅದು ಸಂವಿಧಾನಕ್ಕೆ ಮಾಡಿದ ಅಪಚಾರ:ಎ.ವ್ಹಿ.ಶ್ರೀನಾಥ




ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಜ.25:ಸದೃಡ ಭಾರತದ ಪ್ರಗತಿಗೆ ಪ್ರತಿಯೊಬ್ಬ ಪ್ರಜೆ ಮತದಾನ ಮಾಡಲು ಮರೆಯಬಾರರು. ಮತದಾನದಿಂದ ದೂರ ಉಳಿಯುವುದೆಂದರೆ ಅದು ಸಂವಿಧಾನಕ್ಕೆ ಮಾಡಿದ ಅಪಚಾರ ಎಂದು ಪ್ರಭಾರಿ ಕಲಬುರಗಿ ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಎ.ವ್ಹಿ.ಶ್ರೀನಾಥ ಹೇಳಿದರು.

ಶನಿವಾರ ಕಲಬುರಗಿ ನಗರದ ಡಾ.ಎಸ್.ಎಂ.ಪಂಡಿತ್ ರಂಗಮಂದಿರದಲ್ಲಿ ಕಲಬುರಗಿ ಜಿಲ್ಲಾಡಳಿತ ಮತ್ತು ಜಿಲ್ಲಾ ಸ್ವೀಪ್ ಸಮಿತಿಯಿಂದ ಆಯೋಜಿಸಿದ ರಾಷ್ಟ್ರೀಯ ಮತದಾರರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಸರ್ಕಾರವನ್ನು ಆಯ್ಕೆ ಮಾಡುವ ಅಧಿಕಾರ ಜನರಿಗೆ ಇರುವುದರಿಂದ ಉತ್ತಮ ನಾಯಕರನ್ನು ಆಯ್ಕೆ ಮಾಡಲು ತಪ್ಪದೆ ಮತ ಚಲಾಯಿಸಬೇಕಾಗಿರುವುದು ಪ್ರತಿ ಪ್ರಜೆಯ ಆದ್ಯ ಕರ್ತವ್ಯವಾಗಿದೆ ಎಂದರು.

ಪ್ರಜಾಪ್ರಭುತ್ವದಲ್ಲಿ ಮತದಾನವೇ ಮಹಾದಾನವಾಗಿದ್ದು, ಇದನ್ನು ಯಾವುದೇ ಹಣ, ವಸ್ತುಗಳ ಆಮೀಷಕ್ಕೆ ಒಳಗಾಗಿ ಮತ ಮಾರಾಟ ಮಾಡಬಾರದು. ಉತ್ತಮರನ್ನು ಆಯ್ಕೆ ಮಾಡಲು ನಿಮ್ಮ ಮತವನ್ನು ದಾನ ಮಾಡಬೇಕೆ ಹೊರತು, ಮಾರಾಟವಲ್ಲ ಎಂದು ಎ.ವ್ಹಿ.ಶ್ರೀನಾಥ ಹೇಳಿದರು.

ಸಂವಿಧಾನದ ಹಕ್ಕು ಮತ್ತು ಕರ್ತವ್ಯಗಳ ಬಗ್ಗೆ ಮಾತನಾಡುತ್ತೇವೆ. ಆದರೆ ಮತದಾನ ದಿನದಂದು ಸಂವಿಧಾನಬದ್ಧ ಹಕ್ಕಾಗಿರುವ ಮತ ಚಲಾಯಿಸಲು ಹಿಂದೇಟು ಹಾಕುತ್ತೇವೆ. ಬೆಂಗಳೂರುದಂತಹ ಮೆಟ್ರೋ ನಗರದಲ್ಲಿ ಕಳೆದ ಲೋಕಸಭಾ ಚುನಾವಣೆಯ ಮತದಾನ ದಿನದಂದು ರಜೆ ಕಾರಣ ಸಾರ್ವಜನಿಕರು ರೆಸಾರ್ಟ್, ಪ್ರವಾಸಿ ತಾಣಕ್ಕೆ ಹೋಗುವುದನ್ನು ತಡೆಯಲು ರೆಸಾರ್ಟ್ ಮುಚ್ಚುವಂತೆ ಆದೇಶ ಮಾಡಬೇಕಾದ ಪರಿಸ್ಥಿತಿ ಬಂತು. ಇದು ನಮಗೆ ಅವಮಾನವಲ್ಲವೆ, ಕಾನೂನು ಬಲ್ಲ ನಗರ ನಿವಾಸಿಗಳು ಮತದಾನ ಮಾಡಕ್ಕೇ ಹಿಂದೇಟು ಏಕೆ ಎಂಬ ಪ್ರಶ್ನೆ ನಮ್ಮನ್ನು ನಾವೇ ಮಾಡಿಕೊಳ್ಳಬೇಕಿದೆ ಎಂದರು.

1950ರ ಜನವರಿ 25 ರಂದು ಸಂವಿಧಾನದಲ್ಲಿ ತಿಳಿಸಿರುವಂತೆ ಭಾರತ ಚುನಾವಣಾ ಆಯೋಗ ರಚಿಸಿದ್ದು, ಹೀಗಾಗಿ ಪ್ರತಿ ವರ್ಷ ಜನವರಿ 25 ರಂದು ಮತದಾರರ ದಿನಾಚರಣೆ ಆಯೋಜಿಸಲಾಗುತ್ತಿದೆ. ಸಂವಿಧಾನದ ಆರ್ಟಿಕಲ್ 326ರಲ್ಲಿ ಹೆಣ್ಣು-ಗಂಡು ಎಂಬ ಬೇಧವಿಲ್ಲದೆ ದೇಶದ ಪ್ರತಿ ಪ್ರಜೆಗೆ ಮತದ ಹಕ್ಕು ನೀಡಿದ್ದು, ಇಂತಹ ಅಮೂಲ್ಯ ಹಕ್ಕು ಕಳೆದುಕೊಳ್ಳಬೇಡಿ ಎಂದ ಅವರು, ಸ್ವಾತಂತ್ರ್ಯ ನಂತರ ದೇಶದಲ್ಲಿದ್ದ ಹಲವು ಪ್ರಾಂತ್ಯಗಳಲ್ಲಿದ್ದ ಭಾಷೆ, ಭೂಷಣ ಆಚಾರ-ವಿಚಾರ, ಸಂಸ್ಕೃತಿ ಎಲ್ಲವನ್ನು ಗೌರವಿಸಿ 562 ಸಂಸ್ಥಾನಗಳ ವಿಲೀನದ ದೇಶದಲ್ಲಿ ಸಂವಿಧಾನ ಶಿಲ್ಪಿ ಅಂಬೇಡ್ಕರ್ ಅವರ ಅಧ್ಯಕ್ಷತೆ ಕರಡು ರಚನಾ ಸಮಿತಿ ಇಡೀ ದೇಶ ಒಪ್ಪುವಂತಹ ಬೃಹತ್ ಸಂವಿಧಾನ ನೀಡಿದೆ ಎಂದರು.

ಲಿಟರಸಿ ಕ್ಲಬ್ ಮೂಲಕ ಅರಿವು ಮೂಡಿಸಿ: ಜಿಲ್ಲಾ ಪಂಚಾಯತ್ ಸಿ.ಇ.ಓ ಭಂವರ್ ಸಿಂಗ್ ಮಾತನಾಡಿ ಶಾಲಾ-ಕಾಲೇಜು ಹಂತದಲ್ಲಿ ಎಲೆಕ್ಟೊರಲ್ ಲಿಟರಸಿ ಕ್ಲಬ್ ಸ್ಥಾಪಿಸಲಾಗಿದ್ದು, ಆ ಮೂಲಕ ಮತದಾನ ಮತ್ತು ಚುನಾವಣಾ ಪ್ರಕ್ರಿಯೆ ಬಗ್ಗೆ ವಿದ್ಯಾರ್ಥಿಗಳು ಪಾಲಕ-ಪೋಷಕರಲ್ಲಿ ಹೆಚ್ಚು ಅರಿವು ಮೂಡಿಸಬೇಕು. ಕಳೆದ ಲೋಕಸಭಾ ಚುನಾವಣೆಯಲ್ಲಿ ಸ್ವೀಪ್ ಚಟುವಟಿಕೆಯಿಂದ ಮತದಾನ ಪ್ರಮಾಣ ಹೆಚ್ಚಳ ಹಾಗೂ ಇತರೆ ಚುನಾವಣಾ ಪದ್ಧತಿಗಳ ಸಮರ್ಪಕ ಅನುಷ್ಠಾನಕ್ಕೆ ಕಲಬುರಗಿ ಜಿಲ್ಲೆಗೆ ಭಾರತ ಚುನಾವಣಾ ಆಯೋಗವು ಬೆಸ್ಟ್ ಎಲೆಕ್ಟೋರಲ್ ಪ್ರ್ಯಾಕ್ಟೀಸ್ ಅವಾರ್ಡ್ ಘೋಷಿಸಿದ್ದು, ಇಂದು ಡಿ.ಸಿ. ಬಿ.ಫೌಜಿಯಾ ತರನ್ನುಮ್ ನವದೆಹಲಿಯಲ್ಲಿ ಪ್ರಶಸ್ತಿ ಸ್ವೀಕರಿಸುತ್ತಿರುವುದು ಜಿಲ್ಲೆಗೆ ಹೆಮ್ಮೆಯ ವಿಷಯವಾಗಿದೆ ಎಂದರು.

ಯುವ ಮತದಾರರಿಗೆ ಎಪಿಕ್ ಚೀಟಿ ವಿತರಣೆ: ಇದೇ ಸಂದರ್ಭದಲ್ಲಿ ಹೊಸದಾಗಿ ಮತದಾರರ ಪಟ್ಟಿಗೆ ಹೆಸರು ನೋಂದಣಿ ಮಾಡಿಕೊಂಡ ಯುವ ಮತದಾರರಿಗೆ ಸಾಂಕೇತಿಕವಾಗಿ ಚುನಾವಣಾ ಗುರುತಿನ ಚೀಟಿ ವಿತರಿಸಲಾಯಿತು. ಇದಲ್ಲದೆ 9 ಬಿ.ಎಲ್.ಓ. ಗಳಿಗೆ ಉತ್ತಮ ಕಾರ್ಯನಿರ್ವಹಣೆ ಹಿನ್ನೆಲೆಯಲ್ಲಿ ಬೆಸ್ಟ್ ಬಿ.ಎಲ್.ಓ. ಪ್ರಮಾಣ ಪತ್ರ ಹಾಗೂ ಶಾಲಾ-ಕಾಲೇಜು ಹಂತದಲ್ಲಿನ ಎಲೆಕ್ಟೋರಲ್ ಲಿಟರಸಿ ಕ್ಲಬ್ ಮೂಲಕ ಆಯೋಜಿಸಿದ ರಸಪ್ರಶ್ನೆ, ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಿಗೆ ಪ್ರಮಾಣ ಪತ್ರ ವಿತರಿಸಲಾಯಿತು. ಚುನಾವಣಾ ಜಾಗೃತಿ ಗೀತೆ "ನಾ ಭಾರತ" ನುಡಿಸಲಾಯಿತು. ಜಿಲ್ಲಾ ಪಂಚಾಯತ್ ಸಿ.ಇ.ಓ ಭಂವರ್ ಸಿಂಗ್ ಅವರು ಸಭಿಕರಿಗೆ ಮತದಾರರ ಪ್ರತಿಜ್ಞೆ ಬೋಧಿಸಿದರು.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಶ್ರೀನಿವಾಸ ನವಲೆ, ಎಸ್.ಪಿ.ಅಡ್ಡೂರು ಶ್ರೀನಿವಾಸಲು, ಮಹಾನಗರ ಪಾಲಿಕೆ ಆಯುಕ್ತ ಅವಿನಾಶ ಶಿಂಧೆ ಅವರು ಸಹ ಮಾತನಾಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಲಕ್ಷ್ಮಣ ಶೃಂಗೇರಿ, ಸಿ.ಪಿ.ಓ ಎಸ್.ಎಸ್.ಮಠಪತಿ, ಜಂಟಿ ಕೃಷಿ ನಿರ್ದೇಶಕ ಸಮದ್ ಪಟೇಲ್, ಜಿಲ್ಲಾ ಅಲ್ಪಸಂಖ್ಯಾತ ಕಲ್ಯಾಣಾಧಿಕಾರಿ ಜಾವಿದ್ ಕರಂಗಿ, ತೋಟಗಾರಿಕೆ ಉಪನಿರ್ದೇಶಕ ಸಂತೋಷ ಇನಾಂದಾರ, ಡಿ.ಡಿ.ಪಿ.ಐ ಸೂರ್ಯಕಾಂತ ಮದಾನೆ, ಸಹಾಯಕ ಆಯುಕ್ತೆ ಸಾಹಿತ್ಯ, ಕಲಬುರಗಿ ತಹಶೀಲ್ದಾರ ಕೆ.ಆನಂದಶೀಲ್, ಚುನಾವಣಾ ತಹಶೀಲ್ದಾರ ಪಂಪಯ್ಯ, ಸೇರಿದಂತೆ ವಿವಿಧ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು, ನೂರಾರು ಸಂಖ್ಯೆಯಲ್ಲಿ ಶಾಲಾ-ಕಾಲೇಜು ಮಕ್ಕಳು, ಸಾರ್ವಜನಿಕರು ಭಾಗವಹಿಸಿದ್ದರು. ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ ಸ್ವಾಗತಿಸಿದರು. ತಾಲೂಕು ಪಂಚಾಯತ್ ಇ.ಓ. ಸೈಯ್ಯದ್ ಪಟೇಲ್ ವಂದಿಸಿದರು.

# ಕಲಬುರಗಿ ಕೇಂದ್ರ ಕಾರಾಗೃಹದಲ್ಲಿ ರಾಷ್ಟ್ರೀಯ ಹೆಣ್ಣು ಮಗು ದಿನಾಚರಣೆ



ಕಲಬುರಗಿ,ಜ.25:ರಾಷ್ಟ್ರೀಯ ಹೆಣ್ಣುಮಗು ದಿನಾಚರಣೆಯ ಅಂಗವಾಗಿ ಕಲಬುರಗಿ ಕೇಂದ್ರ ಕಾರಾಗೃಹದಲ್ಲಿ ಶುಕ್ರವಾರ ಮಹಿಳಾ ಶಿಕ್ಷಾ ಮತ್ತು ವಿಚಾರಣಾ ಬಂದಿಗಳಿಗಾಗಿ ಹೆಣ್ಣು ಮಗುವಿನ ಶ್ರೇಷ್ಠತೆ ಕುರಿತು ಅರಿವು ಕಾರ್ಯಕ್ರಮ ಹಾಗೂ ವಿವಿಧ ಮನೋರಂಜನಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಕಲಬುರಗಿ ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕಿ ಡಾ. ಅನಿತಾ ಆರ್. ಅವರು, ಪ್ರತಿ ಕುಟುಂಬದಲ್ಲಿ ಹೆಣ್ಣು ಮಗುವಿನ ಜನನದಿಂದಾಗಿ ಮನೆ ಬೆಳಗುತ್ತದೆ. ಹೆಣ್ಣು ಮಗುವಿಗೆ ಸಮಾಜದಲ್ಲಿ ವಿಶೇಷ ಸ್ಥಾನಮಾನ ಮತ್ತು ಗೌರವವನ್ನು ನೀಡಬೇಕು. ಸರ್ಕಾರದ ಹಲವು ಯೋಜನೆ ಹಾಗೂ ಮೀಸಲಾತಿಗಳಿಂದಾಗಿ ಪ್ರಸ್ತುತ ಮಹಿಳೆಯು ವಿವಿಧ ಕ್ಷೇತ್ರಗಳಲ್ಲಿ ಸ್ಥಾನವನ್ನು ಪಡೆದಿರುವುದು ಹೆಮ್ಮೆಯ ವಿಷಯವಾಗಿದೆ. ಕಾರಾಗೃಹದಿಂದ ಬಿಡುಗಡೆ-ಯಾದ ನಂತರ ಮಹಿಳೆಯರು ಯಾವುದೇ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾಗದೇ ಸ್ವಾವಲಂಭಿ ಮಹಿಳೆಯರಾಗಿ ಸಮಾಜದಲ್ಲಿ ಬದುಕಬೇಕು ಎಂದು ತಿಳಿಸಿದರು.

ದಿನಾಚರಣೆ ಅಂಗವಾಗಿ ಕಾರಾಗೃಹದ ಮಹಿಳಾ ಬಂದಿಗಳಿಗಾಗಿ ರಂಗೋಲಿ ಬಿಡಿಸುವ ಸ್ಪರ್ಧೆ, ಒಂದು ನಿಮಿಷದಲ್ಲಿ ಹಣೆ ಬೊಟ್ಟು ಇಡುವ ಸ್ಪರ್ಧೆ ಚಿತ್ರ ಬರೆಯುವ ಸ್ಪರ್ಧೆ, ಮ್ಯೂಸಿಕಲ್ ಚೇರ್, ಕೆರೆ-ದಡ ಗಳಂತಹ ಮನೋರಂಜನಾ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಈ ಸಂಸ್ಥೆಯ ಪ್ರಭಾರಿ ಅಧೀಕ್ಷಕ ಬಿ.ಸುರೇಶ ಹಾಗೂ ಆಡಳಿತಾಧಿಕಾರಿ ಭೀಮಾಶಂಕರ ಢಾಂಗೆ ಅವರು ನಿರ್ಣಾಯಕರಾಗಿ ವಿವಿಧ ಸ್ಪರ್ಧೆಗಳ ವಿಜೇತರನ್ನು ಆಯ್ಕೆ ಮಾಡಿದರು.

ಕಲಬುರಗಿ ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕಿ ಡಾ॥ ಅನಿತಾ ಆರ್. ಸ್ಪರ್ಧಾ ವಿಜೇತರಿಗೆ ಬಹುಮಾನಗಳನ್ನು ವಿತರಿಸಿದರು.

ಸಹಾಯಕ ಅಧೀಕ್ಷಕ ಚನ್ನಪ್ಪ, ಜೈಲರ್‌ಗಳಾದ ಸುನಂದಾ ವಿಆರ್, ಸಾಗರ್ ಪಾಟೀಲ್, ಶ್ರೀಮಂತಗೌಡ ಪಾಟೀಲ್, ಶಿಕ್ಷಕರಾದ ನಾಗರಾಜ ಮೂಲಗೆ ಹಾಗೂ ಇತರೆ ಸಿಬ್ಬಂದಿಗಳು ಮತ್ತು ಬಂದಿಗಳು ಭಾಗವಹಿಸಿದ್ದರು. ಅಶ್ವಿನಿ ಎಮ್.ಎಚ್ ಕಾರ್ಯಕ್ರಮ ನಿರೂಪಿಸಿದರು.

# 26 ಜನರಿಗೆ ಪಹಣಿ ವಿತರಿಸಿದ ಡಿಸಿ ಜಾನಕಿ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ : ಜ. 25: ಶಿರೂರ ಗ್ರಾಮದ 381ಅ ಸರ್ವೆ ನಂಬರಿನ ಜಮೀನಿನಲ್ಲಿ 5 ಜನ ಸಮಗಾರ ಸಮುದಾಯದ ಫಲಾನುಭವಿಗಳು ಸೇರಿದಂತೆ ಒಟ್ಟು 26 ಜನರಿಗೆ ಜಿಲ್ಲಾಧಿಕಾರಿ ಜಾನಕಿ ಕೆ.ಎಂ ಪಹಣಿ ಪತ್ರಗಳನ್ನು ವಿತರಣೆ ಮಾಡಿದರು.

ಸಮಗಾರ ಸಮುದಾಯದ ಫಲಾನುಭವಿಗಳಿಗೆ ಕಳೆದ 1962ರಲ್ಲಿ ಭೂ ಮಂಜೂರಾಗಿತ್ತು. ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ 32 ಗುಂಟೆ ಮಂಜೂರಿಸಿದ ಜಮೀನಿಗೆ ಸದ್ಯ ಕರ್ನಾಟಕ ಸರ್ಕಾರ ವಿಶೇಷ ಯೋಜನೆಯಾದ ಧರ್ಕಾಸ್ತ ಪೋಡಿ ಅಭಿಯಾನದಡಿ ಒಟ್ಟು 26 ಜನರಿಗೆ ಒನ್ ಟೂ ಫೈವ್ ಮಾಡಿ ಆಕಾರ ಕೂಡ್ರಿಕರಿಸಿ ಪಹಣಿ ವಿತರಣೆ ಮಾಡಲಾಗಿದೆ. ಈ ಸಂದರ್ಭದಲ್ಲಿ ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ, ಜಿಲ್ಲಾ ಭೂದಾಖಲೆ ಅಧಿಕಾರಿ ರವಿ, ತಹಶೀಲ್ದಾರ ಅಮರೇಶ ಪಮ್ಮಾರ, ಭೂ ದಾಖಲೆಗಳ ಸಹಾಯಕ ನಿರ್ದೇಶಕ ಮಹೇಶ ಪತ್ತಾರ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಗಣರಾಜ್ಯೋತ್ಸವ : ವಿವಿಧ ಕಾರ್ಯಕ್ರಮ

ಮಲ್ಲಮ್ಮ ನುಡಿ ವಾರ್ತೆ

: ಜ. 25 : ನವನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಜನೇವರಿ 26 ರಂದು ಜರಗಲಿರುವ 76ನೇ ಗಣರಾಜ್ಯೋತ್ಸವ ದಿನಾಚರಣೆ ಅಂಗವಾಗಿ ಜಿಲ್ಲಾಡಳಿತದಿಂದ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಅಂದು ಬೆಳಿಗ್ಗೆ 8.30ಕ್ಕೆ ಜಿಲ್ಲಾಡಳಿತ ಭವನದ ಆವರಣದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ ಪುತ್ಥಳಿಗೆ ಮಾಲಾರ್ಪಣೆ, 9ಕ್ಕೆ ಜಿಲ್ಲಾ ಉಸ್ತುವಾರಿ ಸಚಿವರಿಂದ ಧ್ವಜಾರೋಹಣ ನಂತರ ಪೋಲೀಸ್ ಬ್ಯಾಂಡ್‌ನೊಂದಿಗೆ ರಾಷ್ಟ್ರಗೀತೆ, ನಾಡಗೀತೆ, ಪರೇಡ್ ವೀಕ್ಷಣೆ, ಪಥ ಸಂಚಲನದ ನಂತರ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ಅವರಿಂದ ಗಣರಾಜ್ಯೋತ್ಸವದ ಸಂದೇಶ, ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಉತ್ತಮ ಸೇವೆ ಸಲ್ಲಿಸಿದವರಿಗೆ ಸನ್ಮಾನ ಮಾಡಲಾಗುತ್ತಿದೆ. ಸಂಜೆ 5.30 ರಿಂದ 7.30 ವರೆಗೆ ನವನಗರದ ಕಲಾಭವನದಲ್ಲಿ ಶಾಲಾ ಮಕ್ಕಳಿಂದ ನೃತ್ಯರೂಪಕ, ದೇಶಭಕ್ತಿ ಗೀತೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಜರುಗಲಿವೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕರು ಆಗಿರುವ ಬಿಟಿಡಿಎ ಅಧ್ಯಕ್ಷ ಎಚ್.ವಾಯ್.ಮೇಟಿ, ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಶಾಸಕರು ಹಾಗೂ ನವದೆಹಲಿ ಕರ್ನಾಟಕದ ವಿಶೇಷ ಪ್ರತಿನಿಧಿ-2 ಪ್ರಕಾಶ ಹುಕ್ಕೇರಿ, ಶಾಸಕರು ಹಾಗೂ ಹಟ್ಟಿ ಚಿನ್ನದ ಗಣಿ ನಿಯಮಿತದ ಅಧ್ಯಕ್ಷ ಜೆ.ಟಿ.ಪಾಟೀಲ, ಶಾಸಕರು ಹಾಗೂ ರಾಜ್ಯ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ, ಸಂಸದ ಪಿ.ಸಿ.ಗದ್ದಿಗೌಡರ, ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಸೇರಿದಂತೆ ಜಿಲ್ಲೆ ಎಲ್ಲ ಶಾಸಕರು, ವಿಧಾನ ಪರಿಷತ್ ಸದಸ್ಯರು ಹಾಗೂ ಇತರೆ ಗಣ್ಯಮಾನ್ಯರು ಆಗಮಿಸಲಿದ್ದಾರೆ.



ಶ್ರೀ ವೀರಭದ್ರೇಶ್ವರ ಜಾತ್ರೆಗೆ ಸರ್ವರಿಗೂ ಹಾರ್ದಿಕ ಸ್ವಾಗತ
ಶ್ರೀ ವೀರಭದ್ರೇಶ್ವರ ದೇವಸ್ಥಾನ ಸುಕ್ಷೇತ್ರ, ಹುಮನಾಬಾದ
(ಮುಜುರಾಯಿ ಧಾರ್ಮಿಕ ದತ್ತಿ ಇಲಾಖೆ ಅಧೀನಕ್ಕೆ ಒಳಪಟ್ಟಿರುತ್ತದೆ)
ತಾ|| ಹುಮನಾಬಾದ ಜಿ|| ಬೀದರ್
ಕಾರ್ಯಕ್ರಮಗಳು
ದಿ.26-01-2025 ರವಿವಾರ ಮಧ್ಯಾಹ್ನ 1-00 ರಿಂದ ಜಂಗಿ ಕುಸ್ತಿ
ಬೆಳಿಗ್ಗೆ 5:00 ಗಂಟೆಗೆ ಮದ್ದು ಸುಡುವ ಕಾರ್ಯಕ್ರಮ
ನಂತರ ರಾತ್ರಿ ಅದ್ದೂರಿ ರಥೋತ್ಸವ
ತದನಂತರ ಸಮಯಿ ರೋಶನಿ ಮತ್ತು ದರಬಾರ ಸಮಾರಂಭ
ಸರ್ವರಿಗೂ ಹಾರ್ದಿಕ ಸ್ವಾಗತ ಕೊರುವವರು
ಕಾರ್ಯನಿರ್ವಾಹಕ ಅಧಿಕಾರಿಗಳು/ಸಹಾಯಕ ಆಯುಕ್ತರು
ಶ್ರೀ ವೀರಭದಶ್ವರ ದೇವಸ್ಥಾನ ವ್ಯವಸ್ಥಾಪಕ ಸಮಿತಿ
ಅಧ್ಯಕ್ಷರು ಹಾಗೂ ಸದಸ್ಯರು
ಶ್ರೀ ವೀರಭದಶ್ವರ ದೇವಸ್ಥಾನ ವ್ಯವಸ್ಥಾಪನ ಸಮಿತಿ ಹಾಗೂ
ಹುಮನಾಬಾದ ಪಟ್ಟಣದ ಸಮಸ್ತ ನಾಗರಿಕರು
ಜಯಸಿಂಹ ನಗರದ ಕುಲದೇವ ಶ್ರೀ ವೀರಭದ್ರೇಶ್ವರ ಜಾತ್ರಾ ಮಹೋತ್ಸವಕ್ಕೆ ಆಗಮಿಸುವ ಸಕಲ ಭಕ್ತರಿಗೆ ಹಾರ್ದಿಕ ಸ್ವಾಗತ. 26-01-2024ರಂದು ಕಲ್ಯಾಣ ಕರ್ನಾಟಕ ಪ್ರದೇಶದ ಪ್ರಸಿದ್ಧ ಧಾರ್ಮಿಕ ಸುಕ್ಷೇತ್ರ, ಬೀದರ್ ಜಿಲ್ಲೆಯ ಹುಮನಾಬಾದ ಪಟ್ಟಣದಲ್ಲಿ ನೆರೆವೇರಲಿರುವ ಶಿಷ್ಟರ ರಕ್ಷಕ, ದುಷ್ಟರ ಸಂಹಾರಕ ಭಕ್ತರ ಇಷ್ಟಾರ್ಥ ಪೂರೈಸಲು ನೆಲೆನಿಂತಿರುವ ಶ್ರೀ ವೀರಭದ್ರೇಶ್ವರ ಜಾತ್ರೆಗೆ ಆಗಮಿಸುವ ಕರ್ನಾಟಕ, ಆಂಧ್ರ, ತೆಲಂಗಾಣ ಹಾಗೂ ಮಹಾರಾಷ್ಟ್ರ ರಾಜ್ಯಗಳ ಸಕಲ ಭಕ್ತಾದಿಗಳಿಗೆ
ಹಾರ್ದಿಕ ಸ್ವಾಗತ




26 JANUARY Republic Day
ನಾಡಿನ ಸಮಸ್ತ ಜನತೆಗೆ
76ನೇ ಗಣರಾಜ್ಯೋತ್ಸವ
ಹಾರ್ದಿಕ ಶುಭಾಶಯಗಳು
ಹುಮನಾಬಾದ್ ಗ್ರಾಮದ ಆರಾಧ್ಯ ದೈವ
ಶ್ರೀ ವೀರಭದ್ರೇಶ್ವರ ದೇವರ ಜಾತ್ರಾ
ಮಹೋತ್ಸವಕ್ಕೆ
ಆಗಮಿಸುತ್ತಿರುವ ಭಕ್ತಾದಿಗಳಿಗೆ
ಕೋಡಂಬಲ್ ಗ್ರಾಮ ಪಂಚಾಯತ
ವತಿಯಿಂದ ಹಾರ್ದಿಕ ಸ್ವಾಗತ
ಸ್ವಾಗತ ಕೂರುವವರು
ಶ್ರೀ ವೈಜನಾಥ ಬೋಸಗಿ
ಅಧ್ಯಕ್ಷರು, ಗ್ರಾಮ ಪಂಚಾಯತ
ಕೋಡಂಬಲ್
ಶ್ರೀ ವಿಷ್ಣುವರ್ಧನ್ ಬುದ್ಧ
ಉಪಾಧ್ಯಕ್ಷರು, ಗ್ರಾಮ ಪಂಚಾಯತ
ಕೋಡಂಬಲ್
ಶ್ರೀ ಸಂಗಮೇಶ ಸಂಪಳ್ಳಿ
ಅಭಿವೃದ್ಧಿ ಅಧಿಕಾರಿ
ಗ್ರಾಮ ಪಂಚಾಯತ ಕೋಡಂಬಲ್




ನಾಡಿನ ಸಮಸ್ತ
ಜನತೆಗೆ 76ನೇ
ಗಣರಾಜ್ಯೋತ್ಸವ
ಹಾರ್ದಿಕ ಶುಭಾಶಯಗಳು
ಹುಮನಾಬಾದ್ ಗ್ರಾಮದ
ಆರಾಧ್ಯ ದೈವ
ಶ್ರೀ ವೀರಭದ್ರೇಶ್ವರ ದೇವರ
ಜಾತ್ರಾ ಮಹೋತ್ಸವಕ್ಕೆ
ಆಗಮಿಸುತ್ತಿರುವ ಭಕ್ತಾದಿಗಳಿಗೆ
ಗ್ರಾಂಪಂ. ಬೆಳಕೆರಾ
ವತಿಯಿಂದ
ಹಾರ್ದಿಕ ಸ್ವಾಗತ
ಶ್ರೀಮತಿ ಪರ್ವಿನ್ ಬೇಗಂ
ಎ. ಬಿರಾದಾರ್
ಅಧ್ಯಕ್ಷರು ಗ್ರಾಂ.ಪಂ.
ಬೆಳಕೆರಾ
ಶ್ರೀಮತಿ ವಿಜಯಲಕ್ಷ್ಮಿ
ಎಸ್.ಹಿಪ್ಪರಗಿ
ಅಧ್ಯಕ್ಷರು ಗ್ರಾಂ.ಪಂ.
ಬೆಳಕೆರಾ
ಶ್ರೀಮತಿ ಭಾಗ್ಯಜ್ಯೋತಿ
ಗ್ರಾಮ ಪಂಚಾಯತ್
ಅಭಿವೃದ್ಧಿ ಅಧಿಕಾರಿಗಳು
ಬೆಳಕೇರಾ.




ನಾಡಿನ ಸಮಸ್ತ ಜನತೆಗೆ,
76ನೇ
ಗಣರಾಜ್ಯೋತ್ಸವ
ಹಾರ್ದಿಕ ಶುಭಾಶಯಗಳು,
26 JANUARY
HAPPY REPUBLIC DAY
ಹುಮನಾಬಾದ್ ಗ್ರಾಮದ ಆರಾಧ್ಯ ದೈವ
ಶ್ರೀ ವೀರಭದ್ರೇಶ್ವರ ದೇವರ
ಜಾತ್ರಾ ಮಹೋತ್ಸವಕ್ಕೆ
ಆಗಮಿಸುತ್ತಿರುವ ಭಕ್ತಾದಿಗಳಿಗೆ
ಅರಣ್ಯ ಇಲಾಖೆ ವತಿಯಿಂದ
ಹಾರ್ದಿಕ ಸ್ವಾಗತ
ಸ್ವಾಗತ ಕೂರುವವರು
ಕುಮಾರಿ. ಐಶ್ವರ್ಯ ಗೊಬ್ಬುರ್
ವಲಯ ಅರಣ್ಯ ಅಧಿಕಾರಿಗಳು
ಹುಮನಾಬಾದ




ನಾಡಿನ ಸಮಸ್ತ ಜನತೆಗೆ,
76ನೇ
ಗಣರಾಜ್ಯೋತ್ಸವ
ಹಾರ್ದಿಕ ಶುಭಾಶಯಗಳು,
26 January RepublicDay
ಹುಮನಾಬಾದ್ ಗ್ರಾಮದ ಆರಾಧ್ಯ ದೈವ
ಶ್ರೀ ವೀರಭದ್ರೇಶ್ವರ ದೇವರ
ಜಾತ್ರಾ ಮಹೋತ್ಸವಕ್ಕೆ
ಆಗಮಿಸುತ್ತಿರುವ ಭಕ್ತಾದಿಗಳಿಗೆ
ಸಾಮಾಜಿಕ ವಲಯ
ಅರಣ್ಯ ಅಧಿಕಾರಿ ವತಿಯಿಂದ
ಹಾರ್ದಿಕ ಸ್ವಾಗತ
ಶ್ರೀ ಶಿವಕುಮಾರ ರಾಠೋಡ
ಸಾಮಾಜಿಕ ವಲಯ ಅರಣ್ಯ ಅಧಿಕಾರಿಗಳು
ಬೀದರ್.

# 76ನೇ ಗಣರಾಜ್ಯೋತ್ಸವ ಧ್ವಜಾರೋಹಣದಲ್ಲಿ ಭಾಗವಹಿಸಲು ಮುಖ್ಯಾಧಿಕಾರಿ ಹುಸಾಮುದ್ದೀನ್ ಮನವಿ

ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:-ಪುರಸಭೆಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸರ್ವ ಸದಸ್ಯರು, ಪಟ್ಟಣದ ಗಣ್ಯ ವ್ಯಕ್ತಿಗಳು, ಪುರಸಭೆ ಮಾಜಿ ಅಧ್ಯಕ್ಷರು, ಉಪಾಧ್ಯಕ್ಷರು. ಸದಸ್ಯರುಮತ್ತುಸಾರ್ವಜನಿಕರು ರವಿವಾರ ಜನವರಿ 26ರಂದು ಪಟ್ಟಣದ ಪುರಸಭೆಯಲ್ಲಿ 76ನೇ ಗಣರಾಜ್ಯೋತ್ಸವ



ಧ್ವಜಾರೋಹಣ ಬೆಳಿಗ್ಗೆ 7:45 ಘಂಟೆಗೆ ಧ್ವಜಾರೋಹಣ ಮಾಡಲಾಗುತ್ತಿದ್ದು ತಾವೆಲ್ಲರೂ ಸರಿಯಾದ ಸಮಯಕ್ಕೆ ಧ್ವಜಾರೋಹಣಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಪುರಸಭೆ ಮುಖ್ಯಾಧಿಕಾರಿ ಹುಸಾಮುದ್ದೀನ್ ಬಾಬಾ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ

ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ: ಹೆಣ್ಣುಮಕ್ಕಳನ್ನು ಸಮಾಜದಲ್ಲಿಆತ್ಮಸ್ಥೆರ್ಯದಿಂದ ಬದುಕಲು ಮಾನಸಿಕವಾಗಿ ಸದೃಢವಾಗಿರುವಂತೆಬೆಳೆಸಬೇಕೆಂದು ಆಡಳಿತ ವೈದ್ಯಾಧಿಕಾರಿ ಡಾ. ವಿಜಯ ಹಿರಸ್ಕರ್ ಹೇಳಿದರು. ಪಟ್ಟಣದಸರ್ಕಾರಿಸಮುದಾಯ ಆರೋಗ್ಯಕೇಂದ್ರದಲ್ಲಿಶುಕ್ರವಾರ ಆಸ್ಪತ್ರೆಯಲ್ಲಿರುವ ಮಗುವಿನ ತಾಯಿಗೆ ಹಣ್ಣು ಹಂಪಲು ಸಿಹಿ ತಿನಿಸುವ ಮೂಲಕ ರಾಷ್ಟ್ರೀಯ ಹೆಣ್ಣುಮಕ್ಕಳ ದಿನ ಆಚರಿಸುತ್ತಾ ಮಾತನಾಡಿದ ಅವರು, ಮನೆಯಲ್ಲಿ ಹೆಣ್ಣು ಮಕ್ಕಳಿಗೆ ಮಾತ್ರ ಉತ್ತಮ



ನಡವಳಿಕೆಗಳ ಬಗ್ಗೆ ತಿಳುವಳಿಕೆ ನೀಡುವುದು ಮಾತ್ರವಲ್ಲದೆ ಗಂಡು ಮಕ್ಕಳಿಗೂ ಸಹ ಉತ್ತಮ ಸಂಸ್ಕಾರ ನೀಡಿ ಸಮಾಜದಲ್ಲಿ ಹೆಣ್ಣುಮಕ್ಕಳಿಗೆಗೌರವ ಹಾಗೂ ರಕ್ಷಣೆ ನೀಡುವ ಬಗ್ಗೆ ತಿಳಿ ಹೇಳಬೇಕು ಎಂದರು. ಈ ಸಂದರ್ಭದಲ್ಲಿ ಡಾ. ನಜಿಮಾ ಪಟೇಲ್, ಸಿಬ್ಬಂದಿಗಳಾದ ದೇವಿಂದ್ರನಾಗನಕೇರಾ, ಪ್ರಭು ಮುದನ್ನಾಳಕ್ಕರ್, ಸುಜಾತಾ, ಸುಮಾ, ಸುನೀಲಕುಮಾರ, ಸಿದ್ದಲಿಂಗ, ಹಲಿಮಾ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಗುಂಡೇಟಿಗೆ ಗಾಯಗೊಂಡ ಶಿವಕುಮಾರ ಆರೋಗ್ಯ ವಿಚಾರಿಸಿದ ಶಾಸಕ:- ಡಾ. ಶೈಲೇಂದ್ರ ಬೆಲ್ದಾಳೆ



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:ದರೋಡೆಕೋರರ ಗುಂಡೇಟಿಗೆಗಾಯಗೊಂಡು ಹೈದರಾಬಾದ್‌ನ ಖಾಸಗಿ ಆಸ್ಪತ್ರೆಯಲ್ಲಿಚಿಕಿತ್ಸೆಪಡೆಯುತ್ತಿರುವ ಗಾಯಾಳು ಶಿವಕುಮಾರ ಆರೋಗ್ಯ ವಿಚಾರಿಸಿದ ಬೀದರ್ ದಕ್ಷಿಣ ಕ್ಷೇತ್ರದ ಶಾಸಕರಾದ ಡಾ ಶೈಲೇಂದ್ರ ಬೆಲ್ದಾಳೆ ಸೂಕ್ತಪರಿಹಾರಕ್ಕಾಗಿ ಆಗ್ರಹಿಸಿದ್ದಾರೆ. ಹೈದ್ರಾಬಾದ್ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಶಿವಕುಮಾರ ಅವರಿಗೆ ಭೇಟಿಯಾಗಿ

ವೈದ್ಯರೊಂದಿಗೆಅವರಆರೋಗ್ಯ ಕುರಿತು ಚರ್ಚಿಸಿ ಅವರು ಮಾತನಾಡಿದರು. ಜಿಲ್ಲೆಯ ಇಬ್ಬರು ಸಚಿವರ ಭರವಸೆ ಭರವಸೆಯಾಗಿ ಉಳಿಯದೆ ಶೀಘ್ರಸರ್ಕಾರದಿಂದಪರಿಹಾರ ದೊರೆಯುವಂತಾಗಬೇಕು.

ದರೋಡೆಕೋರರಗುಂಡೇಟಿನಿಂದಮೃತಪಟ್ಟಬೇಮಳಖೇಡಾ ಗ್ರಾಮದಗಿರಿವೆಂಕಟ ಎಂಬುವರ ಕುಟುಂಬಕ್ಕೆಸೂಕ್ತಪರಿಹಾರ ನೀಡಬೇಕು ಮತ್ತು ಅವರ ಕುಟುಂಬದ ಸದಸ್ಯರೊಬ್ಬರಿಗೆ ಉದ್ಯೋಗನೀಡಬೇಕು. ಮತ್ತು ಹೈದರಾಬಾದ್ ಆಸ್ಪತ್ರೆಯಲ್ಲಿ ಚಿಕಿತ್ಸೆಪಡೆಯುತ್ತಿರುವಲಾಡಗೇ-ರಿಯ ಶಿವಕುಮಾರ ಗುನ್ನಳ್ಳಿ ಎಂಬವರುಗಂಭೀರವಾಗಿಗಾಯ ಗೊ ಂಡು ಹೈದರಾಬಾದ್‌ನ ಆಸ್ಪತ್ರೆಯಲ್ಲಿಸಾವು-ಬದುಕಿನ ಮಧ್ಯೆ ಹೋರಾಡಿ ಇಂದು ಆಸ್ಪತ್ರೆಯಿಂದ ಬಿಡುಗಡೆ ಗೊಳ್ಳಲಿದ್ದು ಆರೋಗ್ಯದಲ್ಲಿ ಚೇತರಿಕೆ ಕಂಡಿದ್ದಾರೆ ಸರ್ಕಾರ ಇವರನ್ನು ಸಹ ಸೂಕ್ತ ಪರಿಹಾರ ನೀಡಿ ಉದ್ಯೋಗ ನೀಡಬೇಕು ಎಂದರು.

ಇಬ್ಬರೂ ಸಹ ಬಡ ಕುಟುಂಬದವರಾಗಿದ್ದು ಇವರಿಗೆ ಸರ್ಕಾರದಿಂದ ಶೀಘ್ರಪರಿಹಾರ ದೊರೆಯುವಂತಾಗಬೇಕು. ಶಿವಕುಮಾರ ಅವರಿಗೆ ಚಿಕಿತ್ಸೆ ನೀಡಿ ಗುಣಪಡಿಸಿದ ವೈದ್ಯರಿಗೆ ಧನ್ಯವಾದಗಳು ಸಲ್ಲಿಸಿದರು ಮತ್ತು ವ್ಯಯಕ್ತಿಕ ಸಹಾಯ ಮಾಡುವೆ ಎಂದು ಭರವಸೆ ನೀಡಿದರು. ಈ ಸಂದರ್ಭದಲ್ಲಿ ಬಿಜೆಪಿ ಮುಖಂಡರಾದ ಬಾಬುರಾವ ಕಾರಬಾರಿ, ಚಂದ್ರಶೇಖರ್ ಪಾಟೀಲ್ ಖಟಕಚಿಂಚೋಳಿ ವೈದ್ಯರು ಮತ್ತಿತರರು ಉಪಸ್ಥಿತರಿದ್ದರು.

# ತಾಲೂಕ ಮಟ್ಟದ ಕ್ರೀಡಾ-ಕೂಟ ಜನವರಿ 28ಕ್ಕೆ

ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:- ಭಾರತ ಸರ್ಕಾರ ಯುವ ಕಾರ್ಯ ಮತ್ತು ಕ್ರೀಡಾ ಸಚಿವಾಲಯ ನೆಹರು ಯುವ ಕೇಂದ್ರ ಬೀದರ್ ಹಾಗೂ ಸ್ವಾಮಿ ವಿವೇಕಾನಂದ ಯುವಕರ ಸಂಘ, ದಿಲೀಪ್ ಕುಮಾರ್

ಭಯ್ಯ ಶಿಕ್ಷಣ ಸಂಸ್ಥೆ ಇವರ ಸಂಯುಕ್ತ ಆಶ್ರಯದಲ್ಲಿ ಪಟ್ಟಣದ ಪಂಚಾಕ್ಷರಿ ಪ್ರೌಢ ಶಾಲೆ ಆವರಣದಲ್ಲಿ ಜನವರಿ 28ರಂದು ತಾಲೂಕು ಮಟ್ಟದ ಕ್ರೀಡಾಕೂಟ ಹಮ್ಮಿಕೊಳ್ಳಲಾಗಿದೆ ಎಂದು ಕಾರ್ಯಕ್ರಮದ ಸಂಯೋಜಕ ಲಕ್ಷ್ಮಣ ಪಿ. ಮಚ್ಕುರೆ ತಿಳಿಸಿದ್ದಾರೆ.

ಬಾಲಕರಿಗಾಗಿ ಕ್ರೀಡೆಗಳು, ವಾಲಿಬಾಲ್, ವೇಟ್ ಲಿಫ್ಟಿಂಗ್, ಬ್ಯಾಡ್ಮಿಂಟನ್, ಬಾಲಕಿಯರಿಗಾಗಿ

ಖೋಖೋ, ಸ್ಲೋ ಸೈಕಲಿಂಗ್, 100 ಮೀಟರ್ ರನ್ನಿಂಗ್ ಆಯೋಜಿಸಲಾಗಿದೆ, ತಾಲೂಕು ಸ್ಪೋರ್ಟ್ಸ್ ಮಿಟನಲ್ಲಿ ವಿಜೇತ ತಂಡಗಳನ್ನು ಜಿಲ್ಲಾ ಮಟ್ಟದ ಕ್ರೀಡಾ ಕೂಟಕ್ಕೆ ಆಯ್ಕೆ ಮಾಡಲಾಗುವುದು.

ಕ್ರೀಡೆಯಲ್ಲಿ ಭಾಗವಹಿಸಿದ ಎಲ್ಲಾ ಕ್ರೀಡಾ ಪಟುಗಳಿಗೆ ಪ್ರಮಾಣ ಪತ್ರ ನೀಡಲಾಗುವುದು, ವಯಸ್ಸು 15 ರಿಂದ 29 ವಯಸ್ಸಿನ ಕ್ರೀಡಾಪಟುಗಳಿಗೆ ಮಾತ್ರ ಭಾಗವಹಿಸಲು ಅವಕಾಶವಿದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 9535230350

# ಧರ್ಮ ರಕ್ಷಕ ಇಷ್ಟ ರಕ್ಷಕ ವೀರಭದ್ರೇಶ್ವರ

ವಿಶ್ವದಲ್ಲೇ ಖ್ಯಾತಿ ಪಡೆದಿರುವ ಭಾರತೀಯ ಸಂಸ್ಕೃತಿ, ವಿಭಿನ್ನ ಧರ್ಮ ಜಾತಿಗಳು ಬೇರೆ ಬೇರೆ ರಾಜ್ಯಗಳ ರೀತಿ ನೀತಿಗಳನ್ನು ಭಿನ್ನವಾಗಿದ್ದರೂ, ವಿವಿಧತೆಯಲ್ಲಿ ಏಕತೆಯನ್ನು ಕಾಡುವ ಸಂಸ್ಕೃತಿ ಭಾರತೀಯ ಸಂಸ್ಕೃತಿ.

ಇಂಥ ಏಕತೆಯನ್ನು ಕರ್ನಾಟಕ ತುತ್ತುತುದಿಯಲ್ಲಿರುವ ಬೀದರ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ 65ರ ಮೇಲಿರುವ ತಾಲೂಕು ಕೇಂದ್ರ ಹುಮನಾಬಾದ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಸರ್ವಧರ್ಮಿಯರಲ್ಲಿ ಏಕತೆ ಮೆರೆಯುವದನ್ನು ಕಾಣಬಹುದು ದೇಶಭಕ್ತರನ್ನು ಹಾಗೂ ಸ್ವಾತಂತ್ರ ಹೋರಾಟಗಾರರಿಗೆ ಜನ್ಮನೀಡಿದ ಈ ಪುಣ್ಯಭೀಮಿಯ ಪುತ್ರರು ದೇಶಕ್ಕಾಗಿ ಹುತಾತ್ಮರಗಿ ಈ ನೆಲವನ್ನು ಪುನಿತಗೊಳಿಸಿರುವದು ಇಲ್ಲನ ಶ್ರೀ ವೀರಭದ್ರೇಶ್ವರರ ಕೃಪಾಶೀರ್ವಾದಿಂದಲೆ ಎಂದು ಹೇಳಬಹುದು.

ಹುಮನಾಬಾದ ಶ್ರೀ ವೀರಭದ್ರೇಶ್ವ ಮಹಿಮೆ ಅಪಾರ ಹುಮನಾಬಾದ ಪಟ್ಟಣವೊಂದರಲ್ಲೆ108ಮಠಗಳಿವೆ ಎಂದರೆ ಈ ಸ್ಥಳದ ಮಹಿಮೆ ಎಷ್ಟೊಂದು ಪ್ರಸಿದ್ದಿ ಪಡೆದಿದೆ ಎಂಬುದು ತಿಳಿದು ಬರುತ್ತದೆ. ಹನ್ನೆರೆಡನೇಶತಮಾದನದಶರಣರು ಪಕ್ಕದ ಬಸವಕಲ್ಯಣದೊಂದಿಗೆ ಹುಮನಾಬಾದನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿಮಾಡಿಕೊಂಡು ಸಮಾಜಕ್ಕೆ ಮಾರ್ಗದರ್ಶನ ಮಾಡುತ್ತಿದ್ದರೆಂದು ಇತಿಹಾಸ ಪುಟಗಳನ್ನು ತಿರುವಿದಾಗ ತಿಳಿದು ಬರುತ್ತದೆ.

ಪುರಾಣ ಕಾಲದಿಂದಲೂ ಪ್ರಸಿದ್ಧಿ ಪಡೆದಿರುವ ಈ ಕ್ಷೇತ್ರವನ್ನು ಅನೇಕ ರಾಜ ಮಹಾರಜರು ಆಳಿದ್ದು ಇಲ್ಲಿನ ಕಲೆ, ಸಾಹಿತ್ಯ, ಸಂಸ್ಕೃತಿ, ಶಿಲ್ಪಗಳು ಭಕ್ತರಿಂದಾಗಿ ಪುಣ್ಯಕ್ಷೇತ್ರ ಎನಿಸಿಕೊಂಡಿರುವ ಹುಮನಾಬಾದ ಇಂದಿಗೂ ತನ್ನ ಮೂಲ ಸಂಸ್ಕೃತಿ ಮತ್ತು ಧಾರ್ಮಿಕ ಸೊಗಡನ್ನು ಉಳಿಸಿಕೊಂಡು ಮೆರೆಯುತ್ತಿದೆ.

ಹುಮನಾಬಾದ ಇತಿಹಾಸ ಹುಮನಾಬಾದ ನಗರದ ಪುರತನ ಹೆಸರು ಜಯಸಿಂಹ ನಗರ, ಈ ಕ್ಷೇತ್ರವನ್ನು ಆಳಿದ ಅರಸು ರಾಜಾ ರಾಮಚಂದ್ರವನ್ನು ಶ್ರೀ ವೀರಭದ್ರೇಶ್ವರ ದೇವಾಲಯ ನಿರ್ಮಿಸಿದನೆಂಧು ಹೇಳಲಾಗುತ್ತದೆ. ರಾಜಾರಾಮಚಂದ್ರ ಜಾಧವ ಸ್ವತಃ ತಜ್ಞನಾಗಿದ್ದ, ತನ್ನ ಆಡಳಿತ ಕಾಲದಲ್ಲಿ ಹೊಸ ಹಸ ದೇವಸ್ಥಾನಗಳನ್ನು ನಿರ್ಮಿಸುವುದರಲ್ಲಿ ಆಸಕ್ತಿಹೊಂದಿದ್ದ ಶ್ರೀ ವೀರಭದ್ರೇಶ್ವರ ದೇವಸ್ಥಾನ ನಿರ್ಮಾಣದ ನಂತರ ಪ್ರತಿಮೆ ಸ್ಥಾಪಿಸುವ ಸಂಧರ್ಭದಲ್ಲಿ ಆದನ ಕನಸಿನಲ್ಲಿ ಶ್ರೀ ವೀರಭದ್ರೇಶ್ವರ ದೇವರು ಬಂದು ಗಡವಂತಿ ಗ್ರಾಮದ ಹೊಸದಾಗಿ ನಿರ್ಮಿಸಿರುವ ದೇವಸ್ಥಾನದಲ್ಲಿ ತನ್ನ ಮೂರ್ತಿಯನ್ನು ಪ್ರತಿಷಾಪಿಸುವಂತೆ ಹೇಳಿದನಂತೆ.

ಅದರಂತೆ ರಾಜನು ಗಡವಂತಿ ಗ್ರಾಮಕ್ಕೆ ಹೋಗಿ ಅಲ್ಲಿದ್ದ ಶ್ರೀ ವೀರಭದ್ರೇಶ್ವನ ಪ್ರತಿಮೆ ತಂದು ಶಾಸ್ತ್ರೋಕ್ತವಾಗಿ ಪ್ರತಿಷಾಪಿಸಿದ ಎಂದು ದೇವಸ್ಥಾನ ಇತಿಹಾಸದ ಹಿನ್ನಲೆ ತಿಳಿದು ಬರುತ್ತದೆ.

ಈ ದೇವಾಲಯವು ವಾಸ್ತುಶಿಲ್ಪಿ ಕಲೆಗಳ ಶಿಖರವಾಗಿದೆ ಸುಂದರಗೋಪುರಸೂಕ್ಷ್ಮ ಕುಸುರಿ ಕೆತ್ತನೆಯಿಂದ ನಿರ್ಮಿಸಲಾಗಿದೆ, ದೇವಾಲಯ ಗರ್ಭಗೃಹದಲ್ಲಿ ಪ್ರತಿಷಾಪಿಸಿದ ಪ್ರತಿಮೆ ಸಾಕ್ಷತ್ ಶ್ರೀ ವೀಭದ್ರೇಶ್ವರನೇ ಕಣ್ಣೆದುರು ನಿಂತಂತೆ ಭಾಸವಾಗುತ್ತದೆ ಪ್ರತಿಮೆ ಅಷ್ಟೊಂದು ಸುಂದರವಾಗಿದ್ದು ಭಕ್ತರ ಭಾವುಕಕೊಳಿಸುತ್ತದೆ. ಗರ್ಭಗುಡಿಯಲ್ಲಿರುವ ದೇವರ ಮಂಟಪ ಕತ್ತಲೆಯಲ್ಲಿದ್ದರು ಈ ಮೂರ್ತಿಯಿಂದಾಗಿ ಸದಾ ಬೇಳಕು ಚಲ್ಲಿದಂತೆ ಕಂಡು ಬರುತ್ತದೆ. ಬೆಳದಿಂಗಳಂತೆ ಕಾಣುವ ಈ ದೃಶ್ಯ ಭಕ್ತರಿಗೆ ಸ್ವರ್ಗದಲ್ಲಿಂದತೆ ಭಾಸವಾಗುತ್ತದೆ. ಗರ್ಭಗುಡಿಯ ಮುಂಭಾಗದಲ್ಲಿ 8 ಕಲ್ಲಿನ ಕಂಬಗಳು, ಅದರ ಮುಂದೆ 16 ಕಂಬಗಳು, ಇದರ ಮೇಲೆ40 ಗಿಳಿಗಳು, 3 ಗೊಂಬೆ ಆಕಾರದ ಚಿತ್ರಗಳು ಮತ್ತು ಇದರ ಮುಂದೆ ಗೀಳಿಗಳು ಅದರ ಕೆಳಭಾಗದಲ್ಲಿ ಆಗಿನ ಕಾಲದಲ್ಲಿ ಕಲ್ಲಿನ ಗೋಲಾಕಾರದ ದೀಪಗಳಂತೆ ಶಿಲ್ಪಗಳು ಎದ್ದು ಕಾಣುತ್ತವೆ. ಮಾಹಾದ್ವಾರದ ಮುಂದೆ 16 ಕಂಬಗಳ ವಿಶಾಲವಾದ ಮಂಟಪವಿದೆ. ಗುಡಿಯ ಬಗ್ಗೆ ವಿಶೇಷವಾಗಿ ಹೇಳುವುದಾದರೆ ಸೂರ್ಯೋದಯದ ಮೊದಲು ಕಿರಣವು ಮಹಾದ್ವಾರದ ಮೂಲಕ ನಂದಿ ಕೊಂಬಿನ ಮೂಲಕ ಗರ್ಭಗುಡಿಯಲ್ಲಿರುವ ಶ್ರೀ ವೀರಭದ್ರೇಶ್ವರ ಬಲಭಾಗದ ಹೆಬ್ಬಟ್ಟಿನ ಮೇಲೆ ಬೀಳುತ್ತದೆ.

ಭಕ್ತರು ಗುಡಿಯೊಳಗೆ ಹೆಜೆಯಿಡುತ್ತಿದ್ದಂತೆಯೇ ಎದುರುಗಡೆ ದೇವರ ಪ್ರತಿಮೆ



ಕಂಡು ಭಕ್ತಿ ಉಕ್ಕಿ ಹರಿಯುತ್ತದೆ. ಗರ್ಭಗುಡಿಯ ಮುಂಭಾಗದಲ್ಲಿ ನಾಲ್ಕು ಕಲ್ಲಿನ ಕಂಬಗಳಿವೆ, ಎಡಭಾಗದಲ್ಲಿ ನಾಲ್ಕು ಕಲ್ಲಿನ ಕಂಬಗಳಿವೆ ಎಡಭಾಗಕ್ಕೆ ಭದ್ರಕಾಳಿ ಬಲಬಾಗಕ್ಕೆ ಸಣಅಮ ನಂದಿ ಪ್ರತಿಮೆ ಸ್ಥಾಪಿಸಲಾಗಿದೆ. ನಂದಿನಯ ಸುತ್ತಲೂ 16 ಸುಂದರ ಕುಸುರಿಯ ಕಂಬಗಳ ಮಂಟಪಗವಿ. ವಿಶೇಷವಾಗಿ ಹುಮನಾಬಾದ ಪ್ರತಿಯೊಬ್ಬ ಭಕ್ತ ದಿನಾಲೂ ದೇವರ ದರ್ಶನ ಮಾಡಿ ದೇವರ ಪ್ರಸಾದ ಹೂಗಳು ತೆಗೆದುಕೊಂಡು ತನ್ನ ದಿನನಿತ್ಯದ ವ್ಯಾಪಾರದ ಗಲ್ಲಾ ಪೆಟ್ಟಿಗೆಯಲ್ಲಿ ಹೂಗಳನ್ನು ಹಾಕುವದು ಭಕ್ತರ ಸಂಪ್ರದಾಯವಾಗಿದೆ. ಶ್ರೀ ವೀರಭದ್ರೇಶ್ವರನಧ್ಯಾನಮಾಡಿದಾಗ ಸ್ವರ್ಗಸದೃಶ್ಯ ಅನುಭವನ್ನುಂಟು ಮಾಡುತ್ತದೆ. ಎದ್ದು ಬರಲು ಮನಸ್ಸಾಗುವದಿಲ್ಲ ಎಂದು ಭಕ್ತರು ತಮ್ಮ ಅನುಭವ ಹೇಳುತ್ತಾರೆ.

ಮಂಟಪದ ಎದುರ ಎರಡು ಚಮತ್ಕಾರಿ ತ್ರಾಂತ್ರಿಕತೆಯಿಂದ ಎರಡು ಕೂಡಿದ ದೊಡ್ಡ ದೀಪಸ್ಥಂಬಗಳಿವೆ ಅದರಲ್ಲಿ ಬಲಭಾಗದ ದೀಪಸ್ಥಂಬಕ್ಕೆ ಸ್ಪರ್ಶಿಸಿ ಅಲ್ಲಾಡಿಸಬಹುದು. ಇನ್ನೊಂದು ಕಂಬ ಹಿಂದಿನವರು ಬಳಸಿರುವ ತಾಂತಿಕತೆ ಬೆರಗು ಹುಟ್ಟಿಸುವಂಥದ್ದು ಯಾವ ತಂತ್ರಾಜ್ಞಾನ ಬಳಸಿದ್ದಾರೆಂದು ತಿಳಿದು ಬರುವದಿಲ್ಲ.

ದೇವಾಲಯದ ಬಲಭಾಗಕ್ಕೆ ಕಲ್ಲಿನಿಂದನಿರ್ಮಿಸಲಾದಸುಂದರ ಪುಷ್ಕರಣಿಯಿದೆ ಇದರಲ್ಲೊಂದು ನಂದಿ ವಿಗ್ರಹವೂ ಇದೆ ಇದರ ಮಂಭಾಗದಲ್ಲಿ ದೇವಾಲಯದ ಗೌರವ ಕಾರ್ಯದರ್ಶಿ ಲಿಂ, ಹಾವಗಪ್ಪಪಾಟೀಲರನೇತೃತ್ವದಲ್ಲಿ ನಿರ್ಮಿಸಲ್ಪಟ್ಟ ಭವ್ಯ ಕಲ್ಯಾಣ ಮಂಟಪವಿದೆ. ಕಲ್ಯಾಣ ಮಂಟಪದಲ್ಲಿ ಭಕ್ತಾಧಿಗಳು ಮದುವೆ ಮುಂತಾದ ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡುತ್ತಾರೆ. ಕಲ್ಯಾಣಮಂಟಪದಬಲಭಾಗದಲ್ಲಿ ಪುರಾತನ ಸುಂದರ ಕೆತ್ತನೆಯ ಕಾಷ ಶಿಲ್ಪದ ಹೆಬ್ಬಾಗಿಲಿದೆ.

ಪೂರ್ವ ದಕ್ಕಿನಲ್ಲಿ ನೈಸರ್ಗಿಕ ಅರಣ್ಯ ಪ್ರದೇಸ ವಿದ್ದು, ಅಲ್ಲಿಂದ ಶ್ರೀ ವೀರಭದ್ರೇಶ್ವರ ದೇವಸ್ಥಾನದ ಶಿಖರ ಅದ್ಭುತವಾಗಿ ಕಾಣುತ್ತದೆ ಚಾಲುಕ್ಯ ಶೈಲಿಯಲ್ಲಿ ನಿರ್ಮಾಣವಾಗಿರುವ ಗೋಪರವನ್ನು ಯಾವ ದಿಕ್ಕಿನಿಂದ ನೋಡಿದರು ಶಿಖರದ ಸೌಂದರ್ಯ ಒಂದೆ ರೀತಿಯಾಗಿ ಕಾಣುವದು ಇದರ ವಿಶೇಷ.

ದೇವಾಲಯದಲ್ಲಿ ಶ್ರೀ ವೀರಭದ್ರೇಶ್ವರನಿಗೆ ತ್ರಿಕಾಲ ಪೂಜೆ ನಡೆಯುತ್ತದೆ. ಶ್ರಾವಣ ಮಾಸದಲ್ಲಿ ಸಂಗೀತ ಸೇವೆ ರುದ್ರಾಭೀಷೇಕ, ಪ್ರತಿನಿತ್ಯ ದಾಸೋಹ ಪ್ರತಿವರ್ಷ ಶ್ರೀ ವೀರಭದ್ರೇಶ್ವರ ಜಾತ್ರಾ ಮಹೊತ್ಸವ ವಿಜ್ರಭಣೆಯಿಂದ ಜರುಗುತ್ತವೆ. ಪ್ರತಿ ವರ್ಷ ಜಾತ್ರೆಯು ಜನೆವರಿ 10ರಂದು ಮುತ್ಯದೆಯರು ಶ್ರೀ ವೀರಭದ್ರೇಶ್ವರನಿಗೆ ಎಣ್ಣೆ ಹಚ್ಚುವ ಕಾರ್ಯಕ್ರಮದೊಂದಿಗೆ ಮದುಮಗನ ಅವತಾರದೊಂದಿಗೆ ಆರಂಭವಾಗುತ್ತವೆ. ಮಕರ ಸಂಕ್ರಾತಿಯಂದು ಶಲ್ಯ ಸುಡುವ ಕಾರ್ಯಕ್ರಮ ನಡೆಯುತ್ತದೆ. ಮುಂದೆ ನಿತ್ಯ ನಗರದಲ್ಲಿ ವೀರಭದ್ರೇನ ಮೆರವಣಿಗೆಗೆ ನಡೆಯುತ್ತದೆ. ದಿ. 27 ರಂದು ಸಮಾರೋಪಗೊಳ್ಳುತ್ತದೆ.

ಶ್ರೀ ವೀಭದ್ರೇಶ್ವರನಿಗೆ ದಿ.15 ರಿಂದ 19ರ ವರೆಗೆ ಆನೆಯ ಮೆರವಣಿಗೆ, ದಿ 20ರಿಂದ 24ರ ವರೆಗೆ ಉಚ್ಚಯಿ ಮೆರವಣಿಗೆ ದಿ. 25 ರಂದು ಅಗ್ನಿ ಪೂಜೆ. ದಿ. 26 ರಂದು ಮಹಾರಥೋತ್ಸವ ಹಾಗೂ 27 ರಂದು ಸಂಗೀತ ದರ್ಬಾರ ನಡೆಯುತ್ತದೆ. ಜಾತ್ರೆಯಿಂದಾಗಿ ದಿನ. 10ರಿಂದಲ್ಲೆ ಹುಮನಾಬಾದ ಪಟ್ಟಣದಲಿ ಹಬ್ಬದ ವಾತವಣ ನಿರ್ಮಾವಾಗುತ್ತದೆ ಮೆರವಣಿಗೆ ಬರುವ ದಾರಿಯುದ್ದಕ್ಕೂ ಪ್ರತಿಯೊಂದು ಮನೆಯ ಮುಂದೆ ರಂಗು ರಂಗೀನ ರಂಗೋಲಿ ಹಾಕಿ ಮೇರವಣಿಗೆಯನ್ನು ಸ್ವಾಗತಿಸುವ ಪರಂಪರೆ ಇಂದಗೂ ಇದೆ. ಮೇರವಣಿಗೆಯಲ್ಲಿ ಭಾಗವಹಿಸುವ ಭಕ್ತಾದಿಗಳು ಬಿಳಿ ಟೋಪಿ ಮೈಮೇಲೆ ಶಲ್ಯಗಳನ್ನು ಧರಿಸುತ್ತಾರೆ ಪ್ರತಿಯೊಬ್ಬರು ಭಕ್ತರನೂ ದೇವರಿಗೆ ಶಲ್ಯ ಟೆಂಗು, ಹೂಗಳನ್ನು ಅರ್ಪಣೆ ಮಾಡುವುದು ಇಲ್ಲಿನ ಪದ್ಧತಿ ಜಾತ್ರೆಯ ಅಂಗವಾಗಿದೆ. ದೇವಸ್ಥಾನದಲ್ಲಿ ಗಾಯನ ಕೀರ್ತನೆ ಪ್ರವಚನ ಭಜನೆ ಒಡವು ಹೇಳುವುದು ಇಲ್ಲಿನ ವಿಶೇಷ ಕಾರ್ಯಕ್ರಮಗಳಾಗಿವೆ.

ರಥೋತ್ಸವದ ದಿನ ಕುಸ್ತಿ ಪಂದ್ಯಗಳು ಗೀಗಿ ಪದಗಳು ಗ್ರಾಮೀಣ ಜನರನ್ನು ಆಕರ್ಷಿಸಿದರೆ ಇದೇ ಸಂದರ್ಭದಲ್ಲಿ ಮುದ್ದು ಸುಡುವ ಕಾರ್ಯಕ್ರಮ ಸಕಲ ಭಕ್ತರನ್ನು ರಂಜಿಸುತ್ತದೆ. ಈ ಜಾತ್ರೆಯಲ್ಲಿ ಅಗ್ಗಿ ತುಳಿಯುವ ಸೇವೆಗೆ ಅತ್ಯಂತ ಮಹತ್ವವಿದೆ ಅಗ್ಗಿ ಕುಂಡುದಲಿ ಹರಕೆ ಹೊತ್ತ ಭಕ್ತರು ಅಪಾರ ಸಂಖ್ಯೆಯಲ್ಲಿ ಬಾಗವಹಿಸುತ್ತಾರೆ. ಜಾತ್ರೆಯಲ್ಲಿ ವಸ್ತು ಪ್ರದರ್ಶನ ಸಾಂಸ್ಕೃತಿಕ ಕಲಾ ತಂಡಗಳಿಂದ ರಂಗೇರುತ್ತದೆ ಹುಮನಾಬಾದ ಹಾಗೂ ಸುತ್ತಮುತ್ತಲಿನ ಗ್ರಮಗಳ ಹಾಗೂ ನೆರೆಯ ಆಂಧ್ರ ಪ್ರದೇಸ ಮತ್ತು ಮಹಾರಾಷ್ಟ್ರಗಳಲ್ಲಿ ಸಹಸ್ರಾರು ಕುಟುಂಬಗಳಿಗೆ ಶ್ರೀ ವೀರಭದ್ರೇಶ್ವರ ಕುಲದೇವತೆ ಆಗಿರುವುದರಿಂದ ಜಾತ್ರೆಯ ಸಂದರ್ಭದಲ್ಲಿ ಅವರು ಯಾವುದೇ ಊರಲಿದ್ದರೂ ಹುಮನಾಬಾದಕ್ಕೆ ಬಂದು ಜಾತ್ರೆಯಲ್ಲಿ ಭಾಗವಹಿಸುತ್ತರೆ. ಶ್ರೀ ವೀರಭದ್ರೇಶ್ವರನ್ನು ಅತ್ಯಂತ ಜಾಗೃತ ದೇವತೆ.

ಪ್ರತಿಯೊಬ್ಬರು ಮನೋಕಾಮನೆಗಳ್ಳು ಈಡೇರಿಸುತ್ತಾನೆ ಎಂಬ ನಂಬಿಕೆ ಬಕ್ತರದು ಜಾತ್ರಗೆ ಬಂದು ದರ್ಶನ ಪಡೆದರೇನೇ ತಮ್ಮ ಜೀವ ಸಾರ್ಥಕ ಎಂಬ ಭಾವ



ಬಾಬುರಾರ ಪರಮಶೆಟ್ಟಿ
ಲೇಖಕರು,
ಜಾತ್ರೆಯ ಸಂಗ್ರಹಕಾರ,
ಸಮಾಜ ಸೇವಾ
ಕಾರ್ಯಕರ್ತರು
ಹುಮನಾಬಾದ ಮೋ,
9986592109

# ಹೆಚ್ಚಿನ ಸಂಖ್ಯೆಯಲ್ಲಿ ಈ ಉತ್ಸವದಲ್ಲಿ ಭಾಗವಹಿಸಲು ಕರೆ.




ಬಸವಕಲ್ಯಾಣ :- ಶ್ರೀ ಕೊತ್ತಲ ಬಸವೇಶ್ವರ ಭಾರತಿಯ ಶಿಕ್ಷಣ ಸಮಿತಿ ಹಾಗೂ ವಿಕಾಸ ಅಕಾಡೆಮಿ ಕಲಬುರ್ಗಿ ಮತ್ತು ಭಾರತ್ ವಿಕಾಸ ಸಂಗಮ್ ಇವರ ನೇತೃತ್ವದಲ್ಲಿ ನಡೆಯಲಿರುವ 7ನೇ ಭಾರತೀಯ ಸಂಸ್ಕೃತಿ ಉತ್ಸವದ ಪ್ರಚಾರದ ನಿಮಿತ್ಯವಾಗಿ ಇಲ್ಲಿಗೆ ಆಗಮಿಸಿದ ಭಾರತೀಯ ಸಂಸ್ಕೃತಿ ಉತ್ಸವದ ಬಸವ ರಥಯಾತ್ರೆಗೆ ನಗರದ ಶ್ರೀ ಬಸವೇಶ್ವರ ದೇವಸ್ಥಾನದ ಹತ್ತಿರ ಸ್ವಾಗತಿಸಲಾಯಿತು. ತಿಪುರಾಂತಿನ ಪೂಜ್ಯ ಶ್ರೀ ಡಾ. ಅಭಿನವ ಘನಲಿಂಗರುದ್ರಮುನಿ ಶಿವಾಚಾರ್ಯರು ರಥಕ್ಕೆ ಪೂಜೆ ಸಲ್ಲಿಸಿ ಮಾತನಾಡಿ ಜನೆವರಿ 29 ರಿಂದ ಫೆಬ್ರವರಿ 6 ರವರೆಗೆ ಸೆಡಂನಲಿ ನಡೆಯಲಿರುವ ಭಾರತೀಯ ಸಂಸ್ಕೃತಿ ಉತ್ಸವಕೆ ಎಲ್ಲಾ ಸಾರ್ವಜನಿಕರು ಆಗಮಿಸಿ ಕಾರ್ಯಕ್ರಮದ ಸದುಪಯೋಗ ಮಾಡಿಕೊಳ್ಳಬೇಕು ಎಂದ ಅವರು ಇದು ಈ ಭಾಗದ ಕುಂಬ ಮೇಳ ವಾಗಿದೆ ಎಂದರು. ಬಸವೇಶ್ವರ ದೇವಸ್ಥಾನ ಪಂಚಕಮಿಟಿ ಅಧ್ಯಕ್ಷರಾದ ಬಸವರಾಜ್ ಕೊರಕೆ ಚಾಲನೆ ನೀಡಿದರು. ಉಪಾಧ್ಯಕ್ಷರಾದ ಮಲ್ಲಿಕಾರ್ಜುನ್ ಚಿರಡೆ. ಕಾರ್ಯದರ್ಶಿಗಳಾದ ಶ್ರೀಕಾಂತ್ ಬಡದಾಳೆ ಹಾಗೂ ಜಗನ್ನಾಥ ಪತಂಗೆ, ಸೂರ್ಯಕಾಂತ್ ಶೀಲವಂತ, ರಮೇಶ್ ಧಬಾಲೆ, ಸುನಿಲ್ ಮದಕಟ್ಟಿ, ಶಿವರಾಜ್ ತಾಟೆ, ಭೀಮಣ್ಣ ಮೈನಾಳೆ ಖಲೀಲ್ ಗೊಬ್ರೆ. ರಾಜಪ್ಪ ಬಿರಾದಾರ್. ಬಸವರಾಜ್ ಅಷ್ಟಗಿ ,ರಾಜು ಮಮ್ಮಾ, ರಾಜಶೇಖರ್ ಶೇರಿಕಾರ ಹಾಗೂ ರಾಷ್ಟ್ರಕವಿ ಕುವೆಂಪು ಜ್ಞಾನಭಾರತಿ ವಿದ್ಯಾ ವಿನಯ ನೋಬೆಲ್ ಪಬ್ಲಿಕ್ ಶಾಲೆ ಶ್ರೀ ಬಸವೇಶ್ವರ ಶಾಲೆ ಶಾಂತಿನಿಕೇತನ ಶಾಲೆ ಮಕ್ಕಳು ಭಾಗವಹಿಸಿದ್ದರು ಕಾರ್ಯಕ್ರಮಕ್ಕೆ ಪ್ರಕಾಶ್ ಬಿರಾದರ್ ಸ್ವಾಗತ ಕೋರಿದರು ಸಂಗಮೇಶ್ ತೊಗರಖೇಡೆ ನಿರೂಪಿಸಿದರು. ರಮೇಶ್ ಧಬಾಲೆ ವಂದಿಸಿದರು.



ಚಿಟಗುಪ್ಪ; ತಾಲೂಕಿನ ಮುತ್ತಂಗಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಸವಿತಾಬಾಯಿ ಭಯ್ಯಾ ಅವರಿಗೆ ಮಲ್ಲಮ್ಮ ನುಡಿ ಪ್ರಾದೇಶಿಕ ಕನ್ನಡ ದಿನ ಪತ್ರಿಕೆಯ ಕ್ಯಾಲೆಂಡರ್ ಪತ್ರಕರ್ತ ರಾಜಕುಮಾರ ಆರ್ ಹಡಪದರವರು ನೀಡಿರುವುದನ್ನು ಕಾಣಬಹುದು. ಜೊತೆಯಲ್ಲಿ ವರದಿಗಾರರಾದ ಸಜೀಶ ಲಂಬುನೂರ್, ಸೈಯದ್ ಅಜೀಮ ಇದ್ದರು.

## ಮಂಡಲಗೇರಿಯ ಸರ್ಕಾರಿ ಪ್ರೌಢಶಾಲೆಯ ಶಾಲಾ ಸುಧಾರಣಾ ಸಮಿತಿ ರಚನೆ




ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಕುಕನೂರ ತಾಲೂಕಿನ ಮಂಡಲಗಿರಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ನೂತನವಾಗಿ ಶಾಲಾ ಸುಧಾರಣ ಸಮಿತಿಯನ್ನು ರಚಿಸಲಾಗಿದ್ದು ಸಮಿತಿಯ ಅಧ್ಯಕ್ಷರನ್ನಾಗಿ ಸುರೇಶ್ ನಾಗಪ್ಪ ದಳವಾಯಿ ಅವರನ್ನು ಹಾಗೂ ಸದಸ್ಯರನ್ನಾಗಿ ನಾಗವ ಹರಿಜನ, ರಮೇಶ್ ಚಲವಾದಿ, ಪಾಂಡಪ್ಪ ತಳವಾರ, ಬಿಬಿಜಾನ್ ಜಮಕಾನ, ಕಲ್ಲಪ್ಪ ಗಿಡ್ಡರ, ಪ್ರಹ್ಲಾದ ಮೇಟಿ, ವಿದ್ಯಾಸಸಿ, ಮಾರುತಿ ಗೊಲ್ಲರ ಇವರನ್ನು ಸದಸ್ಯರನ್ನಾಗಿ ಆಯ್ಕೆ ಮಾಡಲಾಗಿದ್ದು ಸಮಿತಿಯ ಕಾರ್ಯದರ್ಶಿಯಾಗಿ ಶಾಲೆಯ ಮುಖ್ಯೋಪಾಧ್ಯಾಯ ನಾಗರಾಜ ಜಗತಾಪ ಅವರನ್ನು ನೇಮಿಸಲಾಗಿದೆ. ತನಿತಿಯ ನಾಮ ನಿರ್ದೇಶಕ ಸದಸ್ಯರನ್ನಾಗಿ ಮಹೇಶ ಉಪ್ಪಾರ, ಮಲ್ಲಯ್ಯ ಗದುಗಿನ, ಸಂಜೀವ್ ಕುಮಾರ್ ಗೊಲ್ಲರ್ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಮುಖ್ಯೋಪಾಧ್ಯಾಯ ನಾಗರಾಜ ಜಗತಾಪ ತಿಳಿಸಿದರು.







# ಪದ್ಮಶ್ರೀ ಪ್ರಶಸ್ತಿ ಪಡೆದ ಮೂವರು ಕನ್ನಡಿಗರು

ನವದೆಹಲಿ:ಜ.25: 76ನೇ ಗಣರಾಜ್ಯೋತ್ಸವ ಹಿನ್ನೆಲೆಯಲ್ಲಿ ಪದ್ಮಪ್ರಶಸ್ತಿಗಳ ವಿಜೇತಪಟ್ಟಿಯನ್ನು ಕೇಂದ್ರ ಸರ್ಕಾರ ಪ್ರಕಟಿಸಿದೆ. ಈ ಬಾರಿ ಪದ್ಮ ಪ್ರಶಸ್ತಿ ಪುರಸ್ಕೃತರ ಪಟ್ಟಿಯಲ್ಲಿ ಕನ್ನಡಿಗರು ಸೇರಿದ್ದಾರೆ.

ವೆಂಕಪ್ಪ ಅಂಬಾಜೀ ಸುಗಟ್ಕೇರ್, ಡಾ. ವಿಜಯಲಕ್ಷ್ಮಿ ದೇಶಮಾನೆ, ಹಾಗೂ ಭೀಮವ್ವ ದೊಡ್ಡಬಾಲಪ್ಪಗೆ ಪದ್ಮ ಪ್ರಶಸ್ತಿ ಲಭಿಸಿದೆ.ವೆಂಕಪ್ಪ ಅಂಬಾಜೀ ಸುಗಟ್ಕೇರ್:

ಕರ್ನಾಟಕದ ಜಾನಪದ ಗಾಯಕರಾಗಿ ಜನಪ್ರಿಯತೆ ಪಡೆದ 81 ವರ್ಷದ ವೆಂಕಪ್ಪ ಅಂಬಾಜೀ ಸುಗಟ್ಕೇರ್ ಅವರಿಗೆ ಪದ್ಮ ಪ್ರಶಸ್ತಿ ಲಭಿಸಿದೆ. 2024 ಫೆಬ್ರವರಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ತಮ್ಮ 110ನೇ ಮನ್ ಕಿ ಬಾತ್‌ನಲ್ಲಿ ವೆಂಕಪ್ಪ ಅಂಬಾಜೀ ಸುಗಟ್ಕೇರ್ ಹೆಸರನ್ನು ಉಲ್ಲೇಖಿಸಿದ್ದರು.

ಭೀಮವ್ವ ದೊಡ್ಡಬಾಳಪ್ಪ:

ಕೊಪ್ಪಳಮೂಲದತೊಗಲುಗೊಂಬೆಯಾಟದ ಹಿರಿಯ ಕಲಾವಿದ ಭೀಮವ್ವ ದೊಡ್ಡಬಾಳಪ್ಪ ಅವರಿಗೆ ಪದ್ಮಶ್ರೀ ಪ್ರಶಸ್ತಿಲಭಿಸಿದೆ.ಡಾ.ವಿಜಯಲಕ್ಷ್ಮೀ ದೇಶಮಾನೆ:ಕಲಬುರಗಿ ಮೂಲದ ದೇಶದ ಹೆಸರಾಂತ ಕ್ಯಾನ್ಸರ್ ತಜ್ಞೆ, ರೋಗಿಗಳ ಪಾಲಿನ ಸಾಕ್ಷಾತ್ ಧನ್ವಂತರಿ ಎಂದೇ ಹೆಸರುವಾಸಿಯಾಗಿರುವ ಡಾ.ವಿಜಯಲಕ್ಷ್ಮೀ ದೇಶಮಾನೆ ಅವರಿಗೆ ಪದ್ಮಶ್ರೀ ಪ್ರಶಸ್ತಿ ಲಭಿಸಿದೆ.

1980ರಲ್ಲಿ ಹುಬ್ಬಳ್ಳಿಯ ಕಿಮ್ಸ್‌ನಲ್ಲಿ ವೈದ್ಯಕೀಯ ಪದವಿ ಪಡೆದರು.1985ರಲ್ಲಿ ಬಳ್ಳಾರಿಯ ವೈದ್ಯಕೀಯ ಕಾಲೇಜಿನಲ್ಲಿ ಶಸ್ತ್ರಚಿಕಿತ್ಸೆಯಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದು 1985ರಲ್ಲಿ ಕಿದ್ವಾಯಿ ಸ್ಮಾರಕ ಕ್ಯಾನ್ಸರ್ ಆಸ್ಪತ್ರೆಗೆ ಸೇರಿ–ಕೊಂಡಿದ್ದರು.1989ರಲ್ಲಿ ಮುಂಬೈನ ಟಾಟಾ ಸ್ಮಾರಕ ಆಸ್ಪತ್ರೆಯಲ್ಲಿ ಕ್ಯಾನ್ಸರ್ ಶಸ್ತ್ರಚಿಕಿತ್ಸೆಯ ತರಬೇತಿ ನಂತರ ಅವರು 1993ರಲ್ಲಿ ಭಾರತೀಯ ಶಸ್ತ್ರಚಿಕಿತ್ಸಕರ ಸಂಘದ ಎ???ಎಐಎಸ್ ಫೆಲೋಶಿ???ಗೆ ಪಾತ್ರರಾದರು. ಕಿದ್ವಾಯಿ ಸ್ಮಾರಕ ಕ್ಯಾನ್ಸರ್ ಸಂಸ್ಥೆಯ ಶಸ್ತ್ರಚಿಕಿತ್ಸಾ ವಿಭಾಗದ ಪ್ರಾಧ್ಯಾಪಕಿ, ಮುಖ್ಯಸ್ಥೆ, ಸಂಸ್ಥೆಯ ನಿರ್ದೇಶಕಿಯೂ ಆದರು. ಸ್ತನ ಕ್ಯಾನ್ಸರ್ ಕುರಿತು ಜಾಗೃತಿ ಅಭಿಯಾನ ಆರಂಭಿಸಿದ್ದರು. ಕರ್ನಾಟಕ ಕ್ಯಾನ್ಸರ್ ಸೊಸೈಟಿಯ ಉಪಾಧ್ಯಕ್ಷೆಯಾಗಿದ್ದರು. ಇವರಿಗೆ ರಾಜ್ಯೋತ್ಸವ ಪ್ರಶಸ್ತಿ, ಮಹಿಳಾ ವಿಶ್ವವಿದ್ಯಾಲಯದ ಗೌರವ ಡಾಕ್ಟ–ರೇಟ್, ಅಂತಾರಾಷ್ಟ್ರೀಯ ವಲಯ ರಾಷ್ಟ್ರೀಯರತ್ನ, ಕೆಂಪೇಗೌಡ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.







Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330. Editor: Ramesh Reddy, Office Ph. No: +91 9449732000.